ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 29 ಮಂಗಳವಾರ 2025

₹4

46

ಸಂಪುಟ: 46 | ಸಂಚಿಕೆ: 14 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಸನ್ಮಾನ್ಯ ಶ್ರೀ ವಿ.ಶ್ರೀನಿವಾಸಪ್ರಸಾದ್ ಅವರ

1ನೇ ವರ್ಷದ ಪುಣ್ಯಸ್ಮರಣೆ



“ಜವಾಬ್ದಾರಿಯಿಂದ ಬದುಕಲು ಕಲಿಸಿ
ಇಷ್ಟಪಟ್ಟಿರುವುದೆಲ್ಲವನ್ನು ಇಲ್ಲ ಅನ್ನದೇ ಕೊಡಿಸಿ
ಜೀವಿಸಲು ಶ್ರೀಮಂತ ಗುಣಗಳನ್ನು ತಿಳಿಸಿಕೊಟ್ಟು
ಸಮಯಕ್ಕೆ ತಕ್ಕ ಹಾಗೆ ಸಂಬಂಧಗಳು ಬದಲಾದಾಗ
ಧೈರ್ಯ ಹಾಗೂ ಸ್ವಾಭಿಮಾನದಿಂದ ಬದುಕಲು ಕಲಿಸಿಕೊಟ್ಟ
ಮಹಾನ್ ವ್ಯಕ್ತಿ ಇಂದು ನೀವು ನಮ್ಮನ್ನು ಅಗಲಿ ಒಂದು ವರ್ಷ ಕಳೆದಿದೆ.
ಇಂದಿಗೂ, ಎಂದೆಂದಿಗೂ ನಿಮ್ಮ ನೆನಪಿನಲ್ಲಿ ಇರುವ,”

ಇಂತಿ ನಿಮ್ಮ ಪ್ರೀತಿಯ

ಡಿ.ಭಾಗ್ಯಲಕ್ಷ್ಮೀ ಶ್ರೀನಿವಾಸಪ್ರಸಾದ್ (ಪತ್ನಿ)
ಪ್ರತಿಮಾ ಪ್ರಸಾದ್, ಪೂರ್ಣಿಮಾ ಪ್ರಸಾದ್, ಪೂನಂ ಪ್ರಸಾದ್ (ಮಕ್ಕಳು)
ಪಿ.ದೇವರಾಜ್, ಬಿ.ಹರ್ಷವರ್ಧನ್, ಡಾ.ಮೋಹನ್ ಎನ್.ಎಸ್. (ಅಳಿಯಂದಿರು)
ದೇಕ್ಷ ದೇವರಾಜ್, ಧಾರ್ಯ ಹರ್ಷವರ್ಧನ್, ಸಾಂಚಿ ದೇವರಾಜ್, ದಿತಿ.ಎಂ.ಪ್ರಸಾದ್, ದೀತ್ಯ. ಎಂ.ಪ್ರಸಾದ್ (ಮೊಮ್ಮಕ್ಕಳು)

ಶೈಕ್ಷಣಿಕ ಸಾಲ ಪಡೆಯಲು ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವತಿಯಿಂದ 2025–26ನೇ ಸಾಲಿಗೆ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖ್, ಪಾರ್ಸಿ ಜನಾಂಗದವರಿಗೆ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದೆ. https://kmdconline.karnataka.gov.in/ ಮೂಲಕ ಅರ್ಜಿ ಸಲ್ಲಿಸಬಹುದು.

ನಿಧನ



ಎನ್.ಗೋಪಾಲ್

ಮೈಸೂರು,ಏ.28–ಮೈಸೂರಿನ ಕೆ.ಆರ್.ಮೊಹಲ್ಲಾ ನಾಲಾಬೀದಿ ನಿವಾಸಿ ಎನ್.ಗೋಪಾಲ್(80) ಅವರು ಸೋಮವಾರ ನಿಧನರಾದರು. ಅವರು ಪತ್ನಿ ಭಾಗ್ಯಮ್ಮ, ಕಾಂಗ್ರೆಸ್ ಮುಖಂಡ ಶ್ರೀನಾಥ್ ಬಾಬು ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಏ.29) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ.



ನೆಲ್ಲೀರಾ ಚೋಂದಮ್ಮ

ಮೈಸೂರಿನ ಬೋಗಾದಿಯ ಆಲ್‌ಫೈನ್ ಬಡಾವಣೆ ಮನೆ ನಂ. 10ರ ನಿವಾಸಿ ದಿವಂಗತ ಪೂಣಚ್ಚ ಅವರ ಪತ್ನಿ ನೆಲ್ಲೀರಾ ಚೋಂದಮ್ಮ (93) ಸೋಮವಾರ ಬೆಳಗ್ಗೆ ನಿಧನರಾದರು.

ಮೂಲತಃ ಕೊಡಗಿನ ಪೊನ್ನಂಪೇಟೆ ತಾಲೂಕಿನ ಚೂರಿಕಾಡ್ ಗ್ರಾಮದವರಾದ ಇವರು ಪುತ್ರರಾದ ಸುಬ್ಬಯ್ಯ (ಶೇಷು) ಮತ್ತು ಸೋಮಣ್ಣ (ಸುಭಾಷ್), ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎನ್.ಆರ್.ಶ್ರೀಧರ

ನಂಜನಗೂಡಿನ ಕುರುಬಗೇರಿಯ ಲೇಟ್ ಪಿ.ರಾಚಯ್ಯ ಅವರ ಪುತ್ರ ಎನ್.ಆರ್.ಶ್ರೀಧರ (48) ಅನಾರೋಗ್ಯದಿಂದ ನಿಧನರಾದರು. ಮೃತರು ಸಹೋದರ ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಕುಟುಂಬದವರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಕಪಿಲಾ ನದಿ ತೀರದ ಹದಿನಾರು ಕಾಲು ಮಂಟಪದ ಹತ್ತಿರ ಮಂಗಳವಾರ (ಏ.29) ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮಾಧುರಿ ನಾಯ್ಡು

ಕರ್ನಾಟಕ ಸ್ಟೇಟ್ ರಿಸರ್ವ್ ಪೊಲೀಸ್ 5ನೇ ಬೆಟಾಲಿಯನ್‌ನ ನಿವೃತ್ತ ಕಮಾಂಡೆಂಟ್ ಮತ್ತು ಮೈಸೂರಿನ ಕೆ.ಸಿ.ಲೇಔಟ್ ನಿವಾಸಿ ಎಂ.ಬಿ.ನಾಯ್ಡು ಅವರ ಪತ್ನಿ ಮಾಧುರಿ ನಾಯ್ಡು (63) ಭಾನುವಾರ ನಿಧನರಾದರು. ಮೃತರು ಪತಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ಪೀಕರ್ ಆಡಳಿತ ಪಕ್ಷದ ಕೈಗೊಂಬೆಯಾಗಿ ವರ್ತಿಸಬಾರದು

● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಗ್ರಹ ● 18 ಶಾಸಕರ ಅಮಾನತು ಸಂಬಂಧ ರಾಜ್ಯಪಾಲರಿಗೆ ದೂರು

ಬೆಂಗಳೂರು,ಏ.28(ಕೆಎಂಶಿ)– ವಿಧಾನಸಭಾಧ್ಯಕ್ಷರು ಆಡಳಿತ ಪಕ್ಷದ ಕೈಗೊಂಬೆಯಾಗಿ ವರ್ತಿಸಬಾರದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ಬಿಜೆಪಿಯ 18 ಶಾಸಕರ ಅಮಾನತು ತಮ್ಮೊಬ್ಬರ ತೀರ್ಮಾನ ಅಲ್ಲ ಎಂಬುದಾಗಿ ಮಂಗಳೂರಿನಲ್ಲಿ ಸ್ಪೀಕರ್ ಯು.ಟಿ.ಖಾದರ್ ಹೇಳಿಕೆ ನೀಡಿರುವುದು ಆಡಳಿತ ಪಕ್ಷದ ಕೈಗೊಂಬೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆಡಳಿತ ಪಕ್ಷಕ್ಕೆ ಮನವರಿಕೆ ಮಾಡುವ ಮೂಲಕ ಸ್ಪೀಕರ್ ತಮ್ಮ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಆಗ್ರಹಿಸಿದರು.

ಇದಕ್ಕೂ ಮುನ್ನ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ಶಾಸಕರ ನಿಯೋಗ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, ಪಕ್ಷದ 18 ಶಾಸಕರನ್ನು ವಿಧಾನಸಭೆ ಕಲಾಪದಿಂದ 6 ತಿಂಗಳು ಅಮಾನತು ಮಾಡಿರುವ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಿ, ಸರ್ಕಾರಕ್ಕೆ ಬುದ್ಧಿ ಹೇಳಬೇಕೆಂದು ಕೋರಿತು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ರಾಜ್ಯ ಸರ್ಕಾರದ ಸಂವಿಧಾನ ವಿರೋಧಿ ನಡೆಗೆ ಸ್ಪೀಕರ್ ಬೆಂಬಲ ಕೊಡಬಾರದು. ಬಿಜೆಪಿಯ 18 ಶಾಸಕರ ಅಮಾನತು ಹಿಂಪಡೆಯುವಂತೆ ಹಲವಾರು ಬಾರಿ ಭೇಟಿ ಮಾಡಿ ಮನವಿ ಮಾಡಿದರೂ ಅಮಾನತು ವಾಪಸು ಹಿಂಪಡೆದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಅವಿವೇಕಿತನದ ಮಾತು: ಕಾಶ್ಮೀರದ ಪಹಲ್ಗಾಮ್‌ನ ಕರ್ನಾಟಕದವರೂ ಸೇರಿದಂತೆ ಭಾರತದ 26 ಪ್ರವಾಸಿಗರನ್ನು ಹತ್ಯೆ ಮಾಡಿದ ಪಾಕಿಸ್ತಾನದ ಭಯೋತ್ಪಾದಕರ ಕೃತ್ಯಕ್ಕೆ ಪ್ರತೀಕಾರವಾಗಿ ಆ ದೇಶದ ಮೇಲೆ ಯುದ್ಧ ಮಾಡಬಾರದೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ಅವಿವೇಕತನದ ಮಾತು.

ಪಾಕಿಸ್ತಾನದ ವಿರುದ್ಧ ಯುದ್ಧ ಬೇಡ ಎಂಬ ಮುಖ್ಯಮಂತ್ರಿ ಹೇಳಿಕೆಗೆ ಸಚಿವರಾದ ಆರ್.ಬಿ.ತಿಮ್ಮಾಪುರ, ಸಂತೋಷ್ ಲಾಡ್ ಬೆಂಬಲ ನೀಡುವ ಧಾಟಿಯಲ್ಲಿ ಮಾತನಾಡಿದ್ದಾರೆ. ಭಯೋತ್ಪಾದನಾ ದಾಳಿಗೆ ಪ್ರತೀಕಾರವಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಂಡರೂ ಬೆಂಬಲ ಕೊಡುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಪಾಕ್ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಅಗತ್ಯ ಎಂಬುದಾಗಿ ಕಾಂಗ್ರೆಸ್ಸಿನ ಹಿರಿಯ ಸಂಸದ ಶಶಿ ತರೂರ್ ಸಹಾ ಹೇಳಿರುವುದನ್ನು ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟದ ಸದಸ್ಯರು ಅರ್ಥ ಮಾಡಿಕೊಳ್ಳಬೇಕು, ಅವಿವೇಕತನದ ಹೇಳಿಕೆ ಬಿಟ್ಟು ದೇಶದ ಪರವಾಗಿ ನಿಲ್ಲಬೇಕು ಎಂದು ಆಗ್ರಹಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಶಾಸಕರ ಅಮಾನತು ಸಂವಿಧಾನಬಾಹಿರ ಎಂಬ ಬಗ್ಗೆ ರಾಜ್ಯಪಾಲರ ಗಮನ ಸೆಳೆದಿದ್ದೇವೆ, ಸ್ಪೀಕರ್ ಜೊತೆ ಮಾತನಾಡುವುದಾಗಿ ಹಾಗೂ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಭರವಸೆ ನೀಡಿದ್ದಾರೆ. ರೈಲ್ವೆ ನೇಮಕಾತಿ ಪರೀಕ್ಷೆ ವೇಳೆ ತಾಳಿ ಮತ್ತು ಜನಿವಾರದ ಉಲ್ಲೇಖ ಮಾಡಿದ್ದು, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಜೊತೆ ಮಾತನಾಡಿದ್ದೇವೆ, ರೈಲ್ವೆ ಸಚಿವರು ಇಂತಹ ಕ್ರಮ ಕೈಗೊಳ್ಳದಂತೆ ಸೂಚಿಸಿದ್ದಾರೆಂಬ ವಿವರ ನೀಡಿದ್ದಾರೆ ಎಂದರು.

ಮೈಸೂರಲ್ಲಿ ಮುಂದಿನ ವರ್ಷ 'ಪರಿದೃಶ್ಯ' ಚಲನಚಿತ್ರೋತ್ಸವ; ಕಿರುಚಿತ್ರ, ಸಾಕ್ಷ್ಯಚಿತ್ರಗಳಿಗೆ ಆಹ್ವಾನ



'ಪರಿದೃಶ್ಯ' ಚಲನಚಿತ್ರೋತ್ಸವದ ಪೋಸ್ಟರ್ ಬಿಡುಗಡೆ ಸಂದರ್ಭ.

ಮೈಸೂರು, ಏ.28 (ಎಂಟಿವೈ)– ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ನಡೆಸಲು ಉದ್ದೇಶಿಸಿರುವ 'ಪರಿದೃಶ್ಯ' ನಾಲ್ಕನೇ ಆವೃತ್ತಿಯ ಚಿತ್ರೋತ್ಸವಕ್ಕೆ ಕಿರುಚಿತ್ರ ಹಾಗೂ ಸಾಕ್ಷ್ಯಚಿತ್ರವನ್ನು ಆಹ್ವಾನಿಸಲಾಗಿದೆ ಎಂದು ಸಿನಿಮಾ ಸೊಸೈಟಿ ಕಾರ್ಯದರ್ಶಿ ಪದ್ಮಾವತಿ ಎಸ್.ಭಟ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಸಿನಿಮಾ ಸೊಸೈಟಿಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ 2026ರ ಫೆ.6ರಿಂದ 8ರವರೆಗೆ ನಾಲ್ಕನೆ ಆವೃತ್ತಿಯ 'ಪರಿದೃಶ್ಯ' ಚಲನಚಿತ್ರೋತ್ಸವ ಆಯೋಜಿಸಿದೆ. ಮೂರು ದಿನಗಳ ಕಾಲ ನಡೆಯಲಿರುವ ಈ ಚಿತ್ರೋತ್ಸವಕ್ಕೆ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರಗಳನ್ನು ಆಹ್ವಾನಿಸಲಾಗಿದೆ. ಈ ಸ್ಪರ್ಧೆಯಲ್ಲಿ ಪ್ರದರ್ಶಿಸುವ ಕಿರು ಮತ್ತು ಸಾಕ್ಷ್ಯಚಿತ್ರಗಳು ಜನವರಿ 1, 2024ರ ನಂತರ ಚಿತ್ರೀಕರಣಗೊಂಡಿರಬೇಕು. ಕಿರುಚಿತ್ರಗಳ ಅವಧಿ 1.40 ನಿಮಿಷಗಳು ಮತ್ತು ಸಾಕ್ಷ್ಯಚಿತ್ರಗಳ ಅವಧಿಗಳು 1.20 ನಿಮಿಷಗಳವರೆಗೆ ಇರಬೇಕು. ಸ್ಪರ್ಧೆಯಲ್ಲಿ ಅತ್ಯುತ್ತಮ ಕಿರುಚಿತ್ರ, ಅತ್ಯುತ್ತಮ ನಿರ್ದೇಶಕ, ಅತ್ಯುತ್ತಮ ನಟ, ಅತ್ಯುತ್ತಮ ನಟಿ, ಅತ್ಯುತ್ತಮ ಛಾಯಾಚಿತ್ರ, ಅತ್ಯುತ್ತಮ ಚಿತ್ರಕಥೆ, ಅತ್ಯುತ್ತಮ ಧ್ವನಿ ಸಂಯೋಜನೆ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗುತ್ತದೆ. ಚಿತ್ರೋತ್ಸವಕ್ಕೆ ಚಿತ್ರಗಳನ್ನು ಕಳುಹಿಸಲು ಸೆ.30 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 998059 6824, 9880435175ಕ್ಕೆ ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಸಿನಿಮಾ ಸೊಸೈಟಿಯ ಅಧ್ಯಕ್ಷ ಎಂ.ಚೇತನ್, ಮುಖಂಡ ಜೋಗಿ ಮಂಜು, ಸಂಯೋಜಕ ಜಿ.ಆರ್.ಚೇತನ್, ಸದಸ್ಯರಾದ ಸೀಮಾ ಬುರುಡೆ, ಎನ್.ಮಂಜುನಾಥ್ ಇದ್ದರು.


ನಾಳೆ ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಕಟ್ಟಡ ಕಾಮಗಾರಿಗೆ ಚಾಲನೆ

ಮೈಸೂರು,ಏ.28(ಎಂಟಿವೈ)– ಮೈಸೂರಿನ ರಾಜ್‌ಕುಮಾರ್ ರಸ್ತೆಯ ಜೆಎಸ್‌ಎಸ್ ಬಡಾವಣೆಯ ಮೊದಲನೇ ಹಂತದ ಬಸವೇಶ್ವರ ವೃತ್ತದ ಸಮೀಪದ ನಿವೇಶನದಲ್ಲಿ ಏ.30ರಂದು ಬೆಳಗ್ಗೆ 8.30ಕ್ಕೆ ಜಿಲ್ಲಾ ಮಹಾಸಭಾ ಕಟ್ಟಡ ಕಾಮಗಾರಿಯ ಪ್ರಾರಂಭೋತ್ಸವ ಆಯೋಜಿಸಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಹಿನಕಲ್ ಬಸವರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ವಿವಿಧ ಘಟಕ, ಬಸವ ಬಳಗಗಳ ಒಕ್ಕೂಟದ ಸಹಯೋಗದಲ್ಲಿ ಜಿಲ್ಲಾ ಮಹಾಸಭಾದ ಕಟ್ಟಡ ಕಾಮಗಾರಿ ಪ್ರಾರಂಭೋತ್ಸವ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 8.30ಕ್ಕೆ ಸುತ್ತೂರು ಶ್ರೀ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪೂಜಾ ಕಾರ್ಯಕ್ರಮ ನೆರವೇರಿಸಲಿದೆ. ಮೈಸೂರು ಜಿಲ್ಲೆಯ ನಗರ ಹಾಗೂ ಎಲ್ಲಾ ತಾಲೂಕಿನ ಶ್ರೀ ಮಠಗಳ ಮಠಾಧೀಶರು ಮತ್ತು ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರು, ಚುನಾಯಿತ ಜನಪ್ರತಿನಿಧಿಗಳು, ರಾಜಕೀಯ ಮುಖಂಡರು, ಸಹಕಾರಿ ಧುರೀಣರು, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಸದಸ್ಯರು ಸೇರಿದಂತೆ ಸಮಸ್ತ ಬಸವ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಉಪಾಧ್ಯಕ್ಷರಾದ ಕೋಟೆ ಬಸವರಾಜು, ನಾಗರಾಜು, ಕಾರ್ಯದರ್ಶಿ ಎಂ.ಕುಮಾರ್, ಸಮಾಜದ ಮುಖಂಡರಾದ ದೂರ ಶಿವಕುಮಾರ್, ನಟರಾಜು, ಗಿರೀಶ್ ಮತ್ತಿತರರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.04.2025 ಮಂಗಳವಾರ, ಮಳೆ ನಕ್ಷತ್ರ: ಭರಣಿ 27.04.2025ರಿಂದ 10.05.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ, ಅಭಿನವ ಶಂಕರಾಲಯ:** ಶ್ರೀ ಶಂಕರ ಜಯಂತ್ಯುತ್ಸವ–2025, ಬೆಳಗ್ಗೆ 7 ಗಂಟೆಯಿಂದ ಶ್ರೀ ಶಂಕರ ಸನ್ನಿಧಿಯಲ್ಲಿ ಮಹಾನ್ಯಾಸ ಪೂರ್ವಕ ಏಕದಶವಾರ, ರುದ್ರಾಭಿಷೇಕ, ರುದ್ರಕ್ರರೂರ್ಚನೆ, ವೇದ ಪಾರಾಯಣಗಳು, ಭಾಷ್ಯಾ ಪಾರಾಯಣಗಳು, ಶ್ರೀ ಶಂಕರ ವಿಜಯ ಪಾರಾಯಣ, ವಿಷ್ಣು ಸಹಸ್ರ ನಾಮ ಪಾರಾಯಣ ಮತ್ತು ನವಗ್ರಹ ಜಪ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ, ಸಂಜೆ 6ರಿಂದ ಉಪನ್ಯಾಸ ಮಾಲಿಕೆ, ಬೆಂಗಳೂರಿನ ಜಿ.ಬಿ.ಹರೀಶ್ ಅವರಿಂದ ಭಾರತೀಯ ವೇದಾಂತ ಮತ್ತು ಶಂಕರರು ಕುರಿತು ಉಪನ್ಯಾಸ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪುನಶ್ಚೇತನ (ರೆಜುವಿನೇಷನ್) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್** : ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ಸಂಘ ಸಂಸ್ಥೆಗಳು, ಮೈಸೂರು:** ವಿದ್ವಾನ್ ಶ್ರೀ ಗುರುಶಾಂತ ಮಹಾಸ್ವಾಮಿಗಳವರ 30ನೇ ಪುಣ್ಯಾರಾಧನೆ ಹಾಗೂ ಅಕ್ಕ ಮಹಾದೇವಿ ಮತ್ತು ಬಸವ ಜಯಂತ್ಯುತ್ಸವ, ಷಟ್‌ಸ್ಥಲ ಧ್ವಜಾರೋಹಣ, ಬಸವ ಜಯಂತಿ, ಉದ್ಘಾಟನೆ : ಕೊಡಗು ವಿವಿ ಕುಲಪತಿ ಡಾ.ಅಶೋಕ್ ಎಸ್. ಆಲೂರು, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ನಿವೃತ್ತ ಆಕಾಶವಾಣಿ ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್ ಅವರಿಂದ ಬಸವಣ್ಣನವರ ದೃಷ್ಟಿಯಲ್ಲಿ ಸಮಸಮಾಜ ಕುರಿತು ಶರಣ ಚಿಂತನೆ, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಕು. ಚೂಡಾಮಣಿ ಅವರಿಂದ ವಚನ ಗಾಯನ, ಅಕ್ಕಮಹಾದೇವಿ, ಶ್ರೀ ಬಸವೇಶ್ವರರ ಉತ್ಸವ ಮೂರ್ತಿಗಳ ಮೆರವಣಿಗೆ, ಉದ್ಘಾಟನೆ: ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಸ್ಥಳ: ಶ್ರೀ ಹೊಸಮಠ, ಮೈಸೂರು.

■ **ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಸಾಂಸ್ಕೃತಿಕ ವೇದಿಕೆ:** ಮಿಸ್ ಮಹಾರಾಣಿ 2025 ವ್ಯಕ್ತಿತ್ವ ಹಾಗೂ ಸೌಂದರ್ಯ ಸ್ಪರ್ಧೆ ಅಂತಿಮ ಸುತ್ತು, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಸೋಮಣ್ಣ, ಮುಖ್ಯ ಅತಿಥಿಗಳು: ವಕೀಲೆ ಶ್ರೀಮತಿ ಬಿ.ಡಿ.ಜ್ಯೋತಿ, ನೃತ್ಯ ಕಲಾವಿದೆ ಶ್ರೀಮತಿ ತ್ರಿವೇಣಿ, ಶ್ರೀಮತಿ ದಾಕ್ಷಾಯಿಣಿ, ಡಾ.ಮುತ್ತುರಾಜ್, ಪ್ರೊ.ಹೆಚ್.ಎಸ್. ಧನಲಕ್ಷ್ಮಿ, ಪ್ರೊ.ಎನ್.ವನಿತಾ, ಎಂ.ಎನ್.ಪ್ರಭು, ಎನ್. ಲಿಖಿತ, ಸಿಂಧುರಾಣಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ:** ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಪ್ರೊ.ಎನ್.ನಾಗರಾಜ, ಡಾ.ಕೆ.ಎಸ್. ಸದಾನಂದ, ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ.ನಯನಕುಮಾರಿ, ಪ್ರಿನ್ಸಿಪಾಲ್ ಪ್ರೊ.ಎನ್. ಭಾರತಿ, ಜ್ಯೋತಿಲಕ್ಷ್ಮಿ ಜಿ.ಕಾವಾ, ಕೆ.ಎಸ್. ಸುಕೃತಾ, ಸ್ಥಳ: ಕಾಲೇಜು ಆವರಣ, ಬೆಳಗೆ 10ಕ್ಕೆ.

■ **ಶೇಷಾದ್ರಿಪುರಂ ಪದವಿ ಕಾಲೇಜು:** ಅವಲೋಕನ–2025, ವಿಷಯಗಳು: 20ನೇ ಶತಮಾನದ ಕನ್ನಡ ಸಾಹಿತ್ಯದ ತಾತ್ವಿಕ ಆಯಾಮಗಳು, ಮುಖ್ಯ ಅತಿಥಿಗಳು: ಅಕ್ಕಮಹಾದೇವಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ನಿರ್ದೇಶಕಿ ಪ್ರೊ. ಕವಿತಾ ರೈ, ಪ್ರಾಸ್ತಾವಿಕ ಭಾಷಣ: ಡಾ.ಪಿ.ವೆಂಕಟೇಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ.ಕೆ.ಸೌಮ್ಯ ಈರಪ್ಪ, ಸ್ಥಳ: ಕಾಲೇಜು ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ:** ಡಾ.ಅಂಬೇಡ್ಕರ್ ಅವರ 134ನೇ ಜಯಂತಿ ಅಂಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ವರ್ತಮಾನದ ಭಾರತ ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಗತಿಪರ ಚಿಂತಕ ನಾ. ದಿವಾಕರ ಅವರಿಂದ ವಿಶೇಷ ಉಪನ್ಯಾಸ, ಅಧ್ಯಕ್ಷತೆ :ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಕುವೆಂಪು ಸಭಾಂಗಣ, ಪ್ರಸಾರಾಂಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ ಭೂವಿಜ್ಞಾನ ಅಧ್ಯಯನ ವಿಭಾಗ:** ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ, ಮುಖ್ಯ ಅತಿಥಿಗಳು: ಮುಖ್ಯೋಪಾಧ್ಯಾಯ ಹೊ.ಬಾ.ರಂಗನಾಥ್, ಸಿಂಡಿಕೇಟ್ ಸದಸ್ಯ ಡಾ.ನಟರಾಜ್ ಶಿವಣ್ಣ, ಪ್ರೊ.ಸುರೇಶ್‌ಕುಮಾರ್ ಅಧ್ಯಕ್ಷತೆ: ಪ್ರೊ.ನಾಗರಾಜು, ಪ್ರೊ.ವಿಶ್ವನಾಥಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ದಲಿತ ಸಂಘರ್ಷ ಸಮಿತಿ :** ಡಾ.ಬಿ.ಆರ್. ಅಂಬೇಡ್ಕರ್‌ರವರ 134ನೇ ಜನ್ಮದಿನದ ಅಂಗವಾಗಿ ವಿಚಾರ ಸಂಕಿರಣ, ಉದ್ಘಾಟನೆ : ನಿವೃತ್ತ ಐಆರ್‌ಎಸ್ ಅಧಿಕಾರಿ ಹೆಚ್.ಆರ್. ಭೀಮಶಂಕರ್, ಮುಖ್ಯ ಅತಿಥಿಗಳು: ಹಿರಿಯ ಪ್ರಾಧ್ಯಾಪಕ ಪ್ರೊ.ಎನ್.ಚಿನ್ನಸ್ವಾಮಿ ಸೋಸಲೆ, ಡಾ.ಬಾಬು ಜಗಜೀವನರಾಂ ಅಧ್ಯಯನ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಆರ್.ತಿಮ್ಮರಾಯಪ್ಪ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ವಿದ್ಯಾವರ್ಧಕ ಪದವಿಪೂರ್ವ ಕಾಲೇಜು** : ನಿವೃತ್ತ ಪ್ರಾಂಶುಪಾಲ ಸಿದ್ದಯ್ಯ ಅವರಿಗೆ ಬೀಳ್ಕೊಡುಗೆ ಸಮಾರಂಭ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಎಸ್.ಶಿವಲಿಂಗಯ್ಯ, ಅಬ್ದುಲ್ ಜಮೀಲ್, ಸ್ಥಳ: ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿವಿ ಸಂಜೆ ಕಾಲೇಜು:** ಡಾ.ಬಿ.ಆರ್.ಅಂಬೇಡ್ಕರ್‌ರವರ 134ನೇ ಜನ್ಮದಿನಾಚರಣೆ, ಉದ್ಘಾಟನೆ: ಉಪನ್ಯಾಸಕ ಡಾ. ಎಂ.ಟಿ. ಕೃಷ್ಣಮೂರ್ತಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಸ್ಥಳ: ಕೊಠಡಿ ಸಂಖ್ಯೆ 21, ಹೊಸ ಕಟ್ಟಡ, ವಿ.ವಿ. ಸಂಜೆ ಕಾಲೇಜು, ಸಂಜೆ 6ಕ್ಕೆ.

■ **ಬಿಎಸ್‌ಎಸ್ ವಿದ್ಯೋದಯ:** ಭಗಿನಿ ಸಂಗೀತೋತ್ಸವ, ವಿದ್ವಾನ್ ಟಿ.ಎನ್.ಎಸ್. ಕೃಷ್ಣ ಮತ್ತು ತಂಡದಿಂದ ಗಾಯನ, ಸ್ಥಳ: ಶಾಲಾ ಸಭಾಂಗಣ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎ.ಎಸ್.ನಾಗಲಕ್ಷ್ಮಿ, ಡಾ.ಪಿ.ಎಸ್.ಮುರಳೀಧರ್, ಎಂ.ಆರ್.ಸುಧಾ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30–ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್–ಇನ್ ಕಾರ್ಯಕ್ರಮ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮಹಾರಾಜಪುರಂ ಸಂತಾನಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ–ಗೃಹಿಣಿಯು ಸೂಪರ್ ವಿಮೆನ್, ರಚನೆ ಮತ್ತು ಪ್ರಸ್ತುತಿ: ಕೆ.ನೇತ್ರಾ, 12.35 ದೇವರನಾಮ–ಪಿ.ಎಸ್.ರಂಜನಿ, 12.45 ಯಾರು ಕಾಣದ ಪ್ರವಾಸಿ ತಾಣ–ಬಾನುಲಿ ಮಾಲಿಕೆ ಶ್ರೀರಂಗಪಟ್ಟಣದ ಕರಿಘಟ್ಟವನ್ನು ಪರಿಚಯಿಸುತ್ತಾರೆ, ಸಿರಿ ಮೈಸೂರು, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಟಿ.ಎಸ್.ಸ್ನೇಹ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ರಾಧ ಹಾಗೂ ಜಯಲಕ್ಷ್ಮಿ–ಯುಗಳ ಹಾಡುಗಾರಿಕೆ, 4.00 ಕಥಾಕಾಲಕ್ಷೇಪ–ಭೂಕೈಲಾಸ, ಪ್ರಸ್ತುತಿ–ವಿದ್ವಾನ್. ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಆಧಾರಿತ ಸಮಗ್ರ ಕೃಷಿ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರು ತಾಲೂಕು ವರುಣ ಹೋಬಳಿ ಹಾರೋಹಳ್ಳಿ ಅಂಚೆ ಲಕ್ಷ್ಮೀಪುರ ಗ್ರಾಮದ ರಾಮು ಹಾಗೂ ಅವರ ಮಗ ಆರ್.ವಸಂತ್ ಕುಮಾರ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00–ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಬಿಸ್ಮಿಲ್ಲಾ ಖಾನ್–ಶಹನಾಯಿ ವಾದನ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಸುಧಾ ರಘುನಾಥನ್–ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಪಾಲಿಮರ್ ವಿಜ್ಞಾನ, ರಬ್ಬರ್ ತಂತ್ರಜ್ಞಾನದ 'ಡಾ.ಡಿ.ಬ್ಯಾನರ್ಜಿ ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರ ನಾಳೆ ಲೋಕಾರ್ಪಣೆ

ಮೈಸೂರು,ಏ.28(ಎಂಟಿವೈ)–ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಂಸ್ಥೆಗಳ ಆವರಣದಲ್ಲಿ ಭಾರತೀಯ ರಬ್ಬರ್ ಸಂಸ್ಥೆ ಆರಂಭಿಸಿರುವ ಪಾಲಿಮರ್ ವಿಜ್ಞಾನ ಮತ್ತು ರಬ್ಬರ್ ತಂತ್ರಜ್ಞಾನದ 'ಡಾ.ಡಿ. ಬ್ಯಾನರ್ಜಿ ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರ ಲೋಕಾರ್ಪಣಾ ಕಾರ್ಯಕ್ರಮ ಏ.30ರಂದು ಬೆಳಗ್ಗೆ 11.15ಕ್ಕೆ ನಡೆಯಲಿದೆ ಎಂದು ಸಂಸ್ಥೆಯ ಸಲಹೆಗಾರ ಎಸ್.ವಾಸುದೇವರಾವ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ರಬ್ಬರ್ ಸಂಸ್ಥೆ ರಬ್ಬರ್ ಉದ್ಯಮಕ್ಕೆ ಸಂಬಂಧಿಸಿದ ತಂತ್ರಜ್ಞರು, ಇಂಜಿನಿಯರ್, ವಿಜ್ಞಾನಿ, ವೃತ್ತಿಪರರು ಇರುವ ಸಂಸ್ಥೆಯಾಗಿದ್ದು, 1987ರಲ್ಲಿ ಕೊಲ್ಕತ್ತಾದಲ್ಲಿ ಸ್ಥಾಪಿತವಾಗಿದೆ. ಇದೀಗ ದೇಶದಲ್ಲಿ 8 ಶಾಖೆ ಹೊಂದಿರುವ ಐಆರ್‌ಐ ಸಂಸ್ಥೆ ಇದೀಗ ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಂಸ್ಥೆಗಳ ಆವರಣದಲ್ಲಿ 'ಡಾ.ಡಿ.ಬ್ಯಾನರ್ಜಿ ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರ ಸ್ಥಾಪಿಸಿದೆ. 225 ಆಸನದ ಸಾಮರ್ಥ್ಯವಿರುವ ಕೇಂದ್ರದಲ್ಲಿ ರಬ್ಬರ್ ತಂತ್ರಜ್ಞಾನ, ಶಿಕ್ಷಣ ತರಬೇತಿ, ಸಂಶೋಧನೆ, ಪರೀಕ್ಷೆ, ಕೌಶಲ ಅಭಿವೃದ್ಧಿಯಲ್ಲಿ ಅಧ್ಯಯನ ನಡೆಸಲು ಪೂರಕ ವಾತಾವರಣವಿದೆ. ಏ.30ರಂದು ಬೆಳಗ್ಗೆ 11.15ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಕೆ ಟೈರ್ಸ್ ಕಂಪನಿ ಸಿಎಂಡಿ ಡಾ.ರಘುಪತಿ ಸಿಂಘಾನಿಯಾ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಡಿಸಿ ಲಕ್ಷ್ಮೀಕಾಂತರೆಡ್ಡಿ, ಡಾ.ಮುಖೋಪಾಧ್ಯಾಯ, ವಿ.ಕೆ.ಮಿಶ್ರಾಂ, ಮೊಹಮ್ಮದ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 29 ಮಂಗಳವಾರ 2025

ಸಂಪುಟ: 46 | ಸಂಚಿಕೆ: 14 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಚಿವ ರಾಜಣ್ಣ ಬೊಬ್ಬಿರಿದಿದ್ದ 'ಹನಿಟ್ರ್ಯಾಪ್'ನಲ್ಲಿ

ಏನಿಲ್ಲಾ... ಏನಿಲ್ಲಾ... ಅಂತಹದ್ದೇನಿಲ್ಲಾ...!

- ಪೊಲೀಸ್ ಮಹಾನಿರ್ದೇಶಕರಿಗೆ ಸಿಐಡಿ ಪತ್ರ; ಆರೋಪ ಸಾಬೀತುಪಡಿಸುವ ಸಾಕ್ಷ್ಯಾಧಾರ ಇಲ್ಲ
- ಈ ಪ್ರಕರಣದ ಹೆಚ್ಚಿನ ತನಿಖೆಯೂ ಇಲ್ಲ ಎಂದು ಮಾಹಿತಿ
- ವಿಧಾನಸಭೆಯಲ್ಲೇ ಭಾರಿ ಸದ್ದು ಮಾಡಿದ್ದ ಈ ಪ್ರಕರಣ ಸಂಸತ್‌ನಲ್ಲೂ ಪ್ರಸ್ತಾಪವಾಗಿತ್ತು; ಸುಪ್ರೀಂಕೋರ್ಟ್ ಗಮನಕ್ಕೂ ಬಂದಿತ್ತು

ಬೆಂಗಳೂರು, ಏ. 28(ಕೆಎಂಶಿ)– ರಾಷ್ಟ್ರವ್ಯಾಪಿ ಸದ್ದು ಮಾಡಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಹನಿಟ್ರ್ಯಾಪ್ ಆರೋಪದಲ್ಲಿ ಸತ್ಯಾಂಶ ಇಲ್ಲ ಎಂದು ಸಿಐಡಿ ಪೊಲೀಸರು ಪ್ರಕರಣಕ್ಕೆ ತೆರೆ ಎಳೆದಿದ್ದಾರೆ.

ಸಿಐಡಿ ವಿಭಾಗದ ಡಿಜಿಪಿ ಡಾ.ಎಂ.ಎ. ಸಲೀಂ, ಪ್ರಕರಣದ ತನಿಖೆ ನಡೆಸಿ, ಆರೋಪ ಸಾಬೀತುಪಡಿಸುವ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ. ಆರೋಪಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆ ಅಗತ್ಯವಿಲ್ಲ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಮಾಡಿದ ಮನವಿ ಮೇರೆಗೆ ಪ್ರಕರಣದ ತನಿಖೆ ನಡೆಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಆದೇಶ ಮಾಡಿದ್ದರು.

ಗೃಹ ಸಚಿವರ ಆದೇಶದ ಮೇರೆಗೆ ಪೊಲೀಸ್ ಮಹಾನಿರ್ದೇಶಕರು, ಆರೋಪಕ್ಕೆ ಸಂಬಂಧಿಸಿದಂತೆ ಸತ್ಯಾಸತ್ಯತೆ ಅರಿತು ಮುಂದಿನ ಕ್ರಮಕ್ಕೆ ಸಿಐಡಿಗೆ ವಹಿಸಿದ್ದರು.



ಕೆ.ಎನ್. ರಾಜಣ್ಣ

ಪ್ರಕರಣದ ಆರೋಪದ ಬಗ್ಗೆ ಸಚಿವರೂ ಸೇರಿದಂತೆ ಅವರ ಆಪ್ತ ಸಿಬ್ಬಂದಿ ಗನ್‌ಮ್ಯಾನ್ ಅವರುಗಳ ವಿಚಾರಣೆಯನ್ನು ಸಿಐಡಿ ನಡೆಸಿತು. ಈ ವೇಳೆ ಸಚಿವರೂ ಸೇರಿದಂತೆ ಯಾರೂ ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ಸ್ಪಷ್ಟ ಚಿತ್ರಣವನ್ನೂ ನೀಡಲಿಲ್ಲ, ದಾಖಲೆಯನ್ನೂ ಒದಗಿಸಲಿಲ್ಲ.

ಜೊತೆಗೆ ಸಚಿವರ ಸರ್ಕಾರಿ ನಿವಾಸದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ಸಂದರ್ಭದಲ್ಲೂ ಆರೋಪಕ್ಕೆ ಸಂಬಂಧಿಸಿದ ವ್ಯಕ್ತಿಗಳು ಕಂಡುಬಂದಿಲ್ಲ. ಈ ಹಿನ್ನೆಲೆಯಲ್ಲಿ ಆರೋಪಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲ ಹಾಗೂ ಹೆಚ್ಚಿನ ತನಿಖೆ ಅಗತ್ಯವಿಲ್ಲ ಎಂಬ ಮಾಹಿತಿ ನೀಡಿದ್ದಾರೆ. ಹನಿಟ್ರ್ಯಾಪ್ ಮೂಲಕ ತಮ್ಮನ್ನು ಹಣಿಯಲು ಪ್ರಯತ್ನ ನಡೆದಿತ್ತೆಂದು ರಾಜಣ್ಣ, ವಿಧಾನಸಭೆಯಲ್ಲೇ ಹೇಳಿಕೆ ನೀಡಿ, ಆಡಳಿತ ಪಕ್ಷ ಮತ್ತು ಸರ್ಕಾರವನ್ನೇ ಮುಜುಗರಕ್ಕೆ ಸಿಲುಕಿಸಿದ್ದರು.



ಡಾ.ಎಂ.ಎ.ಸಲೀಂ

ಅಷ್ಟೇ ಅಲ್ಲ, ಮುಂದುವರೆದು, ನನ್ನೊಬ್ಬನದೇ ಅಲ್ಲ, ವಿಧಾನಸಭೆಯಲ್ಲಿನ ಆಡಳಿತ ಪಕ್ಷದವರಷ್ಟೇ ಅಲ್ಲದೆ, ವಿರೋಧ ಪಕ್ಷ ಹಾಗೂ ದೆಹಲಿ ನಾಯಕರೂ ಸೇರಿದಂತೆ 48 ಗಣ್ಯರು ಹನಿಟ್ರ್ಯಾಪ್‌ಗೆ ಸಿಲುಕಿದ್ದಾರೆ ಎಂದಿದ್ದರು.

ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ತಮ್ಮ ಬಳಿ ದಾಖಲೆಗಳಿದ್ದು, ಸೂಕ್ತ ಸಂದರ್ಭದಲ್ಲಿ ಬಹಿರಂಗಪಡಿಸುವುದಾಗಿ, ಈ ಬಗ್ಗೆ ಉನ್ನತಮಟ್ಟದ ತನಿಖೆ ನಡೆಸುವಂತೆ ಗೃಹ ಸಚಿವರಿಗೆ ದೂರು ನೀಡುವುದಾಗಿಯೂ ಹೇಳಿದ್ದರು.

ಆರೋಪದ ವೇಳೆ ಸದನದಲ್ಲೇ ಇದ್ದ ಗೃಹ ಸಚಿವ ಡಾ.ಪರಮೇಶ್ವರ್, ಸಚಿವ ರಾಜಣ್ಣ ದೂರು ನೀಡಿದರೆ ತನಿಖೆ ನಡೆಸಿ ಹನಿಟ್ರ್ಯಾಪ್ ತಂಡವನ್ನು ಬಗ್ಗುಬಡಿಯುವುದಾಗಿ ತಿಳಿಸಿದ್ದರು. ಈ ಮಾತುಗಳನ್ನೇ ಸಿಎಂ ಸಿದ್ದರಾಮಯ್ಯ ಸಹ ಪುನರುಚ್ಚರಿಸಿದ್ದರು. ರಾಜಣ್ಣ ಹೇಳಿಕೆ ಸಂಸತ್‌ನ ಉಭಯ ಸದನಗಳಲ್ಲೂ ಚರ್ಚೆಗೆ ಗ್ರಾಸವಾಯಿತಲ್ಲದೆ, ವಿಷಯ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ಹನಿಟ್ರ್ಯಾಪ್ ಪ್ರಕರಣ ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿದೆ ಎಂಬುದನ್ನು ಅರಿತ ಕಾಂಗ್ರೆಸ್ ವರಿಷ್ಠರು ಮಧ್ಯೆ ಪ್ರವೇಶ ಮಾಡಿ ಮುಖ್ಯಮಂತ್ರಿ ಹಾಗೂ ಸಹಕಾರ ಸಚಿವರೊಂದಿಗೆ ಸಮಾಲೋಚನೆ ನಡೆಸಿದ್ದರು.

ವರಿಷ್ಠರು ಮಧ್ಯಪ್ರವೇಶಿಸುತ್ತಿದ್ದಂತೆ ರಾಜಣ್ಣ ತಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡಿದ್ದಲ್ಲದೆ, ಪ್ರಕರಣದ ತನಿಖೆಗೆ ದೂರನ್ನೂ ನೀಡಲಿಲ್ಲ, ಸರ್ಕಾರಕ್ಕೆ ಕೇವಲ ಮನವಿ ಮಾತ್ರ ಸಲ್ಲಿಸಿ, ಅದನ್ನು ಮುಂದುವರೆಸದೆ ಕೈಬಿಟ್ಟರು.

ವೈಭವ್ ಸೂರ್ಯವಂಶಿ 38ಕ್ಕೆ 101ರನ್ ದಾಖಲೆ ಆಟ /ಪುಟ–11

ಪ್ರಧಾನಿ ಮೋದಿ 'ಸಮರ' ಸಮಾಲೋಚನೆ!

ನವದೆಹಲಿ, ಏ. 28– ಪಹಲ್ಗಾಮ್‌ನಲ್ಲಿ ಉಗ್ರರ ಪೈಶಾಚಿಕ ದಾಳಿಗೆ 26 ಪ್ರವಾಸಿಗರು ಬಲಿಯಾಗಿದ್ದಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಭಾರತ ರಣೋತ್ಸಾಹದಲ್ಲಿದೆ. ಕಳೆದ 5 ದಿನಗಳಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ರಹಸ್ಯವಾಗಿ ಉನ್ನತ ಮಟ್ಟದ ಸಭೆಗಳನ್ನು ನಡೆಸುತ್ತಲೇ ಇದ್ದಾರೆ.



ಇಂದೂ ಸಹ ಮೂರೂ ರಕ್ಷಣಾ ಪಡೆಗಳ ಮುಖ್ಯಸ್ಥರಿಂದಲೂ ತಲಾ 40 ನಿಮಿಷಗಳ ಕಾಲ ಮಾಹಿತಿ ಪಡೆದಿದ್ದಾರೆ. ಈ ಮಧ್ಯೆ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಜಮ್ಮು–ಕಾಶ್ಮೀರದಲ್ಲಿನ ■6ನೇ ಪುಟಕ್ಕೆ

ಬಡಾಯಿ ಕೊಚ್ಚಿಕೊಳ್ಳುತ್ತಿರುವ ಪಾಕ್!

ಅಸ್ತಿತ್ವಕ್ಕೆ ಅಪಾಯ ಬಂದರೆ ಅಣ್ವಸ್ತ್ರ ಬಳಕೆ

ಇಸ್ಲಾಮಾಬಾದ್, ಏ.28– ಭಾರತ ಒಂದು ವೇಳೆ ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ ಸಮರ ಸಾರಿದರೆ ಅದನ್ನು ದಿಟ್ಟವಾಗಿ ಎದುರಿಸುವ ಆತ್ಮವಿಶ್ವಾಸವನ್ನು ಪಾಕಿಸ್ತಾನ ಕಳೆದುಕೊಂಡಂತೆ, ಅದರ ವರ್ತನೆ ಕಂಡುಬರುತ್ತಿದೆ.

ಟರ್ಕಿಯಿಂದ 6 ಹರ್ಕ್ಯುಲಸ್ ವಿಮಾನಗಳಲ್ಲಿ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನ ತರಿಸಿಕೊಂಡಿದೆ. ಇದರ ಜೊತೆಗೆ ತನ್ನ ಆಪ್ತಮಿತ್ರ ಚೀನಾದ ಆನೆ ಬಲ ನನಗಿದೆ ಎಂದು ಬೀಗುತ್ತಿದೆ. ಹಾಗಾಗಿ ನಾನೂ ಯುದ್ಧಕ್ಕೆ ಸನ್ನದ್ಧ ಎಂದು ಪಾಕ್ ನಾಯಕರು ಪೋಸು ನೀಡುತ್ತಿದ್ದಾರೆ. ಈ ಮಧ್ಯೆ ತನ್ನ ಕುಟುಂಬವನ್ನು ವಿದೇಶಕ್ಕೆ ಕಳಿಸಿದ ಪಾಕ್ ಸೇನಾ ಮುಖ್ಯಸ್ಥ ಮುನೀರ್, ಈಗ ನಾಪತ್ತೆಯಾಗಿದ್ದಾನೆ ಎಂದು ಹೇಳಲಾಗುತ್ತಿದೆ.



ಜೊತೆಗೆ 1450 ಪಾಕ್ ಸೇನಾ ಯೋಧರು ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಲಿಖಿತ ಪತ್ರವೊಂದು ವ್ಯಾಪಕವಾಗಿ ವೈರಲ್ ಆಗುತ್ತಿದೆ.

ಭಾರತದ ತಂಟೆ ಬೇಡ: ಮಹತ್ವದ ವಿಚಾರವೆಂದರೆ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಶರೀಫ್ ಭಾರತದ ತಂಟೆಗೆ ಹೋಗಬೇಡಿ ಎಂದು ಪಾಕಿಸ್ತಾನ ಸರ್ಕಾರಕ್ಕೆ ■6ನೇ ಪುಟಕ್ಕೆ

ವಿಶ್ವ ಲಸಿಕಾ ಸಪ್ತಾಹ ಲಸಿಕಾಕರಣ ವಿಶೇಷ ಅಭಿಯಾನ

ಮೈಸೂರು ಜಿಲ್ಲೆಯಲ್ಲಿ ವಿವಿಧ ಲಸಿಕೆಗೆ 1,467 ಮಕ್ಕಳ ಗುರುತಿಸಿರುವ ಆರೋಗ್ಯ ಇಲಾಖೆ

■ ಏ.24ರಿಂದ ನಡೆಯುತ್ತಿರುವ ಅಭಿಯಾನ ■ ನಾಳೆ ಮುಕ್ತಾಯ





ಮೈಸೂರಿನ ಗಿರಿಯಾಭೋವಿಪಾಳ್ಯದ ಶ್ರೀನಗರದ ಸರ್ಕಾರಿ ಶಾಲೆಯಲ್ಲಿ ವಿಶ್ವ ಲಸಿಕಾ ಸಪ್ತಾಹ ಲಸಿಕಾಕರಣ ವಿಶೇಷ ಅಭಿಯಾನ ಪ್ರಯುಕ್ತ ಸೋಮವಾರ ಲಸಿಕಾಕರಣ ಶಿಬಿರ ನಡೆಯಿತು.

ಮೈಸೂರು, ಏ.28(ಪಿಎಂ)– ವಿಶ್ವ ಲಸಿಕಾ ಸಪ್ತಾಹ ಲಸಿಕಾಕರಣ ವಿಶೇಷ ಅಭಿಯಾನವು ಮೈಸೂರು ಜಿಲ್ಲೆಯಲ್ಲಿಯೂ (ಏ.24ರಿಂದ 30ರವರೆಗೆ) ಆರಂಭಗೊಂಡಿದೆ. ಶೂನ್ಯ ಡೋಸ್ ಮಕ್ಕಳು, ದಡಾರ ರುಬೆಲ್ಲಾ ಲಸಿಕೆ ತಪ್ಪಿಹೋದ ಮಕ್ಕಳು ಸೇರಿದಂತೆ ಇತರೆ ಲಸಿಕೆಯಿಂದ ವಂಚಿತರಾದ ಐದು ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ಲಸಿಕೆ ನೀಡುವ ಪ್ರಕ್ರಿಯೆ ಇದಾಗಿದ್ದು, ವಿವಿಧ ಲಸಿಕೆಗಳನ್ನು ನೀಡಲು ಆರೋಗ್ಯ ಇಲಾಖೆಯು 1,467 ಮಕ್ಕಳನ್ನು ಜಿಲ್ಲೆಯಲ್ಲಿ ಗುರುತಿಸಿದೆ.

ಜಿಲ್ಲೆಯಲ್ಲಿ ಪೆಂಟಾ 1 ಲಸಿಕೆಗೆ 414 ಮಕ್ಕಳನ್ನು ಗುರುತಿಸಿದ್ದು, ಅದೇ ರೀತಿಯಲ್ಲಿ ಎಂಆರ್ 1 ಲಸಿಕೆಗೆ 329, ಎಂಆರ್ 2 ಲಸಿಕೆಗೆ 405 ಹಾಗೂ ಡಿಪಿಟಿ 5, ಟಿಡಿ 10, ಟಿಡಿ 16 ಲಸಿಕೆಗೆ 319 ಮಕ್ಕಳನ್ನು ಜಿಲ್ಲೆಯಲ್ಲಿ ಗುರುತಿಸಲಾಗಿದೆ. ಮೈಸೂರು ತಾಲೂಕಿನಲ್ಲಿ ವಿವಿಧ ಲಸಿಕೆಗಳನ್ನು ನೀಡಲು 592 ಮಕ್ಕಳನ್ನು ಗುರುತಿಸಲಾಗಿದೆ.

ಹೆಚ್‌ಡಿ ಕೋಟೆಯಲ್ಲಿ 247, ಹುಣಸೂರು 177, ಕೆಆರ್ ನಗರದಲ್ಲಿ 41, ನಂಜನಗೂಡಿನಲ್ಲಿ 182, ಪಿರಿಯಾಪಟ್ಟಣದಲ್ಲಿ 32, ಸಾಲಿಗ್ರಾಮದಲ್ಲಿ 12, ಟಿ.ನರಸೀಪುರದಲ್ಲಿ 132 ಮಕ್ಕಳಿಗೆ ಲಸಿಕೆಗಳನ್ನು ನೀಡಲು ಯೋಜನೆ ರೂಪಿಸಿಕೊಳ್ಳಲಾಗಿದೆ. ಏ.24ರಿಂದ ಲಸಿಕಾಕರಣ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಈ ಪೈಕಿ ಈಗಾಗಲೇ ಸಾಕಷ್ಟು ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 213 ಶಿಬಿರಗಳು ಹಾಗೂ ವಿವಿಧೆಡೆ ಒಟ್ಟು 173 ಶಿಬಿರಗಳನ್ನು ಆಯೋಜಿಸಿ ಲಸಿಕಾಕರಣ ನಡೆಸಲಾಗುತ್ತಿದೆ. ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ■6ನೇ ಪುಟಕ್ಕೆ

ಪಹಲ್ಗಾಮ್ ದಾಳಿ: ಕಣಿವೆಯಲ್ಲಿನ ಡಜನ್‌ಗೂ ಹೆಚ್ಚು ಸಕ್ರಿಯ ಉಗ್ರರ ಕೈವಾಡ ಪತ್ತೆ

ನವದೆಹಲಿ: ಪಹಲ್ಗಾಮ್ ಉಗ್ರರ ದಾಳಿಯ ತನಿಖೆಯನ್ನು ಮುಂದುವರೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ ಕಣಿವೆಯಲ್ಲಿನ ಡಜನ್‌ಗೂ ಹೆಚ್ಚು ಉಗ್ರರನ್ನು ಗುರುತಿಸಿದೆ. ಅವರಲ್ಲಿ ಎಂಟು ಮಂದಿ ಲಷ್ಕರ್–ಎ–ತೋಯ್ಬಾ ಮತ್ತು ತಲಾ ಮೂವರು ಜೈಶ್–ಎ–ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದೀನ್ ಸಂಘಟನೆಗೆ ಸೇರಿದವರಾಗಿದ್ದಾರೆ. ಅವರು ದಾಳಿ ನಡೆಸಲು ಭಯೋತ್ಪಾದಕರಿಗೆ ನೆರವಾಗಿದ್ದಾರೆ ಎಂದು ಶಂಕಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುಪ್ತಚರ ಮಾಹಿತಿಯ ಆಧಾರದ ಮೇಲೆ ಕಾಶ್ಮೀರ

ಮೂವರ ತಲೆಗೆ ರೂ.20 ಲಕ್ಷ ಬಹುಮಾನ ಘೋಷಣೆ

ಕಣಿವೆಯಲ್ಲಿ ಸುಮಾರು 60 ಉಗ್ರರು ಸಕ್ರಿಯರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದಾಗ್ಯೂ, ಅವರಲ್ಲಿ ಹನ್ನೆರಡು ಮಂದಿಯನ್ನು NIA ಗುರುತಿಸಿದ್ದು, ಪಹಲ್ಗಾಮ್ ಉಗ್ರರ ದಾಳಿ ಪ್ರಕರಣದ ತನಿಖೆ ಪ್ರಗತಿಯಲ್ಲಿರುವಂತೆ ಏಜೆನ್ಸಿ ಇದೀಗ ಅವರ ಮೇಲೆ ಕಣ್ಣಿಟ್ಟಿದೆ. ಪಹಲ್ಗಾಮ್ ದಾಳಿಯಲ್ಲಿನ ಸಂತ್ರಸ್ತರ ಹೇಳಿಕೆಗಳನ್ನು ದಾಖಲಿಸಿದ ನಂತರ ಗುಪ್ತಚರ ಬ್ಯೂರೋ ಹಂಚಿಕೊಂಡ ಪಟ್ಟಿಯಿಂದ NIA ಅವರನ್ನು ಗುರುತಿಸಿದೆ.

NIA ಶಂಕಿತ ಉಗ್ರರ ಪಟ್ಟಿಯಲ್ಲಿರುವ 14 ಸಕ್ರಿಯ ಭಯೋತ್ಪಾದಕರಲ್ಲಿ ಹೆಚ್ಚಿನವರು 20ರ ವಯಸ್ಸಿನವರಾಗಿದ್ದು, 2022ರ ನಂತರ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳಿಗೆ ಸೇರಿದ್ದಾರೆ. ಶೋಪಿಯಾನ್‌ನಲ್ಲಿ ಐವರು, ಪುಲ್ವಾಮಾದಲ್ಲಿ ನಾಲ್ವರು, ಅನಂತನಾಗ್‌ನಲ್ಲಿ ಇಬ್ಬರು ಮತ್ತು ಸೋಪೋರ್, ಅವಂತಿಪೋರಾ ಮತ್ತು ಕುಲ್ಗಾಮ್‌ನಲ್ಲಿ ತಲಾ ಒಬ್ಬರು ಸಕ್ರಿಯರಾಗಿದ್ದಾರೆ ಎನ್ನಲಾಗಿದೆ. ಮೂಲಗಳ ಪ್ರಕಾರ, LET ಉಗ್ರ ಸಂಘಟನೆಯ ಅಹ್ಸಾನ್ ಶೇಖ್ ಇತರ ನಾಲ್ವರೊಂದಿಗೆ ■6ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಪೂರ್ವ ಮುಂಗಾರು ಚುರುಕು

ಬಿತ್ತನೆಗೆ ಅಣಿಮಾಡಿಕೊಳ್ಳುತ್ತಿರುವ ಅನ್ನದಾತ; ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಸಿದ್ಧತೆ

ಮೈಸೂರು, ಏ.28(ಎಂಕೆ)– ಮೈಸೂರು ಜಿಲ್ಲೆಯಾದ್ಯಂತ ಪೂರ್ವ ಮುಂಗಾರು ಚುರುಕಾಗಿದ್ದು, ಕೃಷಿ ಚಟುವಟಿಕೆಗಳು ಗರಿಗೆದರಿದೆ.

ಮುಂಗಾರು ಹಂಗಾಮಿನ ಬಿತ್ತನೆಗೆ ಅನ್ನದಾತರು ಭೂಮಿ ಸಜ್ಜುಗೊಳಿಸಿ ಬೀಜ ಮತ್ತು ರಸಗೊಬ್ಬರ ದಾಸ್ತಾನು ಮಾಡಿಕೊಳ್ಳುವ ಜೊತೆ ಜೊತೆಗೆ ಬಿತ್ತನೆ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದರೆ, ಕೃಷಿ ಇಲಾಖೆಯೂ ರೈತ ಸಂಪರ್ಕ ಕೇಂದ್ರಗಳ ಮೂಲಕ ಬೀಜ ಹಾಗೂ ರಸಗೊಬ್ಬರ ವಿತರಣೆ ಕಾರ್ಯವನ್ನು ಪ್ರಾರಂಭಿಸಿದೆ.

ಕಳೆದ ವರ್ಷದಂತೆಯೇ ಈ ವರ್ಷವೂ ಪೂರ್ವ ಮುಂಗಾರು ಜಿಲ್ಲೆಯಲ್ಲಿ ವಾಡಿಕೆಗಿಂತ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಾಗಿಯೇ ಬಿದ್ದಿರುವುದು ರೈತರಿಗೆ ಸಂತಸ ತಂದಿದ್ದು, ಕೃಷಿ ಭೂಮಿಯನ್ನು ಹದಗೊಳಿಸಿ,



ನಂಜನಗೂಡು ತಾಲೂಕಿನ ಗ್ರಾಮವೊಂದರ ಜಮೀನಿನಲ್ಲಿ ಬಿತ್ತನೆ ಕಾರ್ಯದಲ್ಲಿ ತೊಡಗಿರುವ ರೈತ ಕುಟುಂಬ.

ಬಿತ್ತನೆ ಮಾಡುವ ಚಟುವಟಿಕೆಗಳು ಎಲ್ಲೆಡೆ ಆರಂಭಗೊಂಡಿದೆ.

ಪ್ರಸಕ್ತ ವರ್ಷದ ಜನವರಿ ತಿಂಗಳಿನಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ವಾಡಿಕೆ ಮಳೆ ಪ್ರಮಾಣ ಸರಾಸರಿ 82 ಮಿಲಿಮೀಟರ್‌ಗಿಂತ 2 ಮಿಮೀ (83.7 ಮಿಮೀ) ಹೆಚ್ಚು ಮಳೆಯಾಗಿದೆ. ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯಲ್ಲಿ 111.1 ಮಿಮೀ, ಹುಣಸೂರು 85.5, ■6ನೇ ಪುಟಕ್ಕೆ

ಮುಂದಿನ 5 ದಿನ ಮೈಸೂರು, ಮಂಡ್ಯ, ಹಾಸನ, ಚಾ.ನಗರದಲ್ಲಿ ಗುಡುಗು ಸಹಿತ ಮಳೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ಈಗಾಗಲೇ ರೂಪುಗೊಂಡಿರುವ ಚಂಡಮಾರುತದ ಪರಿಚಲನೆಯ ಪರಿಣಾಮವಾಗಿ ಕರ್ನಾಟಕದಲ್ಲಿ ಮುಂದಿನ 5 ದಿನಗಳ ಕಾಲ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಕರ್ನಾಟಕ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಬಂಗಾಳಕೊಲ್ಲಿಯಲ್ಲಿ ಈಗಾಗಲೇ ರೂಪುಗೊಂಡಿರುವ ಚಂಡಮಾರುತದ ಪರಿಚಲನೆಯು ಮರಾಠವಾಡ ಪ್ರದೇಶದಿಂದ ಕರ್ನಾಟಕ ಮತ್ತು ತಮಿಳುನಾಡಿನಾದ್ಯಂತ ಮನ್ನಾರ್ ಕೊಲ್ಲಿಯವರೆಗೆ ಸರಾಸರಿ ಸಮುದ್ರ ಮಟ್ಟದಿಂದ 0.9 ಕಿ.ಮೀ ಎತ್ತರದಲ್ಲಿ ವಿಸ್ತರಿಸುತ್ತಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜ್ಯದಾದ್ಯಂತ ಮುಂದಿನ 5 ದಿನಗಳವರೆಗೆ ಅಲ್ಲಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗಲಿದ್ದು, ಗಾಳಿಯ ವೇಗ ಗಂಟೆಗೆ 40–60 ಕಿಮೀ ತಲುಪುವ ಸಾಧ್ಯತೆ ಇದೆ ಎಂದು ಹೇಳಿದೆ. ಅಂತೆಯೇ ಹಲವು ಜಿಲ್ಲೆಗಳಲ್ಲಿ ಅಲ್ಲಲ್ಲಿ ಚದುರಿದಂತೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಕರ್ನಾಟಕದ ಒಳನಾಡು ಅಂದರೆ ವಿಜಯನಗರ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಹಾಸನ, ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ, ಚಾಮರಾಜನಗರದಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಲಿದ್ದು, ಕೋಲಾರದ ಮುಳಬಾಗಿಲು, ಬಂಗಾರಪೇಟೆಯಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಂಡ : ನನಗೆ ತುಂಬಾ ಎದೆ ನೋವಿದೆ. ಬೇಗ ಆಂಬ್ಯುಲೆನ್ಸ್‌ಗೆ ಫೋನ್ ಮಾಡು.

ಪತ್ನಿ : ಹೌದಾ ಮಾಡ್ತೀನಿ... ಬೇಗ ನಿಮ್ಮ ಮೊಬೈಲ್ ಪಾಸ್‌ವರ್ಡ್ ಹೇಳಿ!

ಗಂಡ : ಬಿಡು ಈಗ ಸ್ವಲ್ಪ ಆರಾಮಾಗುತ್ತಿದೆ!

ಮೈಸೂರು ಮಿತ್ರ

ಮಂಗಳವಾರ, 29 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬೇರೆಯವರಿಗೆ ಇಷ್ಟವಾಗಬೇಕೆಂದು ನೀವು ಬದಲಾಗಬೇಡಿ. ನಿಮ್ಮಿಷ್ಟಕ್ಕೆ ನೀವೇ ಬದಲಾಗಿ. ಆಗ ಜನರು ತಂತಾನೇ ನಿಮ್ಮತ್ತ ಆಕರ್ಷಿತರಾದರೂ ಆಶ್ಚರ್ಯಪಡಬೇಕಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?

ನಿಮ್ಮ ಪತ್ರಗಳು

ಹಾಪ್‌ಕಾಮ್ಸ್‌ನಿಂದ ಹಗಲುದರೋಡೆ

ಮಾನ್ಯರೆ,



ಮೈಸೂರು ನಗರದ ಜನನಿಬಿಡ ಪ್ರದೇಶದ ಹಲವಾರು ಕಡೆಗಳಲ್ಲಿ ಜಿಲ್ಲಾ ತೋಟಗಾರಿಕಾ ಇಲಾಖೆಯ ಅಂಗ ಸಂಸ್ಥೆಯಾದ ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ತಾಜಾ ದ್ರಾಕ್ಷಾರಸವೆಂದು 250 ಮಿ.ಲೀ ಇರುವ ಬಾಟಲ್ ಒಂದಕ್ಕೆ ರೂ.20ಕ್ಕೆ ಮಾರಾಟ ಮಾಡುತ್ತಿದ್ದಾರೆ. ಈ ದ್ರಾಕ್ಷಾರಸ ಅತ್ಯಂತ ಕಳಪೆ ಗುಣಮಟ್ಟದ್ದಾಗಿದ್ದು ನೀರು ಕುಡಿದಂತೆ ಇರುತ್ತದೆ. ನೀರಿಗೆ ನೀಲಿ ಬಣ್ಣ ಬೆರೆಸಿದಂತೆ ಇರುತ್ತದೆ. ಈ ಒಂದು ಬಾಟಲ್‌ಗೆ ಹೆಚ್ಚೆಂದರೂ ರೂ. 5 ಸಹ ಖರ್ಚಾಗಿರುವುದಿಲ್ಲ.

ಇದು, ಮೈಸೂರಿನಲ್ಲಿ ಹಾಪ್‌ಕಾಮ್ಸ್‌ನವರು ನಡೆಸುತ್ತಿರುವ 'ಹಗಲುದರೋಡೆ' ಎನ್ನಬಹುದು. ಸಾರ್ವಜನಿಕರು ಬಿಸಿಲ ಬೇಗೆ ತಾಳಲಾರದೇ ವಿಧಿ ಇಲ್ಲದೆ ಈ ದ್ರಾಕ್ಷಾರಸ ಕುಡಿಯುವಂತಾಗಿದೆ. ಮೈಸೂರು ನಗರದಲ್ಲೇ ಸಾವಿರಾರು ಮಂದಿ ಈ ದ್ರಾಕ್ಷಾರಸವನ್ನು ಪ್ರತಿದಿನವೂ ಕುಡಿಯುತ್ತಾರೆ. ಈ ಬಗ್ಗೆ ಹಳೆ ಕೋರ್ಟ್ ಮುಂಭಾಗದಲ್ಲಿ ಮಾರಾಟ ಮಾಡುವವರನ್ನು ಪ್ರಶ್ನಿಸಿದರೆ ಸಾರ್, ನೀವು ಜಿಲ್ಲಾ ಹಾಪ್‌ಕಾಮ್ಸ್ ಕಚೇರಿಗೆ ಹೋಗಿ ದೂರು ನೀಡಿ ಎಂದು ತಮ್ಮ ಅಸಹಾಯಕತೆಯನ್ನು ತೋರಿಸುತ್ತಾರೆ. ಜಿಲ್ಲಾ ಹಾಪ್‌ಕಾಮ್ಸ್ ಹಿರಿಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಹಾಪ್‌ಕಾಮ್ಸ್ ಹೆಸರಿನಲ್ಲಿ ಡೂಪ್ಲಿಕೇಟ್ ದ್ರಾಕ್ಷಾರಸ ಮಾರಾಟವಾಗುತ್ತಿದೆಯಾ? ಎಂಬುದರ ಬಗ್ಗೆ ಪರಿಶೀಲನೆ ಮಾಡಿ, ಸಾರ್ವಜನಿಕರಿಗೆ ಶುದ್ಧ ದ್ರಾಕ್ಷಾರಸ ಕೊಡುವ ವ್ಯವಸ್ಥೆ ಮಾಡಿ, ನಿಮ್ಮ ಹಾಪ್‌ಕಾಮ್ಸ್‌ಗೆ ಈ ದ್ರಾಕ್ಷಾರಸ ಕುಡಿದ ಜನರು ಹಿಡಿಶಾಪ ಹಾಕುತ್ತಿದ್ದಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕುಸಿಯುವ ಸ್ಥಿತಿಯಲ್ಲಿ ಮಕ್ಕಳ ಆಂಜನೇಯಸ್ವಾಮಿ ದೇವಸ್ಥಾನ



ಮಾನ್ಯರೆ,

ಮೈಸೂರು ಅರಮನೆಯ ಆಡಳಿತಕ್ಕೆ ಒಳಪಡುವ ಶ್ರೀ ಒಂಟಿ ರಾಮಾಚಾರ್ಯರ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಐತಿಹಾಸಿಕ ಇತಿಹಾಸವಿದೆ. ಈ ದೇವಸ್ಥಾನವು ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿದೆ. ಈ ದೇವಸ್ಥಾನ ಶಾಂತಮೂರ್ತಿ ಆಂಜನೇಯ ಹಾಗೂ ಮಕ್ಕಳ ಆಂಜನೇಯ ದೇವಸ್ಥಾನ ಎಂದು ಕೂಡ ಪ್ರಸಿದ್ಧಿಯಾಗಿದೆ. ಅರಮನೆಯ ಜಯರಾಮ ದ್ವಾರದ ಪಕ್ಕದಲ್ಲಿ ಈ ದೇವಸ್ಥಾನವಿದೆ. ಈ ದೇವಸ್ಥಾನದ ಗರ್ಭಗುಡಿ ಹಾಗೂ ಚಾವಣಿ ಕುಸಿಯುವ ಹಂತದಲ್ಲಿದೆ. ಸಂಬಂಧಪಟ್ಟ ಇಲಾಖೆಯವರು ಪುರಾತನ ಇತಿಹಾಸ ಪ್ರಸಿದ್ಧ ದೇವಸ್ಥಾನವನ್ನು ಪುನರ್ ನಿರ್ಮಾಣ ಮಾಡುವ ಮೂಲಕ ಭಕ್ತರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು.

ಈ ವಕ್ಫ್ ಮಂಡಳಿಗೆ ಏನಾಗಿದೆ?

ಮಾನ್ಯರೆ,

ಮೈಸೂರಿನ ವಿನೋಬಾ ರಸ್ತೆಯಲ್ಲಿರುವ 110 ವರ್ಷಗಳ ಸುದೀರ್ಘ ಇತಿಹಾಸ ಇರುವ ಎಂ.ಕೆ.ಹಾಸ್ಟೆಲ್‌ಗೆ ಸೇರಿರುವ ಜಾಗಕ್ಕೆ ವಕ್ಫ್ ಮಂಡಳಿ ನಮಗೆ ಸೇರಿದ ಆಸ್ತಿ ಎಂದು ಏಕಾಏಕಿ ನೋಟಿಸ್ ಜಾರಿ ಮಾಡಿ ಮೇ 9ರೊಳಗೆ ಉತ್ತರ ನೀಡಬೇಕು ಎಂದು ಆಗ್ರಹಿಸಿರುವುದು ಮೈಸೂರಿಗರಿಗೆ ತುಂಬಾ ಆಶ್ಚರ್ಯವಾಗಿದೆ. 2013ರ ವಕ್ಫ್ ಕಾಯ್ದೆ ತಿದ್ದುಪಡಿಯ ಪ್ರಕಾರ ಸರ್ಕಾರಿ ಜಮೀನಾಗಲೀ, ಖಾಸಗಿ ಜಮೀನಾಗಲೀ ವಕ್ಫ್ ಮಂಡಳಿ ತಮ್ಮದಾಗಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಈ ಕಾಯ್ದೆ ತಿದ್ದುಪಡಿಯಿಂದ ದೇಶದಾದ್ಯಂತ ವಕ್ಫ್ ಮಂಡಳಿ ಸುಮಾರು ಆಸ್ತಿಗಳನ್ನು ತಮ್ಮದಾಗಿಸಿಕೊಂಡಿರುವ ಸಂಗತಿ ಪ್ರತಿಯೊಬ್ಬ ಭಾರತೀಯರಿಗೆ ಇತ್ತೀಚಿನ ದಿನಗಳಲ್ಲಿ ಗೊತ್ತಾಗಿ ತುಂಬಾ ಹತಾಶೆ ಮತ್ತು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಇನ್ನು ಮುಂದಾದರೂ ವಕ್ಫ್ ಮಂಡಳಿ ತಮಗೆ ಸೇರಿದ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳು ಇದ್ದಲ್ಲಿ ನ್ಯಾಯಯುತವಾಗಿ ತಮ್ಮದಾಗಿಸಿಕೊಳ್ಳಲಿ. ಅದನ್ನು ಬಿಟ್ಟು ಏಕಾಏಕಿ ನಮ್ಮ ಆಸ್ತಿ ಎಂದು ನೋಟಿಸ್ ಜಾರಿಗೊಳಿಸಿದರೆ ಸಾಮಾನ್ಯ ಜನತೆಯ ಪಾಡೇನು. ನಮ್ಮ ದೇಶದಲ್ಲಿ ಇನ್ನೂ ಸಹ ಹಳ್ಳಿಗಳಲ್ಲಾಗಲೀ ಅಥವಾ ನಗರಗಳಲ್ಲಾಗಲೀ ಕೂಡು ಕುಟುಂಬದ ಆಸ್ತಿಗೆ ಸರಿಯಾದ ಮೂಲ ದಾಖಲೆಗಳನ್ನು ಮಾಡಿಸಿಕೊಳ್ಳಲು ನಮ್ಮ ಜನರು ಗ್ರಾಮ ಪಂಚಾಯಿತಿ, ನಗರಸಭೆ, ಮುಡಾ, ಬಿಡಿಎ ಕಚೇರಿಗಳಿಗೆ ಅಲೆದಲೆದು ಅಲ್ಲಿ ಲಂಚ ಕೊಡಲಾಗದೆ ಸಾಕಾಗಿ ಗೊಣಗಿಕೊಳ್ಳುವುದನ್ನು ಪ್ರತಿ ದಿನ ನೋಡತ್ತಾ ಇದ್ದೇವೆ. ಅದರೊಳಗೆ ವಕ್ಫ್ ಮಂಡಳಿ ಕೆಲವು ಆಸ್ತಿಗಳು ನಮಗೆ ಸೇರಿದ್ದು ಎಂದು ನೋಟಿಸ್ ನೀಡುತ್ತಿರುವುದು ಸೋಜಿಗದ ಸಂಗತಿಯೇ ಸರಿ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸಹನೆಗೆ ಒಂದು ಮಿತಿ ಇರಲಿ

ಮಾನ್ಯರೆ,

ಇತ್ತೀಚೆಗೆ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು 26 ಜನರನ್ನು ಗುಂಡಿಟ್ಟು ಕೊಂದ ಕೃತ್ಯ ಎಲ್ಲರಲ್ಲೂ ಆಕ್ರೋಶ ಬರುವಂತೆ ಮಾಡಿದೆ. ಅವರಾರು ಪೊಲೀಸರು ಅಲ್ಲ. ಸೈನಿಕರು ಅಲ್ಲ. ಅಮಾಯಕರನ್ನು ಗುಂಡಿಟ್ಟು ಸಾಯಿಸಿದ ಘಟನೆಗೆ ಪ್ರತೀಕಾರ ತೆಗೆದುಕೊಳ್ಳಬೇಕಿದೆ. ಇದೊಂದು ಹೇಯಕೃತ್ಯ. ಈ ಘಟನೆಗೆ ಕಾರಣರಾದವರು, ಸಂಚು ರೂಪಿಸಿದವರು, ಇದಕ್ಕೆ ಹಣಕಾಸು ನೆರವು ನೀಡಿದವರು, ತರಬೇತಿ ನೀಡಿದವರನ್ನು ಶಿಕ್ಷಿಸಬೇಕಾಗಿದೆ. ಎಲ್ಲಾ ಧರ್ಮದ ಜನರು ಇದನ್ನು ಉಗ್ರವಾಗಿ ಖಂಡಿಸಿದ್ದಾರೆ. ಆದರೆ ಇದಷ್ಟೇ ಸಾಲದು. ಇಸ್ರೇಲ್ ಮಾದರಿ ಪ್ರತ್ಯುತ್ತರ ಶತ್ರುಗಳಿಗೆ ಕೊಡಬೇಕಾದ ಸಮಯ ಈಗ ಬಂದಿದೆ. ಭವಿಷ್ಯದಲ್ಲಿ ಇಂತಹ ಭಯಾನಕ ಹತ್ಯಾಕಾಂಡಗಳು ಮರುಕಳಿಸಬಾರದು. ಭಯೋತ್ಪಾದನೆಯನ್ನು ಬುಡದಲ್ಲಿ ಚಿವುಟಿ ಹಾಕುವಂತ ಕೆಲಸ ಆಗಬೇಕು. ಇಂಥ ಹೇಯ ಕೃತ್ಯವನ್ನು ಮಾಡಲು ಭಯೋತ್ಪಾದಕರು ಕೂಡ ಹೆದರಬೇಕು. ನಾವು ಕೊಡುವ ಶಿಕ್ಷೆ ಭವಿಷ್ಯದಲ್ಲಿ ಯಾರೂ ಇಂತ ದುಸ್ಸಾಹಸಕ್ಕೆ ತೊಡಗಬಾರದು. ಅಂದಾಗ ಮಾತ್ರ ಭವಿಷ್ಯದ ಕಾಶ್ಮೀರ ಮತ್ತು ಭಾರತ ಸುರಕ್ಷಿತವಾಗಿ ಇರಬಲ್ಲದು.

–ಕೃಷ್ಣ ಹೆಗಡೆ, ರಾಜರಾಜೇಶ್ವರಿ ನಗರ ಮೈಸೂರು.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ,
ಮೈಸೂರು.
ಮೊ.ನಂ.: 94490 10009

ಕಸ್ಟಡಿ

ಪುಂಡ–ಪೋಕರಿಗಳಿಗೆ ಪಾಠ ಕಲಿಸಲು ಸುಸಮಯ!

ಉಗ್ರರನ್ನು ಉಡಾಯಿಸಲು ಜೀರೋ ಟಾಲರೆನ್ಸ್‌ನ ಕಾರ್ಯಾಚರಣೆ ಈಗಲಾದರೂ ಶುರುವಾಗಿದೆ. 28 ಅಮಾಯಕ ಜನರ ಬಲಿದಾನಕ್ಕೆ ಶಾಸ್ತಿ ಮಾಡಲು ಸೇನೆ ತಕ್ಕ ರೀತಿಯಲ್ಲಿ ಸಜ್ಜುಗೊಂಡಿದೆ.

ರಣಪಾತಕಿ ಉಗ್ರರು ಯಾರ್‍ಯಾರು, ಅವರಿಗೆ ಸಪೋರ್ಟ್ ಮಾಡುತ್ತಿರುವ ಹೀನರು ಯಾರಿದ್ದಾರೆ, ಅವರೆಲ್ಲರನ್ನೂ ತರಿದು ಹಾಕಲೇಬೇಕು. ಮಾನವೀಯ ಮಂತ್ರ ಹೇಳುವ ಸಮಯ ಇದಲ್ಲ. ಇಲ್ಲಿಯ ಯಾವುದೇ ನಾಗರಿಕ ಕಾನೂನುಗಳಿಗೂ ಉಗ್ರರು ಯೋಗ್ಯರಲ್ಲ. ದೇಶದ ಆಂತರಿಕ ಭದ್ರತೆಗೆ ಧಕ್ಕೆ ತರುವ ಕೆಲಸವನ್ನು ದುರುದ್ದೇಶಪೂರ್ವಕವಾಗಿ ಮಾಡುತ್ತಾ ಬಂದಿದ್ದಾರೆ. ಈ ಪೀಡೆಗಳೆಲ್ಲಾ ಯಾರು ಎತ್ತ ಎಂಬೆಲ್ಲಾ ವಿವರಗಳಿಗೆ ದುರ್ಬೀನು ಹಾಕಬೇಕಿಲ್ಲ. ಸೇನೆ ಮತ್ತು ಪೊಲೀಸರ ಬಳಿ ಇದ್ದೇ ಇವೆ.

ಒಮ್ಮೆ ಉಗ್ರ ನಿಗ್ರಹಾಸ್ತ್ರವನ್ನು ಉಡಾಯಿಸಿದರೆ ಸಾಕು, ಈ ನೀಚ ಕ್ರಿಮಿಗಳು ಉದುರಿ ಹೋಗಬೇಕು; ಹೋಗುತ್ತಾರೆ. ಕಾಶ್ಮೀರದ ಭರ್ತಿ ಸ್ಲೀಪರ್ ಸೆಲ್ಲುಗಳದ್ದೇ ಹಾವಳಿ. ಉಗ್ರರಿಗೆ ಬೇಕಾದ ಮಾಹಿತಿ ಕೊಡುವವರು ಇವರೇ. ಉಗ್ರರು ಎಸೆಯುವ ಕಿಲುಬು ಕಾಸು ನೆಕ್ಕಿಕೊಂಡು ದೇಶದ ಗುಟ್ಟುಗಳ ಮಾಹಿತಿ ಹಂಚುತ್ತಿರುವವರೂ ಇವರೇ. ಇವರನ್ನು ಮೊದಲು ಹೊಡೆದುರುಳಿಸಬೇಕು. ಪಾಕಿಗಳ ಪೇ ರೋಲ್‌ನಲ್ಲಿ ಹಿಂದೂ ಸ್ಲೀಪರ್ ಸೆಲ್ಲುಗಳೂ (ಜನಸಾಮಾನ್ಯರಂತೆ ಇದ್ದುಕೊಂಡು ಉಗ್ರರಿಗೆ ಬೇಕಾದ ಮಾಹಿತಿಗಳನ್ನು, ಇನ್ನಿತರ ಅನುಕೂಲತೆಯನ್ನು ಕಲ್ಪಿಸಿ ಕೊಡುವವರೇ ಸ್ಲೀಪರ್ ಸೆಲ್ಲುಗಳು. ಈ ಘನಕಾರ್ಯಕ್ಕಾಗಿ ಹೇರಳ ಹಣ ಪಡೆಯುತ್ತಾರೆ. ಇವರಲ್ಲಿ ಎಲ್ಲ ಬಗೆಯ ಜನರೂ ಇದ್ದಾರೆ. ಕೂಲಿ, ಅಧ್ಯಾಪಕ, ವಿದ್ಯಾರ್ಥಿ, ಡಾಕ್ಟರು, ಬುದ್ಧಿಜೀವಿ ಹೀಗೆ... ಅಕ್ಕಪಕ್ಕದ ಮನೆಯಲ್ಲೇ ವಾಸವಿದ್ದರೂ ಮತ್ತೊಬ್ಬ ಸ್ಲೀಪರ್ ಸೆಲ್ ಎಂಬುದು ಇನ್ನೊಬ್ಬನಿಗೆ ಗೊತ್ತೇ ಇರುವುದಿಲ್ಲ. ಎಲ್ಲವೂ ಗುಪ್ತ... ಗುಪ್ತ... ಹಾಗಿದೆ. ಇವರ ನೆಟ್ವರ್ಕ್) ಇವರಲ್ಲಿ ಹೆಚ್ಚಿನವರು ನಮ್ಮಲ್ಲಿಯ RTI ಕಾರ್ಯಕರ್ತರಂತೆ, ಸಾಮಾಜಿಕ ಹೋರಾಟಗಾರರ ಸೋಗಿನಲ್ಲಿರುವ ರೋಲ್‌ಕಾಲ್ ಗಿರಾಕಿಗಳು. ಸಾಫ್ಟ್‌ವೇರ್ ತಜ್ಞರು, ವೈದ್ಯರು ಇಂಥವರೂ ಸೇರಿದ್ದಾರೆ. ಅನಾಮಿಕ ಸಾಮಾನ್ಯರೂ ಹೆಚ್ಚಿದ್ದಾರೆ. ಸಾಮಾಜಿಕ ಕಾರ್ಯಕರ್ತರ ಸೋಗಿನಲ್ಲಿ ಉಗ್ರರಿಗೆ ಬೇಕಾದ ಮಾಹಿತಿಯನ್ನು ತಲುಪಿಸುತ್ತಿರುವವರೇ ಇವರು. ಈ ಸೋಗಿನವರು ಯಾರ್‍ಯಾರು, ಏನು ಎತ್ತ ಎಂಬ ಪಟ್ಟಿ ಸೈನ್ಯ ಮತ್ತು ಪೊಲೀಸರ ಬಳಿ ಇದ್ದೇ ಇರುತ್ತವೆ. ಹಿಂದೆ ಇವರುಗಳೆಲ್ಲ ಯಾವ್ಯಾವ ಸಂದರ್ಭಗಳಲ್ಲಿ ಉಗ್ರರ ಜೊತೆಗಿದ್ದರು ಎಂಬ ಅಧಿಕೃತ ಮಾಹಿತಿಯೂ ಇರುತ್ತದೆ. ನೆನಪಿದೆಯೇ? ಮೊನ್ನೆ ಮೊನ್ನೆ ಬೆಂಗಳೂರು, ಮಂಗಳೂರುಗಳಲ್ಲಿ ಹೆಕ್ಕಿ ತೆಗೆದ ಸ್ಲೀಪರ್ ಸೆಲ್ಲುಗಳು! ಒಮ್ಮೆ ಕ್ರಿಮಿನಾಶಕ ಸಿಂಪಡಿಸಿದರೆ ಸಾಕು, ಕಾಶ್ಮೀರ ಸ್ವಚ್ಛವಾಗುತ್ತದೆ. ಇನ್ನು ಮುಂದಿನ ಇಪ್ಪತ್ತು ವರ್ಷ ಈ ಕೇಡಿಗರ ಅಟ್ಟಹಾಸಕ್ಕೆ ಬ್ರೇಕ್ ಬಿದ್ದೆ ಬೀಳುತ್ತೆ.

ಇದ್ಯಾವುದೂ ಹೊಸ ತಂತ್ರವಲ್ಲ. ಸೈನಿಕರು, ಪೊಲೀಸರು ಲಾಗಾಯ್ತಿಯಿಂದ ಮಾಡುತ್ತಿರುವ ಮಾಮೂಲಿ ಕೆಲಸ.

> ನನಗಿಂತ ಹಿಂದಿನವರಾದ ಅರವತ್ತರ ದಶಕದ ಪೊಲೀಸ್ ಅಧಿಕಾರಿಯೊಬ್ಬರಿಗೆ ಈ ಲೇಖನವನ್ನು ಓದಲು ಕೊಟ್ಟಿದ್ದೆ. ಅವರು ಇಂದಿನ ಪೊಲೀಸರಿಗೆ ಹೇಳಿದ ಒಂದು ಕಿವಿಮಾತು: ತಂಟ ಲಮಾರಿ ಕಿತಾಪತಿಗಳು ಯಾರ್‍ಯಾರು ಇದ್ದಾರೋ ಅವರ ಮೇಲೆ ಸಮಯ ಸಿಕ್ಕಾಗಲೆಲ್ಲಾ ಒಂದೊಂದು ಕೇಸು ತಗುಲಿಸುತ್ತಲೇ ಇರಬೇಕು. ಈ ಕಿತಾಪತಿಗಳು, ರೌಡಿ ಮನಸ್ಥಿತಿಯ ಕೇಡಿಗರು ಯಾವತ್ತೂ ಸುಮ್ಮನಿರುವವರಲ್ಲ. ಜೀವಮಾನ ಪರ್ಯಂತ ಶಕುನಿ ಕೆಲಸ ಮಾಡುತ್ತಲೇ ಇರುತ್ತಾರೆ. ಸರಿಯಾದ ಸಂದರ್ಭ ನೋಡಿ ಬಲಿ ಹಾಕಬೇಕು. ಅದಕ್ಕಾಗಿ ಇಂದಿನವರು ರೆಕಾರ್ಡ್ ಬಿಲ್ಡಪ್ ಮಾಡಿಟ್ಟರೆ ಮುಂದಿನವರು ಕ್ರಮ ಜರುಗಿಸಲು ಅನುಕೂಲವಾಗುತ್ತದೆ. ನಮ್ಮ ಕಾಲದಲ್ಲಿ ಹಿಂದಿನವರು ಬರೆದಿಟ್ಟಿದ್ದರಿಂದ ಬಾಲ ಬಿಚ್ಚದಂತೆ ಮಗ್ಗಲು ಮುರಿಯುತ್ತಿದ್ದೆವು.



ಪುಂಡರು–ಪೋಕರಿಗಳು, ಪುಡಿ ರೌಡಿಗಳು ಪ್ರತಿಯೊಂದು ವಿಚಾರದಲ್ಲೂ ತಲೆ ತೂರಿಸಿಕೊಂಡು ಕಿತಾಪತಿ ಮಾಡುತ್ತಿರುವವರ ಮೇಲೆ ಕಣ್ಣಿದ್ದೇ ಇರುತ್ತದೆ. ಅವರಿವರನ್ನು ಎತ್ತಿಕಟ್ಟಿ ವಸೂಲಿ ದಂಧೆ ಮಾಡುವುದು ಈ ಪೀಡೆಗಳ ನಿತ್ಯ ಕಸುಬು. ಕಿತಾಪತಿಯ ಮೂಲಪುರುಷ ಇವನೇ ಅಂತ ಗೊತ್ತಿದ್ದರೂ ಪೊಲೀಸರಿಗೆ ಆ ಸಂದರ್ಭಕ್ಕೆ ಸಾಲಿಡ್ ಸಾಕ್ಷ್ಯವಿಲ್ಲದ ಕಾರಣ ಸುಮ್ಮನಾಗುತ್ತಿದ್ದರು. ಕೈ ಹಾಕೋಣ ಎಂದರೆ ಈ ಕಿತಾಪತಿಗಳೆಲ್ಲ ಆಡಳಿತ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಬೇರೆ. ಸಭೆ–ಸಮಾರಂಭ ಏರ್ಪಡಿಸುವವರು. ಮೀಟಿಂಗುಗಳಿಗೆ ಜನ ಸೇರಿಸುವ ಬ್ರೋಕರ್‌ಗಳಾಗಿರುವವರು. ಇವರ ಮೈ ಮುಟ್ಟುವುದರೊಳಗೆ ಮಂತ್ರಿಯ ಫೋನ್ ಬರುತ್ತದೆ. ಅಂತೂ ಬೀಸುವ ದೊಣ್ಣೆಯಿಂದ ಹೇಗೋ ಬಚಾವ್ ಆಗಿರುತ್ತಿದ್ದರು.

ನೇರ ಕ್ರಮ ಜರುಗಿಸದಿದ್ದರೇನು? ಇವರೆಲ್ಲರ ಕಾರಸ್ಥಾನದ ಜಾತಕವನ್ನು ಠಾಣಾಧಿಕಾರಿ ಬರೆದಿಡುತ್ತಾ ಹೋಗಿರುತ್ತಿದ್ದ. ಆಗಿಂದಾಗಲೇ ಸೆಕ್ಯೂರಿಟಿ ಕೇಸುಗಳಲ್ಲಿ ಇವರನ್ನೂ ಉಪಾಯವಾಗಿ ತಗುಲಿಸಿರುತ್ತಿದ್ದ. ಆಯಾ ಕೇಸಿನಲ್ಲಿ ಪಾಲ್ಗೊಂಡಿದ್ದುದು ನಿಜವಾಗಿರುತ್ತಿದ್ದರಿಂದ ಪೋಕರಿಗಳೂ ಬಾಲ ಬಿಚ್ಚುತ್ತಿರಲಿಲ್ಲ. ತಹಸೀಲ್ದಾರರ ಬಳಿ ಮುಚ್ಚಳಿಕೆ ಬರೆದು ಕೊಡೋದಲ್ವಾ? ಕ್ರಿಮಿನಲ್ ಕೇಸಲ್ಲವಲ್ಲ? ಶಿಕ್ಷೆಯೂ ಇಲ್ಲ. ದಂಡವೂ ಇಲ್ಲ! ಕಾಗದದಲ್ಲಿ ಬರೀ ಮುಚ್ಚಳಿಕೆ ಬರೆದು ಕೊಡುವುದು ತಾನೇ?! ಎಂದು ಧಾರಾಳವಾಗಿ ತಹಸೀಲ್ದಾರರ, ಅಮಾಲ್ದಾರರ ಕೋರ್ಟಿಗೆ ಹೋಗಿ ಸಹಿ ಹಾಕಿ ಬರುತ್ತಿದ್ದರು. ಮರೆಯುತ್ತಿದ್ದರು.

ಆದರೆ ವಿಲೇಜ್ ಹಿಸ್ಟರಿ ಪಾರ್ಟ್ ಫೋರ್‌ನಲ್ಲಿ ಇವರ ಪಾತಕ ಜಾತಕ ಎಂಟ್ರಿಯಾಗಿ ಭದ್ರವಾಗಿರುತ್ತಿತ್ತು. ಹದಿನೈದು ಇಪ್ಪತ್ತು ವರ್ಷ ಕಳೆದಿದ್ದರೂ ಇವೆಲ್ಲವೂ ಜೀವಂತ ರೆಕಾರ್ಡುಗಳೇ. ಮುಂದೊಂದು ದಿನ ಕೋಮು ಗಲಭೆಗಳಾಗಿ, ಕರ್ಫ್ಯೂ ನಿಷೇಧಾಜ್ಞೆಗಳು ಬಿದ್ದಾಗ ಮೊದಲು ಹಿಡಿದು ಜಜ್ಜುವುದೇ ಇವರನ್ನು. ಅದೆಂಗ್ರೀ ಇವರನ್ನು ಹಿಡಿದಿರಿ, ಇವರ ಮೇಲೆ ಯಾವ ಕೇಸೂ ಇಲ್ವಲ್ಲಾ? ಅಂತ ಬರುತ್ತಿದ್ದವರಿಗೆ, ಇವರ ಹಳೆಯ ಪಾತಕ ಚರಿತ್ರೆ ತೋರಿದರೆ ತೆಪ್ಪಗಾಗುತ್ತಿದ್ದರು. 1986 ಮತ್ತು 1993ರ ಕೋಮು ಗಲಭೆಗಳಲ್ಲಿ ಇಂತಹ ತಿಗಣೆಗಳನ್ನು ಹಿಡಿದಿಡಿದು ನಿಷ್ಕರುಣೆಯಿಂದ ತಿಕ್ಕಿ ಹಾಕಿದ್ದರಿಂದ ಮೈಸೂರೇನು, ಕರ್ನಾಟಕವೇ 30 ವರ್ಷ ಶಾಂತವಾಗಿತ್ತು. ಇವೆಲ್ಲವೂ ಅಂದಿನ ಹಿರಿಯ ಪೊಲೀಸ್ ಅಧಿಕಾರಿಗಳ ಮುಂದಾಲೋಚನೆಯ ಸತ್ಫಲ. ಆಗಿನ ಮೇಲಧಿಕಾರಿಗಳು ಕೇಸಾಗಿದ್ದ ವ್ಯಕ್ತಿಗಳ ಪರ ವಿರೋಧ ಪಕ್ಷ ಕಟ್ಟಿಕೊಂಡು ಬರುತ್ತಿದ್ದ ಪುಢಾರಿ ಪುಟ್ಟರನ್ನು ಸೆಕ್ಯೂರಿಟಿ ಕೇಸುಗಳಿಗೆ ತಗುಲಿಸಲು ತಾಕೀತು ಮಾಡುತ್ತಿದ್ದರು. ಹೊಡೆದಾಟ–ಬಡಿದಾಟದ ಕೇಸು ಕೋರ್ಟಿಗೆ ಹೋಗುತ್ತಿತ್ತು. ಅದರ ಜೊತೆಗೆ ಇಂತಹ ಗುಂಪುಗಲಭೆ ವಗ್ಗೈರೆಗಳು ಮುಂದೆ ನಡೆಯದಿರಲಿ ಎಂಬ ಮುಂಜಾಗ್ರತೆಗಾಗಿ ಹಾಕುತ್ತಿದ್ದುದೇ ಸೆಕ್ಯೂರಿಟಿ ಕೇಸುಗಳು. ಇನ್ನು ಮುಂದೆ ಜಗಳ–ಜೂಟಿಗೆ ಹೋಗುವುದಿಲ್ಲವೆಂದು ಅಮಾಲ್ದಾರರ ಕೋರ್ಟಿನಲ್ಲಿ ಬರೆದು ಕೊಡುವ ಮುಚ್ಚಳಿಕೆ! ಮುಂದೆ ಅದೇ ಕಾಳಿಂಗ ಸರ್ಪವಾಗಿ ಕಡಿಯುತ್ತೆ ಎಂದು ಮೊದಲಲ್ಲಿ ಗೊತ್ತೇ ಆಗುತ್ತಿರಲಿಲ್ಲ. ಯಾವಾಗ ಕರ್ಫ್ಯೂ ವಿಧಿಸುವಷ್ಟು ದೊಡ್ಡ ಗಲಭೆಗಳಾದವೋ? ಆಗ ಹಳೇ ತಂಟ ಲಮಾರಿಗಳನ್ನೆಲ್ಲಾ ಹಿಡಿದು ಒಮ್ಮೆಲೇ ಒಳಹಾಕಿದರು. ಅವನು ಶಾಂತಿಭಂಗ ಮಾಡುವ ಚಾಳಿಬಿದ್ದ habitual ದುಷ್ಕರ್ಮಿ ಎಂಬುದಕ್ಕೆ ರೆಕಾರ್ಡುಗಳು ಮೊದಲಿಂದ ಬಿಲ್ಡಪ್ ಆಗಿರುತ್ತಿತ್ತು. ಈಗ ಕಾಶ್ಮೀರದಲ್ಲಿ ಅಂತಹ ಸಂದರ್ಭ ತಾನಾಗಿ ಬಂದಿದೆ. ಯಾರ್‍ಯಾರು ಚಾಳಿ ಬಿದ್ದ habitual ತಂಟ ಲಮಾರಿಗಳೋ, ಉಗ್ರರಿಗೆ ಬೆಂಬಲ ಕೊಟ್ಟುಕೊಂಡು ಹಿಂಸಾಚಾರಕ್ಕೆ ಪ್ರಚೋದನೆ ಕೊಡುತ್ತಿದ್ದರೋ ಅಂಥವರನ್ನೆಲ್ಲ ಹೆಕ್ಕಿ ಹೊಸಕಿ ಹಾಕಬೇಕು. ಆಗ ಕಾಶ್ಮೀರ ಪುನಃ ಪ್ರೇಮ ಕಾಶ್ಮೀರವಾಗಿ ಕಂಗೊಳಿಸಬಲ್ಲದು.

ಇತ್ತೀಚಿನ ಬೆಳವಣಿಗೆಯಲ್ಲಿ ಹೊಸ ಪುಂಡರ ತಳಿ ಬಾಲ ಬಿಚ್ಚಿದೆ. ವಾಟ್ಸಪ್‌ನಲ್ಲಿ ಕೊಂಚ ಸುದ್ದಿ ಬಂದರೆ ಸಾಕು. ಸಾವಿರಗಟ್ಟಲೆ ಠಾಣೆಗೆ ಮುತ್ತಿಗೆ ಹಾಕುವುದು. ಸಾರ್ವಜನಿಕ ಆಸ್ತಿ–ಪಾಸ್ತಿ ಲೂಟಿ ಮಾಡಿ ಅಮಾಯಕರ ಮೇಲೆ ಹಲ್ಲೆ ಮಾಡುವ ನವ ಪುಂಡರ ಸಂತತಿ ಹುಟ್ಟಿಕೊಂಡಿದೆ. ಈಗೇನು ಬಿಡಿ. ಬಲಿ ಹಾಕಲು ಹಿಂದಿನಷ್ಟು ಕಷ್ಟವಿಲ್ಲ. ವೀಡಿಯೋ ಸಮೇತವಾಗಿ ಇವರ ಪುಂಡಾಟಿಕೆ ದಾಖಲಾಗಿರುತ್ತೆ ಸಿಸಿಟೀವಿ, ವಾಟ್ಸಪ್ ಎಲ್ಲದರಲ್ಲೂ ಸಾಲಿಡ್ ಸಾಕ್ಷ್ಯ ಸಿಗುತ್ತದೆ. ಯಾವತ್ತಿದ್ದರೂ ಇವುಗಳೆಲ್ಲಾ ಬಲೆಯೊಳಗಿನ ಮಿಕಗಳು. ಸಮಯ ಸಾಧಿಸಿ ಬಗ್ಗು ಬಡಿದರೆ ಮತ್ತೆ ಮೂವತ್ತು ವರ್ಷ ಯಾವುದೇ ಊರು ಶಾಂತವಾಗಿರಬಲ್ಲದು!

ಹಿಂದಿನ ತಲೆಮಾರಿನ ಪೊಲೀಸ್ ಅಧಿಕಾರಿಗಳ ಕಾರ್ಯವೈಖರಿ ನೆನಪಾಗುತ್ತದೆ. ಊರಲ್ಲಿ ಗುಂಪು ಘರ್ಷಣೆಯಾಯಿತು ಎಂದರೆ ಮುಗಿಯಿತು. ರೆಗ್ಯುಲರ್ ಕೇಸಿನ ಜೊತೆಗೆ ಸೆಕ್ಯೂರಿಟಿ ಕೇಸುಗಳನ್ನು ಬಿಡದೆ ಹಾಕಿಸುತ್ತಿದ್ದರು. ನಮಗೋ ಆಶ್ಚರ್ಯ. ಎಲ್ಲರನ್ನೂ ಒದ್ದು ಒಳ ಹಾಕಿ ಕ್ರಿಮಿನಲ್ ಕೇಸು ಜಡಿದಿದ್ದೇವಲ್ಲಾ? ಶಿಕ್ಷೆ ದಂಡ ಯಾವುದೂ ಇಲ್ಲದ ಸೆಕ್ಯೂರಿಟಿ ಕೇಸಿನ ಅಗತ್ಯವಿದೆಯೇ, ಸನ್ನಡತೆಗಾಗಿ ಬರೀ ಮುಚ್ಚಳಿಕೆ ಬಾಂಡ್ ಬರೆದುಕೊಟ್ಟರೆ ಏನು ಮಹಾ ಆದೀತು?

ಆಗಿನ ಪೊಲೀಸಿಂಗ್‌ನಲ್ಲಿ ಸೆಕ್ಯೂರಿಟಿ ಕೇಸು ಹಾಕುವುದು ಎಂದರೆ ಗಲಭೆಯಲ್ಲಿ ಭಾಗವಹಿಸಿದ್ದವರು ಮಾತ್ರವಲ್ಲ. ಆಯಾ ಗುಂಪುಗಳ ವಯಸ್ಸಾದ ತಂದೆ–ತಾಯಿ, ಮದುವೆಯಾಗದ ಹೆಣ್ಣು ಮಕ್ಕಳು ಇವರನ್ನೂ ಗಲಭೆಕೋರರೆಂದು ಸೇರಿಸಿರುತ್ತಿದ್ದರು. ಜೀವ ಹೋದ್ರೂ ರಾಜಿ ಆಗೊಲ್ಲಾ ಎಂದು ಪ್ರತಿಜ್ಞೆ ಮಾಡಿದ್ದ ಹೀರೋಗಳೆಲ್ಲ ಮೂರನೇ ಹಿಯರಿಂಗಿಗೆ ಮೆತ್ತಗಾಗಿರುತ್ತಿದ್ದರು. ಮದುವೆಯಾಗದ ಹೆಣ್ಣುಮಕ್ಕಳನ್ನು ಕೇಸಿಗೆ ಸಿಕ್ಕಿಸಿದರೆ ಅವರೇನು ಮಾಡಿಯಾರು ಮನೆ ಹೆಂಗಸರೆಲ್ಲಾ ಅಪರಾಧಿಗಳಾಗಿ ಕೋರ್ಟಿನ ಮುಂದೆ ದಿನವಿಡೀ ನಿಲ್ಲಬೇಕಿತ್ತು. ಖಾಯಿಲೆಯಿಂದ ನರಳುವ ವೃದ್ಧ ತಂದೆ–ತಾಯಂದಿರಿಗೂ ಇದೇ ಗತಿ. ಮನೆ ಮರ್ಯಾದೆಯ ಪ್ರಶ್ನೆ. ಎದುರಾಳಿ ಗುಂಪಿನ ಪರಿಸ್ಥಿತಿಯೂ ಇದೇ! ಮುಚ್ಚಿಕೊಂಡು ತಾವಾಗಿ ರಾಜಿಯಾಗುತ್ತಿದ್ದರು. ಊರಲ್ಲಿ ಶಾಂತಿ ನೆಲೆಸುತ್ತಿತ್ತು.

ಇದರಲ್ಲಿ ಅಗೋಚರವಾದ ಇನ್ನೊಂದು ಪಾತಾಳಗರಡಿ ತಳದಲ್ಲೇ ಇರುತ್ತಿತ್ತು. ಜಗಳ ಹಚ್ಚಿ ಕೊಡುತ್ತಿದ್ದ ಕಿತಾಪತಿಯ ಹೆಸರೂ ಸೇರಿರುತ್ತಿದ್ದ ರಿಂದ ಅವನ ಸರದಿ ಬರುತ್ತಿದ್ದುದು ಮುಂದೊಂದು ದಿನ ನಡೆಯುವ ಇಂತಹ ಗಲಭೆ ಸಂದರ್ಭಗಳಲ್ಲಿ!.

ಆಗೆಲ್ಲಾ ಒಂದು ಮಾತು ಪ್ರಚಲಿತದಲ್ಲಿತ್ತು. ಗಲಾಟೆಗಳಾದಾಗ ಠಾಣಾಧಿಕಾರಿ ಮೊದಲೇ ಸೆಕ್ಯೂ ರಿಟಿ ಕೇಸು ಹಾಕಿದ್ದರೆ ಬಚಾವ್. ಅಕಸ್ಮಾತ್ ನಂತರದಲ್ಲಿ ಏನಾದರೂ ಕೊಲೆ, ಮರು ಗಲಾಟೆ ಸಂಭವಿಸಿತು ಅಂದರೆ ಆ ಠಾಣಾಧಿಕಾರಿಗೆ ಕುತ್ತು ಬರುತ್ತಿತ್ತು. ಸೆಕ್ಯೂರಿಟಿ ಕೇಸು ಮೊದಲೇ ಹಾಕಿದ್ದಿದ್ದರೆ ಬರೀ ಸಸ್ಪೆಂಡ್ ಆಗುತ್ತಿದ್ದ. ಇಲ್ಲವೆಂದರೆ ತೀವ್ರ ನಿರ್ಲಕ್ಷ್ಯ, ಬೇಜವಾಬ್ದಾರಿತನಕ್ಕಾಗಿ ಡಿಸ್‌ಮಿಸ್ಸೇ ಆಗುತ್ತಿದ್ದ!

ಅದು ಅಂದಿನ ಪೊಲೀಸು. ಉಕ್ಕಿನ ಹಸ್ತಗಳಲ್ಲಿ ಪುಂಡಾಟಿಕೆಯನ್ನು ಬಗ್ಗು ಬಡಿಯುತ್ತಿದ್ದರು. ರೆಕಾರ್ಡ್ ಬಿಲ್ಡಪ್ ಮಾಡಿಟ್ಟು, ದುರ್ಭರ ಸನ್ನಿವೇಶ ಎದುರಾದಾಗ ಪುಂಡರು ಪೋಕರಿಗಳನ್ನು ಜಜ್ಜಿ ಬಿಡುತ್ತಿದ್ದರು. ಮೊನ್ನಿನ ದುರ್ಘಟನೆ ನಡೆದೊಡನೆ ಉಗ್ರರನ್ನು ಮಟ್ಟ ಹಾಕುತ್ತೇವೆ ಎಂಬ ಸುದ್ದಿ ಪ್ರಕಟವಾಯಿತು.

ಕಾಶ್ಮೀರದಲ್ಲಿ ಅದೇ ದಿನ 1500 ಪುಂಡರನ್ನು ಬಂಧಿಸಿದರು ಎಂದರೆ, ಅವರಿಗೆಲ್ಲಾ ಕ್ರಿಮಿನಲ್ ದಾಖಲೆ ಇದ್ದಿರಲೇ ಬೇಕು. ಹೊಸಕಿ ಹಾಕಲು ಇದಕ್ಕಿಂತ ಸುಸಮಯ ಬೇರೆ ಬೇಕೇ? ಪುರಾತನ ಪಾಪಕ್ಕೆ ಹೊಸ ರಶೀತಿ!

ವಿ.ಶ್ರೀನಿವಾಸ ಪ್ರಸಾದ್; ಹೆಸರಲ್ಲಿದೆ ಸಾಮಾಜಿಕ ಕಂಪನ

ಶ್ರೀನಿವಾಸ್ ಪ್ರಸಾದ್ ಕುರಿತಾಗಿ 'ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯ' ಎಂಬ ರವಿ ಬೆಳಗೆರೆ ವ್ಯಾಖ್ಯಾನ ಅತ್ಯಂತ ಔಚಿತ್ಯಪೂರ್ಣವಾದದ್ದು. ಪ್ರಸಾದರು ಎಂದೆಂದಿಗೂ ಪ್ರಜಾಪ್ರಭುತ್ವವಾದಿ; ಸದಾ ಪ್ರಭುತ್ವದ ವಿರೋಧಿ. ಎಂದೂ, ಯಾರಿಗೂ, ಶರಣಾಗದ ನಿಜಶರಣರ ಪಥದಲ್ಲಿ ಸಾಗಿದ ಪಯಣಿಗ.

ಅವರು ಅಧಿಕಾರಕ್ಕಾಗಿ ಎಂದೂ, ಯಾರ ಮುಂದೆಯೂ ಬೆನ್ನು ಬಾಗಿಸಿದವರಲ್ಲ. ಯಾರ ಮನೆಯ ಬಾಗಿಲನ್ನು ಕಾದಿಲ್ಲ ಎಂಬ ಸತ್ಯ ಜನಮಾನಸದಲ್ಲಿ ಬಲವಾಗಿ ಬೇರೂರಿದೆ. ಈ ನಡವಳಿಕೆಯೇ ಅವರದ್ದು ಎಂತಹ ಮೇರು ವ್ಯಕ್ತಿತ್ವ ಎಂಬುದನ್ನು ಸಾರಿಸಾರಿ ಹೇಳುತ್ತದೆ. ಶತಶತಮಾನಗಳಿಂದ ಅವಮಾನ ಕ್ಕೊಳಗಾದ ಜನ ತಮ್ಮ ನಾಯಕನ ಗುಲಾಮಗಿರಿಯನ್ನು ಎಂದೂ ಒಪ್ಪಲಾರರು. ಇನ್ನೊಬ್ಬರ ಮುಂದೆ ಬಾಗುವುದನ್ನು ಸಹಿಸಲಾರರು. ಅವರು ಎಂದಿಗೂ ಎದೆಗಾರಿಕೆಯಿಂದ ಸ್ವಾಭಿಮಾನವನ್ನು ವಿಜೃಂಭಿಸಬೇಕು ಎಂಬುದು ಪ್ರಸಾದರಲ್ಲಿ ಸದಾ ಜಾಗೃತವಾಗಿತ್ತು. ಇದರಿಂದಲೇ ಶೋಷಿತ ಜನ ಸಮುದಾಯಗಳಿಗೆ ಅವರು ಅತ್ಯಂತ ಆಪ್ತವಾಗಿದ್ದರು.

ಸ್ವಾಭಿಮಾನ ಬಯಸುವ ಜನ ಹಸಿವನ್ನು ಸಹಿಸಿಕೊಂಡು ಬದುಕುತ್ತಾರೆ, ಆದರೆ ಅವಮಾನವನ್ನು ಎಂದೂ ಸಹಿಸುವುದಿಲ್ಲ. ಹೀಗೆ ಅವಮಾನವನ್ನು ಧಿಕ್ಕರಿಸಿದವರಿಗೆ ಪ್ರಸಾದ್ ಪ್ರತಿನಿಧಿಯಾಗಿದ್ದರು. ಶತಶತಮಾನಗಳಿಂದ ಶೋಷಣೆ, ತುಳಿತಕ್ಕೊಳಗಾದವರ ಪರ ನಿಂತವರು. ಶೋಷಣೆಗೊಳಗಾದರೂ ಸ್ವಾಭಿಮಾನ, ಅಚಲ ವಿಶ್ವಾಸದಿಂದ ಸಮಾಜದ ಧ್ವನಿಯಾಗಬಹುದು ಎಂಬುದಕ್ಕೆ ಬಹುದೊಡ್ಡ ನಿದರ್ಶನವಾದರು.

ಕಳೆದ ವರ್ಷ ನಾವು ಸಾಲು ಸಾಲು ದೀಪ ಬೆಳಗಿ ಸಂಕಟಪಟ್ಟೆವು. 'ನಿಮಗೆ ಭಾವಪೂರ್ಣ ಶ್ರದ್ಧಾಂಜಲಿ' ಎಂದು ಬರೆಯುವಾಗ ಕಂಬನಿ ಈ ನೆಲಕ್ಕೆ ಅಪ್ಪಳಿಸಿತ್ತು. ವಿ.ಶ್ರೀನಿವಾಸ ಪ್ರಸಾದ್ ಎಂಬ ಪ್ರಬುದ್ಧ ನಾಯಕ, ಮಾರ್ಗದರ್ಶಕ ಈಗ ನಮ್ಮೊಟ್ಟಿಗಿಲ್ಲ. ಆದರೆ ಜನರ ಮಾತುಗಳಲ್ಲಿರುವ ಸ್ಫೂರ್ತಿಯಲ್ಲಿ ಸುಪ್ತವಾಗಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆಗಳ ಸ್ಮರಣೆಯಲ್ಲಿ, ಸಾಮಾಜಿಕ ಅಸಹನೀಯ ಸಂದರ್ಭಗಳಲ್ಲಿ, ಡಾ.ಸಿದ್ದಲಿಂಗಯ್ಯನವರ 'ನಾಡ ನಡುವಿನಿಂದ ಸಿಡಿದ ನೋವಿನ ಕೂಗೆ...' ಕ್ರಾಂತಿಗೀತೆ ಹಾಡುವ ಘಳಿಗೆಯಲ್ಲಿ, ಹೀಗೆ ಒಂದಿಲ್ಲೊಂದು ಸಂದರ್ಭದಲ್ಲಿ ಪ್ರಸಾದ್ ಅವರನ್ನು ಅತ್ಯಂತ ವಿನಮ್ರವಾಗಿ ನೆನೆಯುತ್ತಾರೆ.

ಆದರೂ ಶ್ರೀನಿವಾಸ ಪ್ರಸಾದರ ಅಗಲಿಕೆಯಿಂದ ಇಡೀ ಸಮಾಜವೇ ಕೆಲಕಾಲ ಸ್ತಬ್ಧವಾಗಿತ್ತು. ಸಾಮಾಜಿಕ ಕಂಪನಗಳ ಮೂಲ ಧ್ವನಿಯನ್ನು ಕಳೆದುಕೊಂಡು ಬಾಧಿಸಿತ್ತು. ಅವರ ಧ್ವನಿಗೆ ಹಲವು ಬಾರಿ ಕಂಪಿಸಿದ್ದನ್ನು ಸ್ಮರಿಸಿಕೊಂಡಿತ್ತು. ಶತಕಗಳಲ್ಲೊಮ್ಮೆ ಸಮಾಜವನ್ನು ಕಂಪಿಸುವ



ಇಂದು ವಿ.ಶ್ರೀನಿವಾಸ ಪ್ರಸಾದ್ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ತನ್ನಿಮಿತ್ತ ಈ ಲೇಖನ

ಮಹನೀಯರ ಅಗಲಿಕೆ ಸಹಿಸುವುದು ಸುಲಭವಲ್ಲ. ದಿನ ಕಳೆದಂತೆ ಅವರ ಅನುಪಸ್ಥಿತಿಯ ಪರಿಣಾಮ ಅರಿವಾಗುತ್ತಿದೆ. ಪ್ರಸಾದ್ ಅವರ ಹೆಸರೇಳಿ ಧೈರ್ಯವಾಗಿ ಬದುಕುತ್ತಿದ್ದ ಸಮಾಜದ ಶೋಷಿತ ವ್ಯಕ್ತಿಗೆ ಪ್ರಸಾದ್ ಅವರೊಂದಿಗೆ ನಾವು ಎಲ್ಲವನ್ನೂ ಕಳೆದುಕೊಂಡೆವು ಎಂದೆನಿಸದಿರಲಾರದು.

ಸಿದ್ದಲಿಂಗಯ್ಯನವರ 'ನಾಡ ನಡುವಿನಿಂದ ಸಿಡಿದ ನೋವಿನ ಕೂಗೆ...' ಸಾಲುಗಳು ಕಿವಿಗೆ ಬೀಳುತ್ತಿದ್ದಂತೆ ಬಂಡೆಯಂತಿದ್ದ ಪ್ರಸಾದರ ಮನಸ್ಸು ಬಿಕ್ಕಿ ಬಿಕ್ಕಿ ಅಳುವುದು ಅವರ ಕಣ್ಣುಗಳಲ್ಲಿ ಗೋಚರಿಸುತ್ತಿತ್ತು. ಸಾವಿರಾರು ಜನರ ಮುಂದೆಯೂ ಅವರ ಕಣ್ಣಾಲಿಗಳು ತೇವವಾಗುತ್ತಿದ್ದವು. ಅಂಬೇಡ್ಕರ್ ಅವರ ಯಾತನೆಯ ಹಾದಿಯಲ್ಲೊಮ್ಮೆ ಸಾಗಿ ಬರುತ್ತಿದ್ದರು. ಆದ್ದರಿಂದಲೇ 'ಅಂಬೇಡ್ಕರ್ ನೋವಿನ ಜ್ವಾಲೆಗಳಿಂದ ಎದ್ದು ಬಂದವರು. ನಮ್ಮೊಳಗಿನ ಅಸ್ಪೃಶ್ಯತೆಯ ನೋವನ್ನು ಯಾರಿಂದಲೂ ಸಹಿಸಲು ಸಾಧ್ಯವಿಲ್ಲ. ಡಾ. ಅಂಬೇಡ್ಕರ್ ಬೌದ್ಧಯಾತ್ರೆ 'ಇಟ್ ಇಸ್ ನಾಟ್ ಎ ಕನ್ವರ್ಷನ್ ಇಟ್ ಇಸ್ ಎ ರಿವರ್ಷನ್'. ನಮ್ಮೆಲ್ಲರ ಅಂತಿಮ ವಿಮೋಚಕ ಅವರು. As Spiritual Leader' ಎಂಬ ತೀಕ್ಷ್ಣ ವಿಚಾರಗಳು ಪ್ರಸಾದ್ ಅವರ ಎದೆಯಿಂದ 'ಬುಲೆಟ್ ವೇಗ'ದಲ್ಲಿ ಈ ಸಮಾಜಕ್ಕೆ ಮುಟ್ಟುತ್ತಿದ್ದವು. ಅವರೇಳಿದಂತೆ ಸಿದ್ದಲಿಂಗಯ್ಯನವರ ಗೀತೆ ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ.

ಗುಂಡಿಗೆ ಇದ್ದವನು ಸಿಡಿಯುತ್ತಾನೆ, ತಾಯ್ತನ ಇದ್ದವನು ಮರುಗುತ್ತಾನೆ. ಈ ವೈರುಧ್ಯ ಭಾವಗಳನ್ನು ಗಣೀಕರಿಸಿದ್ದವರು ಶ್ರೀನಿವಾಸ ಪ್ರಸಾದ್. 'ನಾನು ಮಲಗಿರುವ ಸಿಂಹವನ್ನು ಬೇಟೆಯಾಡುವವನಲ್ಲ, ಅದನ್ನು ಎಬ್ಬಿಸಿ ಹೋರಾಡಿ ಗೆಲ್ಲುವವನು' ಎಂಬ ಎದೆಗಾರಿಕೆಯ ವ್ಯಕ್ತಿತ್ವ ಕರಗಿ ಭಾವಗಳ ನಡುವೆ ಗೌಪ್ಯವಾಗಿತ್ತು. ಅವರೊಬ್ಬ ಫುಟ್ಬಾಲ್ ಪ್ಲೇಯರ್ ಆಗಿ ಗೋಲ್‌ಗಾಗಿ ಸೆಣಸಾಡುವುದು ತಿಳಿದಿದ್ದವರು. ಆದರೆ ರಾಜಕೀಯ ಕ್ರೀಡಾಂಗಣದ 'ಪೆನಾಲ್ಟಿ ಕಾರ್ನರ್ ಕಿಕ್ಕರ್' ಎನಿಸಿಕೊಂಡರು.

ಜಿ.ಕೆ.ಗೋವಿಂದರಾವ್ ಅವರನ್ನು 'ಪೊಲಿಟಿಕಲ್ ಪ್ರೊಫೆಸರ್' ಎನ್ನುತ್ತಿದ್ದ ಅವರು ಎಲ್ಲಾ ಸಮುದಾಯದವರ ನಂಬಿಕೆ, ವಿಶ್ವಾಸ ಗಳಿಸಿದ 'ಸೌಹಾರ್ದ ಸ್ಪಂದನ' ಆಗಿದ್ದರು. ಕರ್ನಾಟಕ ಕಂಡ ಕಳಂಕರಹಿತ 'ವೈಟ್ ಕಾಲರ್' ಎಂಬುದು ಎಲ್ಲಾ ಸಮುದಾಯ ದವರ ಒಕ್ಕೊರಲಿನ ಅಭಿಪ್ರಾಯ. ಬಲು ಎತ್ತರದ ನಿಖರ, ನೇರ, ನಿಷ್ಠೂರ, ಎದೆಗಾರಿಕೆ, ಮಾತೃತ್ವ ಅವರ ಜೀವನ ತತ್ವ. ಬುದ್ಧ–ಬಸವ–ಅಂಬೇಡ್ಕರ್ ಸೈದ್ಧಾಂತಿಕ ಮಾರ್ಗ. ಸಂವಿಧಾನ ಅವರ ಸಾಮಾಜಿಕ ಮಾರ್ಗ. ಧೀಮಂತ ನಡಿಗೆ, ಉರಿವ ಕಂಗಳು, ಸಿಡಿಲಿನಂತಹ ಧ್ವನಿ, ಕಾರುಣ್ಯಗಳ ಮಿಶ್ರಣ ಶ್ರೀನಿವಾಸ ಪ್ರಸಾದ್. `You are Social and Political evidence'(ನೀವು ಸಾಮಾಜಿಕ ಮತ್ತು ರಾಜಕೀಯ ಸಾಕ್ಷಿ). ಬದಲಾಯಿಸುವುದಕ್ಕೆ ಸಂವಿಧಾನ ಮಗ್ಗಿ ಪುಸ್ತಕವಲ್ಲ ಎಂದು ಗುಡುಗಿದ್ದ ಶ್ರೀನಿವಾಸ್ ಪ್ರಸಾದ್, ಶೋಷಿತ ಸಮುದಾಯಗಳು ಈ ಸಮಾಜಕ್ಕೆ ನೀಡಿದ ಈ ಕಾಲಘಟ್ಟದ ಕೊನೆಯ ಕುಡಿ ಎನಿಸುತ್ತದೆ.

ರಾಜಕೀಯ ಕಾರಣಕ್ಕೆ ದೂರುವವರ ಹೃದಯಕ್ಕೂ ಪ್ರಸಾದ್ ಅವರ ಅಗಲಿಕೆ ಆಘಾತ ತಂದಿದೆ. ಸಮಾಜ ನಿಮ್ಮ ಹೋರಾಟದ ಹಾದಿಯನ್ನು ಎಂದೆಂದಿಗೂ ಪ್ರೀತಿಸುತ್ತದೆ. ನಮ್ಮ ಮೇಲೆ ಅತಿಯಾದ ದಬ್ಬಾಳಿಕೆ, ದೌರ್ಜನ್ಯ ನಡೆದಾಗ ತಕ್ಷಣ ನೆನಪಾಗುತ್ತಿದ್ದ 'ನಮ್ಮ ಪ್ರಸಾದ್ ಅಣ್ಣ'ನ ನೆನಪು ಎಂದೆಂದಿಗೂ ಕಾಡದೆ ಬಿಡದು. ಧ್ವನಿ ಇಲ್ಲದವರ ಪ್ರತಿಧ್ವನಿಯಾಗಿದ್ದ ಪ್ರಸಾದ್ ಅವರು, ತಮ್ಮ ನಡೆ–ನುಡಿಯನ್ನು ಯಾರ ರೂಪದಲ್ಲಾದರು ಮತ್ತೆ ಸಮಾಜದಲ್ಲಿ ರೂಪಾಂತರಿಸಲಿ.



– ಮಲ್ಲುಂಡಿ ಮಹದೇವಸ್ವಾಮಿ
73381 50059

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಕಣ್ಣೆದುರೇ ಉಗ್ರರ ಉಗ್ರ ಅಟ್ಟಹಾಸ... ನಮಗಂತೂ ಇದು ಮರುಜನ್ಮ!!

ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ಪೈಶಾಚಿಕ ದಾಳಿ ಸುಳಿಯಿಂದ ಬಚಾವಾಗಿ ಬಂದ ಮೈಸೂರು ದಂಪತಿ!



ಪಹಲ್ಗಾಮ್ ಭಯೋತ್ಪಾದಕ ದಾಳಿಯಿಂದ ಪಾರಾಗಲು ಮೈಸೂರಿನ ಪ್ರಸನ್ನಕುಮಾರ್ ಭಟ್ ಮತ್ತು ಅವರ ಪತ್ನಿ ರಜನಿ ಕುಲಕರ್ಣಿ ಒಂದು ಹೊಂಡದಲ್ಲಿ ಅಡಗಿಕೊಂಡಿದ್ದ ಅತ್ಯಂತ ಆತಂಕಕಾರಿ ಕ್ಷಣ.

- ಉಗ್ರರ ಗುಂಡಿನ ಮೊರೆತಕ್ಕೆ ನೆತ್ತರು ಹರಿಯಿತು
- ಕಾಶ್ಮೀರದ ಸೌಂದರ್ಯದ ನಡುವೆ ಉಗ್ರರ ರುದ್ರನರ್ತನ
- ಭಾರತದ ಮಿನಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಭಯದ ನೆರಳು
- ದುಸ್ವಪ್ನವಾದ ಬೈಸರನ್ ವ್ಯಾಲಿ: ಬೆಳ್ಳಿ ಶಿಖರದ ತಪ್ಪಲಲ್ಲಿ ರಕ್ತಸಿಕ್ತ ಕಲೆ



ಏ.22ರಂದು ನಡೆದ ಭಯೋತ್ಪಾದಕ ದಾಳಿಗೂ ಮುನ್ನ ಪಹಲ್ಗಾಮ್‌ನಲ್ಲಿರುವ ಬೈಸರನ್ ಹುಲ್ಲುಗಾವಲಿನ ರಮಣೀಯ ನೋಟ.

ಮೈಸೂರು, ಏ.28(ಬಿಎಲ್‌ಯು/ಬಿಸಿಟಿ)– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಪ್ರವಾಸಿಗರ ಮಾರಣಹೋಮ ನಡೆಸಿದ ಪೈಶಾಚಿಕ ಕೃತ್ಯದ ಬಗ್ಗೆ ದೇಶಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಕಾಶ್ಮೀರದ ಹಿಮಾಲಯ ತಪ್ಪಲಿನ ಬೆಳ್ಳಿ ಶಿಖರದ ಪ್ರಕೃತಿಯ ವಿಹಂಗಮ ನೋಟದ ಸೌಂದರ್ಯ ಸವಿಯುತ್ತಿದ್ದ ವೇಳೆ ಉಗ್ರರು ನಡೆಸಿದ ಗುಂಡಿನ ದಾಳಿ ಕಣ್ಣಾರೆ ಕಂಡ ಮೈಸೂರಿನ ದಂಪತಿ ಅದೃಷ್ಟವಶಾತ್ ಸಾವಿನ ದವಡೆಯಿಂದ ಪಾರಾಗಿ ಬಂದಿದ್ದಾರೆ.

ಈ ಮೊದಲು ಪ್ರಕೃತಿಯ ಸ್ವರ್ಗ ನೋಡಲು ಬಹಳಷ್ಟು ಜನರು ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗುತ್ತಿದ್ದರು. ಆದರೆ ಅಂಗೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಊರೆಲ್ಲಾ ಸುತ್ತಿದಂತೆ ನಮ್ಮ ದೇಶದಲ್ಲೇ ಪ್ರಕೃತಿ ಸೌಂದರ್ಯದ ಗಣಿಯಾದ ಜಮ್ಮು ಮತ್ತು ಕಾಶ್ಮೀರಕ್ಕೆ ಯಾರೂ ಹೋಗುತ್ತಿರಲಿಲ್ಲ. ಅದಕ್ಕೆ ಕಾರಣ ಉಗ್ರರ ಭಯ.

ಆದರೆ ಜಮ್ಮು-ಕಾಶ್ಮೀರಕ್ಕೆ 370 ವಿಧಿಯನ್ವಯ ಕಲ್ಪಿಸಿದ್ದ ವಿಶೇಷ ಸ್ಥಾನಮಾನ ರದ್ದು ಮಾಡಿದ ಕೇಂದ್ರ ಸರ್ಕಾರ, ಮೂರು ಭಾಗವಾಗಿ ಮಾಡಿ ಉಗ್ರರ ಹತ್ತಿಕ್ಕುವ ಪ್ರಯತ್ನ ಮಾಡಿತ್ತು. ಸೇನೆ ಹದ್ದಿನ ಕಣ್ಣಿಟ್ಟ ಕಾರಣ ಭಯೋತ್ಪಾದಕ ಕೃತ್ಯಕ್ಕೆ ಕಡಿವಾಣ ಬಿದ್ದಿತ್ತು. ಇದರಿಂದ ದೇಶ-ವಿದೇಶದ ಪ್ರವಾಸಿಗರು ಜಮ್ಮು-ಕಾಶ್ಮೀರಕ್ಕೆ ದೌಡಾಯಿಸಲು ಆರಂಭಿಸಿದರು. ಆದರೆ ಈಗ ಪ್ರವಾಸಿಗರು ಜಮ್ಮು-ಕಾಶ್ಮೀರಕ್ಕೆ ಬರದಂತೆ ಭಯ ಹುಟ್ಟಿಸಲು ಬೈಸರನ್ ವ್ಯಾಲಿಯಲ್ಲಿ ಉಗ್ರರು ಪ್ರವಾಸಿಗರ ಮೇಲೆ ಗುಂಡಿನ ಮಳೆಗರೆದು, ಹತ್ಯಾಕಾಂಡ ನಡೆಸಿದ್ದಾರೆ.

ಪತ್ನಿ ರಜನಿ ಕುಲಕರ್ಣಿ ಜೊತೆ ಕಾಶ್ಮೀರ ಪ್ರವಾಸಕ್ಕೆ ಹೋಗಿದ್ದ ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ, ಸಾಫ್ಟ್‌ವೇರ್ ಇಂಜಿನಿಯರ್ ಪ್ರಸನ್ನಕುಮಾರ್ ಭಟ್, ಅಲ್ಲಿ ತಮಗಾದ ಅನುಭವವನ್ನು 'ಮೈಸೂರು ಮಿತ್ರ'ನಿಗೆ ವಿವರಿಸಿದ್ದಾರೆ. ಹಸಿರಿನಿಂದ ಕಂಗೊಳಿಸುತ್ತಿದ್ದ ಬೈಸರನ್ ವ್ಯಾಲಿಯ ರಕ್ತಸಿಕ್ತ ಕಲೆಯ ಭಯಾನಕ ದೃಶ್ಯವನ್ನು ಬಿಚ್ಚಿಟ್ಟಿದ್ದಾರೆ.

ನನ್ನ ಸಹೋದರ ಕಳೆದ ಒಂದೂವರೆ ವರ್ಷದಿಂದ ಶ್ರೀನಗರದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಶ್ಮೀರ ಸೌಂದರ್ಯ ಸವಿಯಲು ಈ ಮೊದಲೇ ನನ್ನ ತಂದೆ-ತಾಯಿ ಹಾಗೂ ಮಗಳು ಶ್ರೀನಗರಕ್ಕೆ ಹೋಗಿದ್ದರು. ತರುವಾಯ ಶ್ರೀನಗರದ ಪ್ರಕೃತಿಯ ವಿಹಂಗಮ ನೋಟ ನೋಡಲು ಪತ್ನಿ ರಜನಿ ಕುಲಕರ್ಣಿ ಜೊತೆ ಹೋಗಿದ್ದೆ.



ಪ್ರಸನ್ನಕುಮಾರ್ ಭಟ್ ಮತ್ತು ಅವರ ಪತ್ನಿ ರಜನಿ ಕುಲಕರ್ಣಿ ಕಾಶ್ಮೀರ ಕಣಿವೆಯಲ್ಲಿ ಕುದುರೆ ಸವಾರಿ ಮಾಡುತ್ತಿರುವುದು.

ಏ.22ರಂದೇ ವಾಪಸ್ಸಾಗಬೇಕಿತ್ತು. ಆದರೆ ಅಲ್ಲಿ ಭಾರಿ ಮಳೆ ಬರುತ್ತಿದ್ದ ಕಾರಣ ಪ್ರವಾಸವನ್ನು ಮತ್ತೆ ಮೂರು ದಿನ ಮುಂದೂಡಿದೆವು. ಕಾಶ್ಮೀರದ 70 ಕಿ.ಮೀ. ವ್ಯಾಪ್ತಿಯಲ್ಲಿ ಬಹುತೇಕ ಪ್ರವಾಸಿ ತಾಣಗಳಿವೆ. ಬಹಳಷ್ಟು ಪ್ರವಾಸಿ ತಾಣಗಳಿಗೆ ಕಾರು ಸೇರಿದಂತೆ ಇತರೆ ವಾಹನದಲ್ಲಿ ಹೋಗಬಹುದು. ಆದರೆ ಪಹಲ್ಗಾಮ್‌ನಿಂದ ಬೈಸರನ್ ವ್ಯಾಲಿಗೆ ಕುದುರೆಯಲ್ಲೇ ಹೋಗಬೇಕು. ಪಹಲ್ಗಾಮ್‌ನಿಂದಲೇ ಅಮರನಾಥ ಯಾತ್ರೆ ಆರಂಭಗೊಳ್ಳಲಿದ್ದು, ಅಲ್ಲಿಂದ 32 ಕಿಲೋ ಮೀಟರ್ ದೂರದಲ್ಲಿ ಶಿವನ ಧ್ಯಾನ ಸ್ಥಳವಿದೆ.

ಬೈಸರನ್, ಒಂದು ರೀತಿ ಹಳ್ಳಿಯ ವಾತಾವರಣವಾಗಿದ್ದು, ಇತ್ತೀಚಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಅಲ್ಲಿ ಹೋಟೆಲ್, ರೆಸಾರ್ಟ್, ಹೋಂ ಸ್ಟೇಗಳು ತಲೆಯೆತ್ತಿವೆ. ಅಣ್ಣ, ಅತ್ತಿಗೆ ಹಾಗೂ ಪತ್ನಿ ಜೊತೆ ಬೆಳಿಗ್ಗೆ 9 ಗಂಟೆಗೆ ಕುದುರೆಯಲ್ಲಿ ಬೈಸರನ್ ವ್ಯಾಲಿಗೆ ಪ್ರಯಾಣ ಆರಂಭಿಸಿದೆವು. ಮಧ್ಯಾಹ್ನ 1.40 ಗಂಟೆಗೆ ಬೈಸರನ್ ವ್ಯಾಲಿ ತಲುಪಿದೆವು. ಅಲ್ಲಿ ನಾವು ನೋಡಿದ ಒಂದೊಂದು ಘಟನೆಯೂ ಭಯಾನಕವಾಗಿತ್ತು. ಜೀವನದಲ್ಲೇ ಎಂದೂ ಕಾಣದ ಬೀಭತ್ಸ ದೃಶ್ಯಗಳು ಅವು.

ನಮ್ಮ ಪ್ರಾಣ ಉಳಿಸಿಕೊಳ್ಳುವ ಅಂತಿಮ ಪ್ರಯತ್ನ!

ಇಂಡಿಯಾದ ಮಿನಿ ಸ್ವಿಟ್ಜರ್‌ಲ್ಯಾಂಡ್ ಎಂದೇ ಪ್ರಖ್ಯಾತಿ ಪಡೆದ ಬೈಸರನ್ ವ್ಯಾಲಿ ಒಳಗೆ ಹೋಗಲು ಟಿಕೆಟ್ ಪಡೆದೆವು. ಅಷ್ಟು ದೂರ ಪ್ರಯಾಣ ಮಾಡಿ ಆಯಾಸವಾಗಿದ್ದ ಹಿನ್ನೆಲೆಯಲ್ಲಿ ಅಲ್ಲಿನ ಟೀ, ಕಾಫಿ ಅಂಗಡಿಯಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆಯಲು ನಿರ್ಧರಿಸಿದೆವು. ಆಗ ಸಮಯ 1.45 ಗಂಟೆಯಾಗಿತ್ತು.

ಟೀ, ಕಾಫಿ ಮಾರುವ ಟೆಂಟ್ ಮುಂದೆ ಟೇಬಲ್ ಮತ್ತು ಚೇರ್‌ಗಳನ್ನು ಹಾಕಲಾಗಿತ್ತು. ಟೀಗೆ ಹಣ ಕೊಟ್ಟು ಕಾಯುತ್ತಿದ್ದೆವು. ಆ ವೇಳೆ ಕಾಶ್ಮೀರಿ ಉಡುಗೆ ತೊಡುಗೆ ಧರಿಸಿ ಫೋಟೋ ತೆಗೆಸಿಕೊಳ್ಳುವಂತೆ ಸ್ಥಳೀಯರು ದುಂಬಾಲು ಬಿದ್ದರು. ನನ್ನ ಪತ್ನಿ ಕಾಶ್ಮೀರಿ ಸಾಂಪ್ರದಾಯಿಕ ಉಡುಗೆ ಧರಿಸಿ ಫೋಟೋಗೆ ಪೋಸ್ ನೀಡಿದರು.

ಹೀಗೆ ಬೈಸರನ್ ವ್ಯಾಲಿ ಮಧ್ಯಭಾಗಕ್ಕೆ ಹೋಗದೆ ಸ್ವಲ್ಪ ಇಲ್ಲೇ ಕಾಲ ಕಳೆಯುತ್ತಿದ್ದೆವು. ಒಂದು ವೇಳೆ ಟೀ ಕುಡಿಯದೆ ಮುಂದೆ ಸಾಗಿದ್ದರೆ ಪ್ರಾಯಶಃ ನಾವು ಕೂಡ ಉಗ್ರರ ದಾಳಿಗೊಳಗಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದೆವು. ಪ್ರಯಾಣದ ಆಯಾಸ ಹಾಗೂ ಟೀ ಕುಡಿಯುವ ತವಕ ನಮ್ಮ ಪ್ರಾಣ ರಕ್ಷಿಸಿತು.

ಉಗ್ರರ ಎಕೆ 47 ಗುಂಡಿನ ಮೊರೆತ; ಪ್ರಾಣತೆತ್ತ ಅಮಾಯಕ ಪ್ರವಾಸಿಗರು

ಟೀ ಕುಡಿಯುತ್ತಿದ್ದ ಸಮಯದಲ್ಲಿ ಗುಂಡಿನ ಶಬ್ದ ಕೇಳಿಸಿತು. ಅದನ್ನು ಕೇಳುತ್ತಿದ್ದಂತೆ ಅರೆಕ್ಷಣ ನಮ್ಮ ಉಸಿರೇ ನಿಂತಂತಾಯ್ತು. ಆದರೆ ನನ್ನ ಅಣ್ಣ ನಮಗೆ ಧೈರ್ಯ ತುಂಬಿದರು. ಇಲ್ಲಿ ಉಗ್ರರು ಬರಲು ಸಾಧ್ಯವಿಲ್ಲ. ಏಕೆಂದರೆ ಭಯೋತ್ಪಾದಕರಿಗೆ ಭಾರತೀಯ ಸೇನೆ ಮಾತ್ರ ಗುರಿ ಆಗಿದೆಯೇ ಹೊರತು ಪ್ರವಾಸಿಗರಲ್ಲ. ಇದರಿಂದ ನೀವು ಯಾರೂ ಹೆದರುವ ಅವಶ್ಯಕತೆ ಇಲ್ಲ ಎಂದು ಧೈರ್ಯ ಹೇಳಿದರು.

ಆದರೆ ಗುಂಡಿನ ಮೊರೆತ ಮತ್ತಷ್ಟು ಹೆಚ್ಚಾಯಿತು. ನನ್ನ ಅಣ್ಣ ಬೈಸರನ್ ವ್ಯಾಲಿಯ ಕೆಳ ಭಾಗ ನೋಡಿದಾಗ ಉಗ್ರರು ದಾಳಿ ನಡೆಸಿರುವುದು ಖಚಿತವಾಯಿತು. ಉಗ್ರರಿಂದ ಪಾರಾಗಲು ಯಾವುದೇ ಸುರಕ್ಷಿತ ತಾಣ ಅಲ್ಲಿರಲಿಲ್ಲ. ಇದರಿಂದ ಭಯಭೀತರಾದ ನಾವೆಲ್ಲರೂ ಅಲ್ಲೇ ಇದ್ದ ಮೊಬೈಲ್ ಶೌಚಾಲಯದ ಬಳಿ ಹೋಗಿ ಮರೆಯಾದೆವು. ಕಿರಿದಾದ ಜಾಗದಲ್ಲಿ ನಮ್ಮಂತೆಯೇ ಭಯಬಿದ್ದ 20 ಮಂದಿ ಒಟ್ಟಾಗಿ ಒತ್ತೊತ್ತಿಗೆ ಬಚ್ಚಿಟ್ಟುಕೊಂಡೆವು.

ಇಣುಕಿ ನೋಡಿದಾಗ ಇಬ್ಬರು ಪ್ರವಾಸಿಗರು ಸತ್ತು ಬಿದ್ದಿರುವ ಭಯಾನಕ ದೃಶ್ಯ ಕಾಣಿಸಿತು. ಹಸಿರು ಹುಲ್ಲು ಹಾಸಿನ ಮೇಲೆ ನೆತ್ತರು ಹರಿದಿತ್ತು. ರಕ್ತ ಸಿಕ್ತ ಜಾಗ ನೋಡಿ ನಾವೆಲ್ಲರೂ ಮತ್ತಷ್ಟು ಭಯಭೀತರಾದೆವು.

ಜೀವ ಬಾಯಿಗೆ ಬಂತು...: ಬ್ಲ್ಯಾಕ್ ಗೌನ್ ಹಾಕಿದ್ದ ಉಗ್ರ ನಮ್ಮ ಬಳಿ ಬರುವುದು ಕಾಣಿಸಿತು. ಗನ್ ಹಿಡಿದಿದ್ದ ಆ ನರಹಂತಕನಿಗೆ ನಾವೇ ಟಾರ್ಗೆಟ್ ಆಗುವುದು ಎಂಬ ಚಿಂತೆಗೆ ಬಿದ್ದೆವು. ಜೀವ ಭಯದಿಂದ ಅಲ್ಲಿಂದ ಓಡಿದೆವು. ಕಿರಿದಾದ ಜಾಗದಲ್ಲಿ ನುಸುಳಿಕೊಂಡು ಮುಂದೆ ಸಾಗಿದೆವು. ಆ ವೇಳೆಗಾಗಲೇ ನಮ್ಮೊಡನೆ 30ರಿಂದ 40 ಪ್ರವಾಸಿಗರಿದ್ದರು. ಮುಂದೆ ಮರಗಳಿರುವ ಕಾಡು ಕಾಣಿಸಿತು. ಅದು ಸರಿಯಾದ ಜಾಗವೆಂದು ತೆವಳಿಕೊಂಡು ಮುಂದೆ ಸಾಗಿದೆವು. ಆಗ ಎಕೆ 47 ಗನ್ ಮೊರೆತ ಮತ್ತಷ್ಟು ಹೆಚ್ಚಾಯಿತು. ಸಿನಿಮಾದಲ್ಲಿ ನೋಡುತ್ತಿದ್ದ ಭಯಾನಕ ದೃಶ್ಯ ಕಣ್ಣೆದುರೇ ನಡೆಯುತ್ತಿತ್ತು. ಆದರೆ ನಾವು ಉಗ್ರರಿಗೆ ಕಾಣಿಸದ ಕಾರಣ ಬಚಾವಾದೆವು. ಆದರೆ ಆ ಪರಿಸ್ಥಿತಿ ನೋಡಿದರೆ ನಮಗೆ ಬದುಕುಳಿಯುವ ನಂಬಿಕೆ ಇರಲಿಲ್ಲ. ನಾವು ಕೂಡ ಉಗ್ರರ ದಾಳಿಗೊಳಗಾಗುತ್ತೇವೋ ಎಂಬ ಭಯ ಕಾಡುತ್ತಿತ್ತು.

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾದು ಹೋಗುವಾಗ ಝರಿಯೊಂದು ಕಾಣಿಸಿತು. ಉಗ್ರರ ವಕ್ರದೃಷ್ಟಿ ಬೀಳದಂತೆ ಸುರಕ್ಷಿತ ಜಾಗಕ್ಕೆ ಸಾಗಿದೆವು. ಮೊಬೈಲ್ ಫೋನ್ ಮೂಲಕ ಸೇನೆಗೆ ವಿಷಯ ತಿಳಿಸೋಣವೆಂದರೆ ಅಲ್ಲಿ ನೆಟ್‌ವರ್ಕ್ ಇಲ್ಲ.

ಸ್ವಲ್ಪ ಮುಂದೆ ಸಾಗಿದಾಗ ಒಂದು ಸ್ವಲ್ಪ ನೆಟ್‌ವರ್ಕ್ ಸಿಕ್ಕಿತು. ನನ್ನ ಅಣ್ಣ ಉಗ್ರರ ದಾಳಿ ಬಗ್ಗೆ ಶ್ರೀನಗರದ ಸೇನಾ ಕ್ಯಾಂಪ್‌ಗೆ ತಿಳಿಸಿದನು. ಸುಮಾರು 2 ಗಂಟೆ ಕಾಲ ಉಗ್ರರ ರುದ್ರ ನರ್ತನದಿಂದ 26 ಪ್ರವಾಸಿಗರು ನೆಲಕ್ಕುರುಳಿದ್ದರು. ದೂರದಿಂದಲೇ ಆ ದೃಶ್ಯ ನೋಡಿ ದೇವರೇ ನಮ್ಮನ್ನು ಕಾಪಾಡಪ್ಪ... ಎಂದು ಬೇಡಿಕೊಳ್ಳುತ್ತಿದ್ದೆವು. ಸುಮಾರು 3 ಗಂಟೆ ವೇಳೆಗೆ ಸಂಪೂರ್ಣವಾಗಿ ಫೈರಿಂಗ್ ನಿಂತಿತು. ತರುವಾಯ ಸೇನೆಯ ನಾಲ್ಕು ಹೆಲಿಕಾಪ್ಟರ್‌ಗಳು ಹಾರಾಡುವುದು ಕಾಣಿಸಿತು. ಅಲ್ಲಿಗೆ ಸೇನೆ ಬೈಸರನ್ ವ್ಯಾಲಿಗೆ ಬಂದಿದೆ ಎಂದು ಖಚಿತವಾಯಿತು. ಆದರೂ ಅಲ್ಲಿಗೆ ಯಾರೂ ಧೈರ್ಯ ಮಾಡಿ ಹೋಗುವ ಪ್ರಯತ್ನ ಮಾಡಲಿಲ್ಲ.

ನಂತರ ನಾವಿದ್ದ ಸ್ಥಳಕ್ಕೆ ಬಂದ ಸೇನಾ ಸಿಬ್ಬಂದಿ, ಧೈರ್ಯ ತುಂಬಿ ಅಲ್ಲಿಂದ ವಾಪಸಾಗಲು ಕುದುರೆ ವ್ಯವಸ್ಥೆ ಮಾಡಿ ಕಳುಹಿಸಿದರು. ದೇವರ ದಯೆಯಿಂದ ನಾವೆಲ್ಲಾ ಬದುಕಿದೆವು. ಆದರೆ ನಮ್ಮ ಕಣ್ಣೆದುರೇ ಉಗ್ರರ ಗುಂಡಿಗೆ ಬಲಿಯಾದ ಪ್ರವಾಸಿಗರ ಪಾರ್ಥಿವ ಶರೀರಗಳ ನೋಡಿ ತೀವ್ರ ಆಘಾತವಾಯಿತು.

ಮೈಸೂರಿನ ಮಲಬಾರ್‌ನಲ್ಲಿ ಆರ್ಟಿಸ್ಟ್ರಿ ಬ್ರ್ಯಾಂಡೆಡ್ ಆಭರಣ ಪ್ರದರ್ಶನಕ್ಕೆ ಚಾಲನೆ



ಮೈಸೂರಿನ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ಆರ್ಟಿಸ್ಟ್ರಿ ಬ್ರ್ಯಾಂಡೆಡ್ ಆಭರಣ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಏ. 28– ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ 'ಆರ್ಟಿಸ್ಟ್ರಿ ಬ್ರ್ಯಾಂಡೆಡ್ ಆಭರಣ ಪ್ರದರ್ಶನ, ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟವನ್ನು ಮೈಸೂರು ಕೆಎಸ್‌ಆರ್‌ಟಿಸಿ ಸಬ್ ಅರ್ಬನ್ ಬಸ್ ನಿಲ್ದಾಣದ ಬಳಿಯ ಮೈಸೂರು ಶೋರೂಮ್‌ನಲ್ಲಿ ಗ್ರಾಹಕರ ಉಪಸ್ಥಿತಿಯಲ್ಲಿ ಅನಾವರಣಗೊಳಿಸಲಾಯಿತು.

ರೂಪದರ್ಶಿಗಳಾದ ಡಾ.ಹೇಮಮಾಲಿನಿ ಲಕ್ಷ್ಮಣ್, ಡಾ. ಸುಧಾರಾಣಿ, ಮಿಸ್. ನಾಗನಾ, ಪುಷ್ಪಾ ಪರಿಣಿತಾ, ರಿತು ವಿಷ್ಣು, ಪ್ರಿಯಾಗೌಡ ಮತ್ತು ದಕ್ಷಿಣ ವಲಯ ಮುಖ್ಯಸ್ಥ ಮತ್ತು ಮೈಸೂರು ಸ್ಟೋರ್ ಮುಖ್ಯಸ್ಥ ಶರಾಫುದ್ದೀನ್ ಪಿ., ಸಹಾಯಕ ಸ್ಟೋರ್ ಮುಖ್ಯಸ್ಥ ಮೊಹಮ್ಮದ್ ಅನ್ಯಾಜ್ ಉಪಸ್ಥಿತರಿದ್ದರು.

ದೇಶದ ಅತಿದೊಡ್ಡ ಚಿನ್ನ ಮತ್ತು ವಜ್ರ ಚಿಲ್ಲರೆ ಸರಪಳಿಗಳಲ್ಲಿ ಒಂದಾದ ಮಲಬಾರ್ ಗೋಲ್ಡ್ & ಡೈಮಂಡ್ಸ್ ಏಪ್ರಿಲ್ 26 ರಿಂದ ಮೇ 4ರವರೆಗೆ ತನ್ನ ಮೈಸೂರು ಶೋರೂಂನಲ್ಲಿ 'ಆರ್ಟಿಸ್ಟ್ರಿ ಶೋ' ಅನ್ನು ಪ್ರಾರಂಭಿಸಲಿದೆ. ಈ ವಿಶೇಷ ಪ್ರದರ್ಶನವು ವ್ಯಾಪಕ ಶ್ರೇಣಿಯ ಸಾಂಪ್ರದಾಯಿಕ ಮತ್ತು ಸಮಕಾಲೀನ ವಿನ್ಯಾಸಗಳೊಂದಿಗೆ ಕರಕುಶಲ ಆಭರಣಗಳ ಕಲಾತ್ಮಕ ಕೌಶಲವನ್ನು ಪ್ರದರ್ಶಿಸುತ್ತದೆ. ಮೈಸೂರು ಶೋರೂಂನಲ್ಲಿ ಆರ್ಟಿಸ್ಟ್ರಿ ಶೋ ಪ್ರಾರಂಭಿಸಲು ಮತ್ತು ನಮ್ಮ ಆಭರಣ ಕರಕುಶಲತೆಯ ಶ್ರೇಷ್ಠತೆಯನ್ನು ಆಚರಿಸುವ ಸೊಗಸಾದ ವಿನ್ಯಾಸಗಳನ್ನು ಪರಿಚಯಿಸಲು ಸಂತೋಷವಾಗುತ್ತದೆ. ನಗರದ ಆಭರಣ ಖರೀದಿದಾರರು ಅತ್ಯುನ್ನತ ಗುಣಮಟ್ಟ, ಶುದ್ಧತೆ ಮತ್ತು ನ್ಯಾಯಯುತ ಬೆಲೆಗಳ ಭರವಸೆಯೊಂದಿಗೆ ನಮ್ಮ ಉತ್ಪನ್ನಗಳನ್ನು ಆನಂದಿಸಬಹುದು ಎಂದು ಶರಾಫುದ್ದೀನ್ ಹೇಳಿದರು.

ವಿದ್ಯಾರ್ಥಿಗಳು ಗುರಿ, ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಸಾಧನೆ ಸಾಧ್ಯ



ಮೈಸೂರಿನ ಕುವೆಂಪುನಗರದಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಅಭಿನಂದಿಸಿದರು.

ಮೈಸೂರು,ಏ.28(ಎಂಟಿವೈ)– ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಗುರಿ ಹಾಗೂ ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಸಾಧನೆ ಸಾಧ್ಯ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಸಾಮಾನ್ಯವಾಗಿ ವಿದ್ಯಾರ್ಥಿನಿಲಯಗಳಲ್ಲಿ ಬಡ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳೆ ಹೆಚ್ಚಾಗಿ ಇರುತ್ತಾರೆ. ಮನೆಯಲ್ಲಿ ಓದಲು ಪೂರಕ ವಾತಾವರಣವಿಲ್ಲದ ಕಾರಣ ಹಲವು ಮಂದಿ ವಿದ್ಯಾರ್ಥಿನಿಲಯಗಳಿಗೆ ಸೇರುತ್ತಾರೆ. ಆದರೆ, ಯಾವ ಉದ್ದೇಶಕ್ಕೆ ಹಾಸ್ಟೆಲ್ ಸೇರಿದ್ದೇವೆ ಎಂದು ಅರ್ಥ ಮಾಡಿಕೊಂಡು ಕಠಿಣ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ಮೈಸೂರು ಜಿಲ್ಲೆಗೆ ಹೊಸದಾಗಿ 14 ಬಿಸಿಎಂ ಹಾಸ್ಟೆಲ್ ಮಂಜೂರು ಮಾಡಿದ್ದಾರೆ. ಇದರಿಂದ ಮೈಸೂರು ಜಿಲ್ಲೆಯ ವಿದ್ಯಾರ್ಥಿಗಳು ಮಾತ್ರವಲ್ಲದೆ, ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಈ ಹಾಸ್ಟೆಲ್‌ನ ಸದುಪಯೋಗಪಡಿಸಿಕೊಳ್ಳಬೇಕು. ಪದವಿ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ತೇರ್ಗಡೆಯಾಗಿ ಸ್ವಾವಲಂಬಿಯಾಗಿ ಜೀವನ ಕಟ್ಟಿಕೊಳ್ಳಬೇಕು. ವಿದ್ಯಾರ್ಥಿದೆಸೆಯಲ್ಲಿದ್ದಾಗ ಮೊಬೈಲ್ ಬಳಸುವುದನ್ನು ಕಡಿಮೆ ಮಾಡಿ ಹೆಚ್ಚಾಗಿ ಪುಸ್ತಕಗಳನ್ನು ಓದಬೇಕು. ಆಗ ಮಾತ್ರ ನಿಮ್ಮ ಜ್ಞಾನ ವೃದ್ಧಿಯಾಗಿ ನೀವು ಗುರಿ ತಲುಪಲು ಸಾಧ್ಯವಾಗುತ್ತದೆ ಎಂದರು.


ಈ ಸಂದರ್ಭದಲ್ಲಿ ತಾಲೂಕು ವಿಸ್ತರಣಾಧಿಕಾರಿ ಸುಜೇಂದ್ರಕುಮಾರ್, ನಿಲಯಪಾಲಕರಾದ ಜಗದೀಶ್ ಕೋರಿ, ಗೋಪಾಲ್, ಅರ್ಪಿತ್, ಅಯಾತ್, ಪ್ರಸನ್ನ ಉಪಸ್ಥಿತರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಏ.28– ಜ್ವಾಲಾಮುಖಿ ಫೀಡರ್‌ನ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ಏ.29 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಉತ್ತನಹಳ್ಳಿ ಏಳಿಗೆಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಾಲ್ಯವಿವಾಹ ಅಪರಾಧ; ಕಾಯ್ದೆ ಉಲ್ಲಂಘಿಸಿದರೆ ಶಿಕ್ಷೆ

ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಎಚ್ಚರಿಕೆ



ಮೈಸೂರು,ಏ.28– ಬಾಲ್ಯವಿವಾಹವು ಅನಾದಿ ಕಾಲದಿಂದ ನಡೆದು ಬಂದ ಅನಿಷ್ಟ ಪದ್ಧತಿಯಾಗಿದ್ದು, ಇದು 21ನೇ ಶತಮಾನದಲ್ಲೂ ಆಚರಣೆಯಲ್ಲಿರುವುದು ಶೋಚನೀಯ ಸಂಗತಿ. ಏಪ್ರಿಲ್ 30ರಂದು ಬಸವ ಜಯಂತಿ ಮತ್ತು ಅಕ್ಷಯ ತೃತೀಯ ದಿನವಾಗಿದ್ದು, ಬಾಲ್ಯವಿವಾಹ ಪ್ರಕರಣಗಳು ನಡೆಯುವ ಸಾಧ್ಯತೆಗಳು ಹೆಚ್ಚಾಗಿದೆ.

ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ–2016 ಪ್ರಕಾರ ಮದುವೆಯನ್ನು ಏರ್ಪಡಿಸಿದ ಪೋಷಕರು ಅಥವಾ ಪಾಲಕರು 18 ವರ್ಷದೊಳಗಿನ ಹುಡುಗಿಯನ್ನು ಮದುವೆಯಾಗುವ ವಯಸ್ಕ ವ್ಯಕ್ತಿ ಮತ್ತು ಮದುವೆಯಲ್ಲಿ ಭಾಗವಹಿಸುವ ಕುಟುಂಬಸ್ಥರು ಸಹ ತಪ್ಪಿತಸ್ಥರು ಎಂದು ಪರಿಗಣಿಸಿ ಇವರುಗಳ ವಿರುದ್ಧ ಕಾಯ್ದೆಯ ಪ್ರಕಾರ ಒಂದು ವರ್ಷಕ್ಕೆ ಕಡಿಮೆಯಿಲ್ಲದ ಅಂದರೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಅಥವಾ ಇವರೆಡರಿಂದಲೂ ಶಿಕ್ಷೆಗೆ ಒಳಪಡುತ್ತಾರೆ.

ಈ ಕಾಯ್ದೆಯಡಿ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಡಿ ಬಾಲ್ಯವಿವಾಹ ಜರುಗುತ್ತಿರುವ ಮಾಹಿತಿ ಬಂದಾಗ ಸ್ವಪ್ರೇರಿತವಾಗಿ ದೂರು ದಾಖಲು ಮಾಡಲು ಅವಕಾಶವಿರುತ್ತದೆ. ಅದೇ ರೀತಿ ಇದು ಕೇವಲ ಸರ್ಕಾರಿ ಅಧಿಕಾರಿಗಳ ಜವಾಬ್ದಾರಿಯಾಗದೇ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿರುತ್ತದೆ.



ಬಾಲ್ಯವಿವಾಹ ನಿಷೇಧಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗೆ ಬರುವ ಧಾರ್ಮಿಕ ಸ್ಥಳಗಳಲ್ಲಿ ಮತ್ತು ಕಲ್ಯಾಣಮಂಟಪಗಳಲ್ಲಿ ಸಾಮೂಹಿಕ ಅಥವಾ ವೈಯಕ್ತಿಕ ವಿವಾಹದಲ್ಲಿ ಯಾವುದೇ ಬಾಲ್ಯವಿವಾಹಗಳು ಜರುಗದಂತೆ ಕ್ರಮವಹಿಸಬೇಕು. ಜಿಲ್ಲೆಯಲ್ಲಿ ಬಾಲ್ಯವಿವಾಹ ನಡೆಯುತ್ತಿರುವುದು ಗಮನಕ್ಕೆ ಬಂದರೆ ತುರ್ತಾಗಿ ಮಕ್ಕಳ ಸಹಾಯವಾಣಿ 1098, ಪೊಲೀಸ್ ಸಹಾಯವಾಣಿ 112 ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ 0821–2543003 ಹಾಗೂ ಸಂಬಂಧಪಟ್ಟ ಹತ್ತಿರದ ಪೊಲೀಸ್ ಠಾಣೆಗೆ ದೂರು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷ ಜಿ. ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಕ್ಫ್ ಮಂಡಳಿ ನೋಟಿಸ್: ಎಂಕೆ ಹಾಸ್ಟೆಲ್‌ಗೆ ಸಂಸದ ಯದುವೀರ್ ಭೇಟಿ



ವಕ್ಫ್ ಮಂಡಳಿ ನೋಟಿಸ್ ಅಂಟಿಸಿದ್ದ ಮೈಸೂರಿನ ವಿನೋಬಾ ರಸ್ತೆಯ ಎಂಕೆ ಹಾಸ್ಟೆಲ್ ಪಾರಂಪರಿಕ ಕಟ್ಟಡಕ್ಕೆ ಶನಿವಾರ ರಾತ್ರಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿದ್ದರು.

ಮೈಸೂರು, ಏ. 28(ಆರ್‌ಕೆ)– ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವಿಚಾರಣಾ ನ್ಯಾಯಾಲಯದ ಅಧಿಕಾರಿಗಳು ನೋಟಿಸ್ ಅಂಟಿಸಿದ್ದ ಮೈಸೂರಿನ ವಿನೋಬಾ ರಸ್ತೆಯ ಶೃಂಗಾರ್ ಹೋಟೆಲ್ ಎದುರಿನ ಎಂಕೆ ಹಾಸ್ಟೆಲ್ ಶತಮಾನದಷ್ಟು ಹಳೆಯದಾದ ಪಾರಂಪರಿಕ ಕಟ್ಟಡಕ್ಕೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶನಿವಾರ ಭೇಟಿ ನೀಡಿ, ಪರಿಶೀಲಿಸಿದರು.

ವಕ್ಫ್ ಮಂಡಳಿ ನೋಟಿಸ್‌ನ ಮಾಹಿತಿ ಪಡೆದ ಅವರು, ಸದರಿ ಆಸ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳು, ಕಂದಾಯ ಪಾವತಿ ಚಲನ್‌ಗಳು, ಕಟ್ಟಡದಲ್ಲಿ ಸ್ವಾಧೀನಾನುಭವದಲ್ಲಿರುವ ಬಗೆಗಿನ ಪುರಾವೆಗಳನ್ನು ಪರಿಶೀಲಿಸಿದರು.

109 ವರ್ಷಗಳ ಹಿಂದೆ ಖರೀದಿ ಮಾಡಿದ ಜಾಗದಲ್ಲಿ ಪಾರಂಪರಿಕ ಕಟ್ಟಡ ನಿರ್ಮಿಸಿ ಸಮುದಾಯದವರ ಹಾಸ್ಟೆಲ್ ನಡೆಸುತ್ತಿರುವ ಟ್ರಸ್ಟ್ ಆಸ್ತಿ ಸಂರಕ್ಷಿಸುವುದು ಅತ್ಯವಶ್ಯವಾಗಿದ್ದು, ನೋಟಿಸ್‌ಗೆ ಲಿಖಿತ ಉತ್ತರ ನೀಡುವಂತೆ ಯದುವೀರ್ ಸಲಹೆ ನೀಡಿದರಲ್ಲದೇ, ಜಿಲ್ಲಾಧಿಕಾರಿಗಳಿಗೂ ದೂರವಾಣಿ ಮೂಲಕ ಸಂಪರ್ಕಿಸಿ, ಈ ಸಂಬಂಧ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ತಿಳಿಸಿದರು.

ಪಹಲ್ಗಾಮ್‌ನಲ್ಲಿ ಅಮಾಯಕರ ಹತ್ಯೆ ಖಂಡಿಸಿ ಮೈಸೂರಲ್ಲಿ ಕನ್ನಡಪರ ಸಂಘಟನೆ ಪ್ರತಿಭಟನೆ



ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಗುಂಡಿನ ದಾಳಿ ನಡೆಸಿದ ಉಗ್ರರನ್ನು ಸದೆ ಬಡಿಯುವಂತೆ ಆಗ್ರಹಿಸಿ ಮೈಸೂರಿನ ಹಳೆ ಡಿಸಿ ಕಚೇರಿ ಸಮೀಪ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಮೈಸೂರು,ಏ.28(ಎಂಟಿವೈ)– ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಪ್ರವಾಸಿಗರ ಮೇಲೆ ನಡೆಸಿರುವ ಹತ್ಯಾಕಾಂಡ ಖಂಡಿಸಿ ಕರ್ನಾಟಕ ಸೇನಾಪಡೆಯ ಕಾರ್ಯಕರ್ತರು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪ ಸೋಮವಾರ ಹಣೆಗೆ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ಮಾಡಿ, ಪಾಕಿಸ್ತಾನದ ವಿರುದ್ಧ ಘೋಷಣೆ ಕೂಗಿ ಉಗ್ರ ಸಂಘಟನೆಗಳನ್ನು ಮಟ್ಟ ಹಾಕುವಂತೆ ಆಗ್ರಹಿಸಿದರು.

ಜಮ್ಮು-ಕಾಶ್ಮೀರದಲ್ಲಿ ಪದೇ-ಪದೆ ಉಗ್ರಗಾಮಿಗಳು ಹಿಂದುಗಳ ಮೇಲೆ ಗುಂಡಿನ ದಾಳಿ ನಡೆಸುತ್ತಲೇ ಇದ್ದಾರೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಉಗ್ರಗಾಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಉಗ್ರರ ಅಡಗುತಾಣಗಳನ್ನು ಧ್ವಂಸಗೊಳಿಸಬೇಕು. ಗಡಿ ಭಾಗದಲ್ಲಿ ಹೆಚ್ಚಿನ ಸೈನಿಕರನ್ನು ನಿಯೋಜಿಸಬೇಕು. ಧರ್ಮದ ಕಾರಣಕ್ಕಾಗಿ ಅಧರ್ಮದಿಂದ ಅಮಾಯಕ ಹಿಂದುಗಳನ್ನು ಕೊಂದ ಪಾಪಿಗಳಿಗೆ ತಕ್ಕ ಪ್ರತ್ಯುತ್ತರ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಮಹಿಳಾ ಘಟಕದ ಅಧ್ಯಕ್ಷೆ ಲತಾ ರಂಗನಾಥ್, ಮುಖಂಡರಾದ ಲಿಂಗಪ್ಪ, ಪ್ರಭುಶಂಕರ, ಮಧುವನ ಚಂದ್ರು, ಪದ್ಮ, ರಘುರಾಂ, ಮಂಜುನಾಥ್, ಭಾಗ್ಯಮ್ಮ, ಯಶೋಧ ಶಿವಕುಮಾರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಜಾತಿ ಗಣತಿಯಿಂದ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯ

9 ಕಿ.ಮೀ. ಪಾದಯಾತ್ರೆ ನಡೆಸಿ ಆದಿಚುಂಚನಗಿರಿ ಶ್ರೀಗಳಿಗೆ ಮನವಿ ಸಲ್ಲಿಕೆ



ಜಾತಿಗಣತಿ ವರದಿಯನ್ನು ವಿರೋಧಿಸಿ ಒಕ್ಕಲಿಗ ಸಮುದಾಯದ ಮುಖಂಡರು ಪಾದಯಾತ್ರೆ ಮೂಲಕ ಆಗಮಿಸಿ ಆದಿಚುಂಚನಗಿರಿ ಶ್ರೀಗಳಿಗೆ ಮನವಿ ಪತ್ರ ಸಲ್ಲಿಸಿದರು.

ನಮ್ಮ ಸಮುದಾಯಕ್ಕೆ ಅನ್ಯಾಯವಾದರೆ ಸುಮ್ಮನಿರುವುದಿಲ್ಲ. ಮುಂದಿನ ದಿನಗಳಲ್ಲಿ ಅದಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ. ಒಕ್ಕಲಿಗ ಉಪ ಜಾತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ನೇಮಕಾತಿಯಲ್ಲಿ ಒಕ್ಕಲಿಗರ ಜಾತಿಗೆ ಮೀಸಲಾತಿಯನ್ನು ಹೆಚ್ಚಿಸುವ ಆದ್ಯತೆ ಮಾಡಬೇಕು. ಈ ಎಲ್ಲಾ ಅಂಶಗಳನ್ನು ಕಡೆಗಣಿಸಿದರೆ ಮುಂದಿನ ದಿನದಲ್ಲಿ ದೊಡ್ಡ ಮಟ್ಟದ ಹೋರಾಟಕ್ಕೆ ಒಕ್ಕಲಿಗ ಸಮುದಾಯವು ಸಜ್ಜಾಗುತ್ತದೆ

ನಾಗಮಂಗಲ,ಏ.28– ಜಾತಿಗಣತಿಯಲ್ಲಿ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ರಾಜ್ಯ ಒಕ್ಕಲಿಗ ಸಮುದಾಯದ ಮೀಸಲಾತಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಅಧ್ಯಕ್ಷ ಕೆ.ವಿ.ಮೂಡ್ನಿಗಿರಯ್ಯ ಅವರ ನೇತೃತ್ವದಲ್ಲಿ ನೂರಾರು ಒಕ್ಕಲಿಗ ಸಮುದಾಯದ ಮುಖಂಡರು ಪಾದಯಾತ್ರೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಬೆಳ್ಳೂರು ಪಟ್ಟಣದ ಅಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಪಾದಯಾತ್ರೆ ಪ್ರಾರಂಭಿಸಿ ಆದಿಚುಂಚನಗಿರಿ ಶ್ರೀ ಮಠದವರೆಗೆ 9 ಕಿಲೋ ಮೀಟರ್ ಪಾದಯಾತ್ರೆ ನಡೆಸಿ ಶ್ರೀ ಕ್ಷೇತ್ರದ ಮಠಾಧೀಶ ಶ್ರೀ ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಅವರಿಗೆ ಮನವಿ ಸಲ್ಲಿಸಿದರು.

ಜನಜಾಗೃತಿ ಪಾದಯಾತ್ರೆಗೆ ಅರೆಶಂಕರ ಮಠದ ಚೈತನ್ಯ ಮಹಾಸ್ವಾಮಿ ಚಾಲನೆ ನೀಡಿ ಮಾತನಾಡಿ, ಕಾಂತರಾಜು ಆಯೋಗದ ವರದಿಯ ಕಾನೂನು ಬಾಹಿರವಾಗಿದೆ. ಒಕ್ಕಲಿಗ ಸಮುದಾಯಕ್ಕೆ ಇದು ಮರಣ ಶಾಸನ. ಈ ವರದಿ ಜಾರಿಗೆ ಬಂದರೆ ಒಕ್ಕಲಿಗ ಸಮುದಾಯ ನಿರ್ನಾಮವಾಗುವುದು ಖಂಡಿತ. ಜಾತಿ ಗಣತಿಯಲ್ಲಿ ಉಪ ಜಾತಿಗಳನ್ನು ಕಡೆಗಣಿಸಲಾಗಿದೆ. ಜಾತಿಗಣತಿಯ ವರದಿಯಲ್ಲಿ ಮನೆಯಲ್ಲಿ ಕುಳಿತು ಬರೆದ ವರದಿಗೆ ಬೆಲೆ ಇಲ್ಲ. ಒಕ್ಕಲಿಗ ಸಮುದಾಯವನ್ನು ವ್ಯವಸ್ಥಿತವಾಗಿ ತುಳಿಯುವ ಕೆಲಸ ಮಾಡಲಾಗುತ್ತಿದೆ. ಸರ್ಕಾರಿ ಮೀಸಲಾತಿ, ನೇಮಕಾತಿಯಲ್ಲೂ ಕೂಡ ನಮಗೆ ಅನ್ಯಾಯವಾಗುತ್ತಿದ್ದು, ಒಕ್ಕಲಿಗ ಸಮುದಾಯ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ಗೌರವಾಧ್ಯಕ್ಷ ರಮೇಶ್ ಮಾತನಾಡಿ, ರಾಜ್ಯದಲ್ಲಿ ಒಂದು ಕೋಟಿಗೂ ಹೆಚ್ಚು ಒಕ್ಕಲಿಗರ ಜನಸಂಖ್ಯೆ ಇದ್ದು, ನಮ್ಮ ಸಮುದಾಯದಲ್ಲಿ 146 ಪಂಗಡಗಳಿವೆ. ಉಪ ಜಾತಿಗಳನ್ನು ಸರ್ಕಾರ ಪರಿಗಣಿಸಿಲ್ಲ. ಇದರ ವಿರುದ್ಧ ಧ್ವನಿ ಎತ್ತಬೇಕು ಎಂಬ ಉದ್ದೇಶದಿಂದ ಶ್ರೀ ಕ್ಷೇತ್ರ ಆದಿಚುಂಚನಗಿರಿವರೆಗೆ ಪಾದಯಾತ್ರೆ ಬಂದು ಮಹಾಸ್ವಾಮಿಗಳಿಗೆ ಮನವಿ ಸಲ್ಲಿಸಲಿದ್ದೇವೆ ಎಂದರು.

ಅಧ್ಯಕ್ಷ ಕೆ.ವಿ.ಮೂಡ್ನಿಗಿರಯ್ಯ ಮಾತನಾಡಿ, ನಮ್ಮ ಸಮುದಾಯದ ಮೇಲೆ ಈ ಹಿಂದಿನಿಂದಲೂ ದೌರ್ಜನ್ಯ ಮಾಡಲಾಗುತ್ತಿದೆ. ಸರ್ಕಾರಿ ನೇಮಕಾತಿ ಮತ್ತು ಬಡ್ತಿಯಲ್ಲಿ ತಾರತಮ್ಯ. 1987ರಿಂದ ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ವಂಚನೆ, ಕೇಂದ್ರ ಸರ್ಕಾರದ ಸರ್ಕಾರಿ ಸಿಬ್ಬಂದಿ ನೇಮಕಾತಿಯಲ್ಲಿ ಓಬಿಸಿ ಪ್ರವರ್ಗಕ್ಕೆ ಸೇರ್ಪಡೆ ತಾರತಮ್ಯ, ಈ ಅಂಶಗಳನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿ ಬೆಳ್ಳೂರು ಕ್ರಾಸ್‌ನಿಂದ ಆದಿಚುಂಚನಗಿರಿ ಕ್ಷೇತ್ರವರೆಗೆ ಈ ದಿನ ಬೃಹತ್ ಮಟ್ಟದಲ್ಲಿ ಪಾದಯಾತ್ರೆ ಮಾಡುವ ಮೂಲಕ ಮಹಾ ಸ್ವಾಮಿಗಳಿಗೆ ಮನವಿ ಸಲ್ಲಿಸಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಒಕ್ಕಲಿಗ ಸಮುದಾಯ ಮೀಸಲಾತಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸಮಿತಿಯ ಪದಾಧಿಕಾರಿಗಳು ಮತ್ತು ಒಕ್ಕಲಿಗ ಸಮುದಾಯದ ನಾಯಕರು ಹಾಗೂ ಮುಖಂಡರು ಸೇರಿದಂತೆ ಇತರರು ಭಾಗವಹಿಸಿದ್ದರು.

ಶ್ರೀರಂಗಪಟ್ಟಣದಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಒಳ ಚರಂಡಿ ಕಾಮಗಾರಿ



ಅಧಿಕಾರಿಗಳ ಸಭೆ ನಡೆಸುತ್ತಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ.

ಶ್ರೀರಂಗಪಟ್ಟಣ: ಪುರಸಭೆ ವ್ಯಾಪ್ತಿಯಲ್ಲಿ, 25 ಕೋಟಿ ರೂ. ವೆಚ್ಚದ ಮೂರನೇ ಹಂತದ ಒಳ ಚರಂಡಿ ಕಾಮಗಾರಿಯನ್ನು ಶೀಘ್ರ ಆರಂಭಿಸಲಾಗುವುದು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಪಟ್ಟಣದ ಪುರಸಭೆ ಕಚೇರಿಯಲ್ಲಿ ಯೋಜನೆಯ ಕುರಿತು ಸೋಮವಾರ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. ಪಟ್ಟಣದ ಪಶ್ಚಿಮವಾಹಿನಿ, ವೆಲ್ಲೆಸ್ಲಿ ಸೇತುವೆಯಿಂದ ಬನ್ನಿ ಮಂಟಪದವರೆಗೆ, ಗಂಜಾಂ ನಿಮಿಷಾಂಬ ದೇವಾಲಯದಿಂದ ಗೋರಿ ಸರ್ಕಲ್‌ವರೆಗೆ, ಹಂಗರಹಳ್ಳಿ ಕಾಲೋನಿ ಮತ್ತು ಗೋಸಾಯಿಘಾಟ್ ಮಾರ್ಗದಲ್ಲಿ ಒಳ ಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಡೆಯಲಿದೆ ಎಂದು ತಿಳಿಸಿದರು. ಒಳ ಚರಂಡಿ ಕಾಮಗಾರಿಗೆ ಒಟ್ಟು 25 ಕೋಟಿ ರೂ. ಮಂಜೂರಾಗಿದ್ದು ಈ ಪೈಕಿ 15 ಕೋಟಿ ರೂ. ವೆಚ್ಚದ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಈಗಾಗಲೇ ಮುಗಿದಿದೆ. 10 ಕೋಟಿ ರೂ. ವೆಚ್ಚದ ಕಾಮಗಾರಿಗೆ ಶೀಘ್ರ ಟೆಂಡರ್ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಿದರು.

ಪುರಸಭೆ ಅಧ್ಯಕ್ಷ ಎಂ.ಎಲ್.ದಿನೇಶ್, ಮುಖ್ಯಾಧಿಕಾರಿ ಎಂ.ರಾಜಣ್ಣ, ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ಕಾರ್ಯಪಾಲಕ ಎಂಜಿನಿಯರ್ ಹರ್ಷಿತಾ, ಪುರಸಭೆ ಎಂಜಿನಿಯರ್‌ಗಳಾದ ಸಹನಾ ಇದ್ದರು.

ಸಾಸಲು ಗ್ರಾಮದಲ್ಲಿ ಬೀದಿನಾಯಿಗಳ ದಾಳಿ: ಬಾಲಕನಿಗೆ ತೀವ್ರ ಗಾಯ

ಆತಂಕಗೊಂಡಿರುವ ಗ್ರಾಮಸ್ಥರು, ನಾಯಿಗಳ ನಿಯಂತ್ರಣಕ್ಕೆ ಆಗ್ರಹ



ಕಿಕ್ಕೇರಿ: ಹೋಬಳಿಯ ಸಾಸಲು ಗ್ರಾಮದಲ್ಲಿ ಬೀದಿ ನಾಯಿಗಳ ಹಿಂಡು ಬಾಲಕನೋರ್ವನ ಮೇಲೆ ದಾಳಿ ನಡೆಸಿದ ಪರಿಣಾಮ ತೀವ್ರ ಗಾಯಗೊಂಡಿದ್ದು, ಗ್ರಾಮಸ್ಥರು ಒಂಟಿಯಾಗಿ ಓಡಾಡಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದ ರೈತ ಗುರುಮೂರ್ತಿ ಅವರ ಪುತ್ರ ಜಿ.ಚರಣ್‌ಕುಮಾರ್(11) ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈತ ಅಡೇನಹಳ್ಳಿ ಗುಡ್ ಸಿಟಿಜನ್ ಶಾಲೆಯಲ್ಲಿ ಓದುತ್ತಿದ್ದು, ರಜೆಯಿರುವ ಸಲುವಾಗಿ ಮನೆಯಲ್ಲಿಯೇ ಇದ್ದ.

ಭಾನುವಾರ ಸಂಜೆ ಸುಮಾರು 6 ಗಂಟೆ ವೇಳೆ ಹಾಲಿನ ಡೇರಿಗೆ ಹಾಲು ತರಲು ಹೋಗುತ್ತಿದ್ದಾಗ ಮನೆಯ ತುಸು ದೂರದಲ್ಲಿರುವ ತೋಟದಿಂದ ನಾಯಿಗಳ ಹಿಂಡು ಬಾಲಕನ ಮೇಲೆ ಏಕಾಏಕಿ ದಾಳಿ ಮಾಡಿದೆ. ಬೆದರಿದ ಬಾಲಕ ನಾಯಿಯಿಂದ ತಪ್ಪಿಸಿಕೊಳ್ಳಲು ಮುಂದಾಗಿ ನೆಲಕ್ಕೆ ಬಿದ್ದಿದ್ದಾನೆ. ನಾಯಿ ಬಾಲಕನನ್ನು ಹೊರಳಾಡಿಸಿ ಮುಖದ ಮೇಲೆ ದಾಳಿ ಮಾಡಿದೆ. ಕೂಗಿಕೊಂಡರು ಬಿಡದೆ ಹಣೆಯನ್ನು ಆಳವಾಗಿ ಸೀಳಿದೆ. ಬಾಲಕ ಚೀರಾಡಿ ಪ್ರಜ್ಞಾಹೀನನಾಗಿದ್ದಾನೆ.

ನಾಯಿಗಳ ಬೊಗಳುವಿಕೆ ಬಾಲಕನ ಚೀರಾಟ ಕೇಳಿ ಗ್ರಾಮಸ್ಥರು ಹಾಗೂ ಬಾಲಕನ ತಂದೆ ಗುರುಮೂರ್ತಿ ಘಟನಾ ಸ್ಥಳಕ್ಕೆ ಓಡಿ ಬಂದಿದ್ದಾರೆ. ಅಷ್ಟರಲ್ಲಿ ನಾಯಿ ಹಿಂಡು ಬೊಗಳುತ್ತ ಓಡಿ ಹೋಗಿವೆ. ಹಲವರು ನಾಯಿಗಳನ್ನು ಹಿಡಿಯಲು ಓಡಿಸಿಕೊಂಡು ಹೋದರು ತೋಟದಲ್ಲಿ ನಾಯಿಗಳು ಮರೆಯಾಗಿ ಓಡಿ ಹೋಗಿವೆ.

ಕೂಡಲೇ ಅರೆಪ್ರಜ್ಞೆಯಲ್ಲಿ ರಕ್ತಸಿಕ್ತವಾಗಿ ಬಿದ್ದಿದ್ದ ಬಾಲಕನನ್ನು ಶ್ರವಣಬೆಳಗೊಳ ಸರ್ಕಾರಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಹಾಸನದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಭಯದಿಂದ ಬಾಲಕ ವಿಚಲಿತನಾಗಿದ್ದು, ಚೇತರಿಸಿಕೊಳ್ಳಲು ಸಾಕಷ್ಟು ಸಮಯ ಬೇಕು ಎಂದು ವೈದ್ಯರು ತಿಳಿಸಿದ್ದಾರೆ.

ಜೂನ್ ಅಂತ್ಯಕ್ಕೆ ಮೈಷುಗರ್ ಆರಂಭ



ಮಂಡ್ಯ,ಏ.28– ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಆರ್.ಬಿ.ಟೆಕ್ ಕಂಪನಿಯಿಂದಲೇ 2025–26ನೇ ಸಾಲಿನ ಕಬ್ಬು ನುರಿಸುವ ಪ್ರಕ್ರಿಯೆಯು ಜೂನ್ ತಿಂಗಳ ಅಂತ್ಯದಿಂದ ಪ್ರಾರಂಭ ಮಾಡಲಾಗುವುದು ಎಂದು ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್.ಬಿ.ಟೆಕ್ ಕಂಪನಿಯೊಂದಿಗಿನ ಎಲ್ಲಾ ಬಾಕಿಯನ್ನು ಚುಕ್ತಾ ಮಾಡಿ, ಒಳ ಒಪ್ಪಂದದ ಮೇರೆಗೆ ಕಾರ್ಖಾನೆಯ ಕೆಲಸಗಳು ಮುಂದುವರೆಯಲಿದೆ ಎಂಬುದು ತಪ್ಪು ಮಾಹಿತಿಯಾಗಿದೆ ಎಂದರು.

ಆರ್.ಬಿ.ಟೆಕ್ ಕಂಪನಿಯೊಂದಿಗೆ 2024–25 ಹಾಗೂ 2025–26ನ ಎರಡು ವರ್ಷಗಳ ಅವಧಿಗೆ ಟೆಂಡರ್ ಕರಾರು ಮಾಡಿಕೊಂಡಿದ್ದು, ಆರ್.ಬಿ.ಟೆಕ್ ಕಂಪನಿಗೆ ಆಗಿರುವ ನಷ್ಟ ಸಂಬಂಧ ಸರ್ಕಾರದ ಗಮನಕ್ಕೆ ತಂದಿದ್ದು, ಕಳೆದ ಸಾಲಿನಲ್ಲಿ ನುರಿಸಲಾಗದ 50 ಸಾವಿರ ಟನ್ ಕಬ್ಬಿಗೆನಷ್ಟವನ್ನು ಸರಿದೂಗಿಸುವ ಹಾಗೂ ಪ್ರಸಕ್ತ ಸಾಲಿನಲ್ಲಿ ತಮ್ಮ ಕೆಲಸ ಮುಂದುವರೆಸುವಂತೆ ಆರ್.ಬಿ.ಟೆಕ್ ಕಂಪನಿಗೆ ಮನವರಿಕೆ ಮಾಡಲಾಗದೆ ಎಂದು ಹೇಳಿದರು.

ಸದರಿ ವಿಚಾರ ಸಂಬಂಧ ಇದೇ ಏಪ್ರಿಲ್ ತಿಂಗಳ 12ರಂದು ರೈತ ಸಭೆ ನಡೆಸಲಾಗಿದ್ದು, ಆರ್.ಬಿ.ಟೆಕ್ ಕಂಪನಿಯೊಂದಿಗೆ ಆಗಿರುವ ಕರಾರಿನಂತೆ ಪ್ರಸಕ್ತ ಸಾಲಿನಲ್ಲಿ 4.50 ಲಕ್ಷ ಟನ್‌ಕಬ್ಬನ್ನು ನುರಿಸಲಾಗುವುದು ಹಾಗೂ ಜೂನ್ ತಿಂಗಳ ಅಂತ್ಯದಲ್ಲಿ ಕಾರ್ಖಾನೆಯಲ್ಲಿ ಕಬ್ಬು ನುರಿಸುವ ಪ್ರಕ್ರಿಯೆ ಪ್ರಾರಂಭಿಸಲಾಗುವುದು ಎಂದು ರೈತರಿಗೆ ತಿಳಿಸಲಾಗಿದೆ ಎಂದರು.

ಮೈಷುಗರ್ ಸಕ್ಕರೆ ಕಾರ್ಖಾನೆಯು ಲಾಭದಲ್ಲಿ ನಡೆಯುತ್ತಿರುವುದಾಗಿ ಕಳೆದ ಸಾಲಿನ ಕಬ್ಬು ನುರಿಯುವ ಕೆಲಸ ಮುಗಿಸಿ ತಿಳಿಸಲಾಗಿದ್ದು, 2024–25ನೇ ಸಾಲಿನಲ್ಲಿ ಕಾರ್ಖಾನೆಯ ಆಸ್ತಿ ತೆರಿಗೆ 6 ಕೋಟಿ ಪೈಕಿ 3 ಕೋಟಿ ಪಾವತಿ ಮಾಡಲಾಗಿದೆ. ಕೋಜನ್ ಸಂಬಂಧ ಹೊಸ ರೋಟರಿ ಅಳವಡಿಸಲು 4 ಕೋಟಿ, ಹಾಲಿ ಹಂಗಾಮಿಗೆ ಕಾರ್ಮಿಕರಿಗೆ ಮತ್ತು ಉಪಕರಣಗಳಿಗಾಗಿ 6.50 ಕೋಟಿ ಸೇರಿ ಒಟ್ಟು 18 ಕೋಟಿ ರೂ ಹಣವನ್ನು ಸರ್ಕಾರದ ನೆರವಿಲ್ಲದೇ ರೈತರಿಗೆ ಕೊಡಬೇಕಾದ ಬಾಕಿ ಹಣವನ್ನು ನೀಡಿದ್ದೇವೆ ಎಂದು ಹೇಳಿಕೊಂಡರು.

ಮೈಷುಗರ್ ಕಾರ್ಖಾನೆಯ ಎಲ್ಲಾ ಮಾರಾಟದ ಮೂಲಗಳಿಂದ ದೊರೆತ ಆದಾಯದಿಂದಾಗಿ ಪಾರದರ್ಶಕವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಕಾರ್ಖಾನೆಯಲ್ಲಿನ ಹಳೆಯ ಯಂತ್ರಗಳನ್ನು ಬದಲಾಯಿಸದರೆ ನಾವು ಸಹ ನೆರೆ ಹೊರೆಯ ಕಾರ್ಖಾನೆಗಳಂತೆ ಶೇ 7.50 ರಿಂದ ಶೇ 8ರಷ್ಟು ಉತ್ಪಾದನೆ ಪಡೆಯಲು ಸಾಧ್ಯವಾಗುತ್ತದೆ. ಇದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇದೇ ವೇಳೆ ತಿಳಿಸಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ನಗರ ಅಧ್ಯಕ್ಷ ರುದ್ರಪ್ಪ, ವಿಜಿ ಕುಮಾರ್, ವಕೀಲ ಮಂಜುನಾಥ್ ಸುಂಡಹಳ್ಳಿ, ಅಪ್ಪಾಜಿ, ಸಾತನೂರು ಕೃಷ್ಣ, ಗೌರೀಶ್ ಇದ್ದರು.

ಜೈನ್ನಹಳ್ಳಿ ಸೊಸೈಟಿಗೆ ನಿರ್ದೇಶಕರ ಆಯ್ಕೆ



ಜೈನ್ನಹಳ್ಳಿ ಸೊಸೈಟಿಗೆ ಆಯ್ಕೆಯಾದ ನಿರ್ದೇಶಕರನ್ನು ಅಭಿನಂದಿಸಲಾಯಿತು.

ಕೆ.ಆರ್.ಪೇಟೆ,ಏ.28– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಜೈನ್ನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಈ ಕೆಳಕಂಡವರು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಸಿಂಗನಹಳ್ಳಿ ಪಿ.ಧರ್ಣೇಶ್ ಪರಶುರಾಮೇಗೌಡ ಅವರು ಭರ್ಜರಿ ಗೆಲುವು ಸಾಧಿಸಿದ್ದಾರೆ. ಅದೇ ರೀತಿ ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಮುದ್ದಾಪುರ ಎಂ.ಆರ್.ದೇವರಾಜೇಗೌಡ, ಜೈನ್ನಹಳ್ಳಿ ಜೆ.ಎಸ್.ಲಿಂಗರಾಜೇಗೌಡ, ಕುಂಟೇಗೌಡ, ಜೆ.ಜೆ.ಜಯರಾಮೇಗೌಡ, ಜೆ.ಎಸ್.ರಮೇಶ್, ಬಿಸಿಎಂ.ಎ ಮೀಸಲು ಕ್ಷೇತ್ರದಿಂದ ಹೊಸ ಮುದ್ದಾಪುರ ಜವರೇಗೌಡ, ಬಿಸಿಎಂ ಬಿ ಮೀಸಲು ಕ್ಷೇತ್ರದಿಂದ ಜೈನ್ನಹಳ್ಳಿ ಬೋರೇಗೌಡ, ಮಹಿಳಾ ಮೀಸಲು ಕ್ಷೇತ್ರದಿಂದ ಮುದ್ದಾಪುರ ಬಿ.ಗೀತಾ ಮಂಜುನಾಥ್, ಜೈನ್ನಹಳ್ಳಿ ಸುನಂದಮ್ಮ ಸೋಮೇಗೌಡ, ಪ.ಜಾ ಮೀಸಲು ಕ್ಷೇತ್ರದಿಂದ ಜೈನ್ನಹಳ್ಳಿ ಮಂಜುನಾಥ್, ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಸಿಂಗನಹಳ್ಳಿ ಎಸ್.ಜೆ.ಶ್ರೀನಿವಾಸ್ ಅವರುಗಳು ಗೆಲುವು ಸಾಧಿಸಿ ನೂತನ ನಿರ್ದೇಶಕರುಗಳಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ. ಭರತ್ ಕುಮಾರ್ ಕಾರ್ಯನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಭಾನುಮತಿ ಕಾರ್ಯ ನಿರ್ವಹಿಸಿದರು.

ಮೂರನೇ ಪುಟದಿಂದ

ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಸಿದ್ಧತೆ

ಕೆ.ಆರ್.ನಗರ 116.3, ಮೈಸೂರು 62.8, ಪಿರಿಯಾಪಟ್ಟಣ 70.5, ಟಿ.ನರಸೀಪುರ 65.6, ಸರಗೂರು 113.7 ಹಾಗೂ ಸಾಲಿಗ್ರಾಮ ತಾಲೂಕು ವ್ಯಾಪ್ತಿಯಲ್ಲಿ 78.3 ಮಿಮೀ ಮಳೆಯಾಗಿದೆ ಪೂರ್ವ ಮುಂಗಾರಿನ ಜೊತೆ ಜೊತೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಬಿತ್ತನೆ ಕಾರ್ಯ ಆರಂಭವಾಗಿದೆ. ಪೂರ್ವ ಮುಂಗಾರಿನಲ್ಲಿ 3,74,793 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇದುವರೆಗೆ 12,010 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಮುಖ್ಯವಾಗಿ ಮುಸುಗಿನ ಜೋಳ 3,835 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ, ಉದ್ದು 250, ಹೆಸರು 230, ಅಲಸಂದೆ 835, ಹತ್ತಿ 3905 ಹಾಗೂ ತಂಬಾಕು (ಹೊಗೆಸೊಪ್ಪು) 2,835 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಬಿತ್ತನೆ ಬೀಜ ವಿತರಣೆ: ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಕೃಷಿ ಇಲಾಖೆಗಳಿಂದಲೂ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿರುವ 33 ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿತರಣೆ ಕಾರ್ಯ ನಡೆಯುತ್ತಿದೆ. ರೈತರು ಹೆಚ್.ಡಿ. ಕೋಟೆ ತಾಲೂಕು ವ್ಯಾಪ್ತಿಯಲ್ಲಿ ಹೆಚ್.ಡಿ. ಕೋಟೆ, ಅಂತರಸಂತೆ, ಹಂಪಾಪುರ, ಹುಣಸೂರು ತಾಲೂಕು ವ್ಯಾಪ್ತಿಯಲ್ಲಿ ಹುಣಸೂರು, ಬಿಳಿಕೆರೆ, ಗಾವಡಗೆರೆ, ಹನಗೂಡು, ಕೆ.ಆರ್.ನಗರ ತಾಲೂಕು ವ್ಯಾಪ್ತಿಯಲ್ಲಿ ಕೆ.ಆರ್.ನಗರ, ಹೆಬ್ಬಾಳು, ಹೊಸ ಅಗ್ರಹಾರ, ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಮೈಸೂರು, ಇಲವಾಲ, ಜಯಪುರ, ವರುಣ, ನಂಜನಗೂಡು ತಾಲೂಕು ವ್ಯಾಪ್ತಿಯಲ್ಲಿ ನಂಜನಗೂಡು, ಬಿಳಿಗೆರೆ, ಚಿಕ್ಕಯ್ಯನಛತ್ರ, ಹುಲ್ಲಹಳ್ಳಿ, ದೊಡ್ಡಕವಲಂದೆ, ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯಲ್ಲಿ ಪಿರಿಯಾ ಪಟ್ಟಣ, ಬೆಟ್ಟದಪುರ, ಹಾರನಹಳ್ಳಿ, ರಾವಂದೂರು, ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ಟಿ.ನರಸೀಪುರ, ಬನ್ನೂರು, ಮೂಗೂರು, ಸೋಸಲೆ, ತಲಕಾಡ್, ಸರಗೂರು ತಾಲೂಕು ವ್ಯಾಪ್ತಿಯಲ್ಲಿ ಸರಗೂರು ಮತ್ತು ಬಿ.ಮತ್ತಿಕೆರೆ ಹಾಗೂ ಸಾಲಿಗ್ರಾಮ ತಾಲೂಕು ವ್ಯಾಪ್ತಿಯಲ್ಲಿ ಸಾಲಿಗ್ರಾಮ, ಮಿರಲೆ ಹಾಗೂ ಚುಂಚನಕಟ್ಟೆ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪಡೆದುಕೊಳ್ಳಬಹುದಾಗಿದೆ.

> **ಪೂರ್ವ ಮುಂಗಾರು ಆರಂಭವಾಗಿದ್ದು, ವಾಡಿಕೆಗಿಂತ ಅಲ್ಪ ಪ್ರಮಾಣ ಹೆಚ್ಚಾಗಿಯೇ ಮಳೆಯಾಗಿದೆ. ಏಪ್ರಿಲ್ ಆರಂಭದಲ್ಲಿ ಉತ್ತಮ ಮಳೆಯಾಗಿ ನಂತರ ಕಡಿಮೆಯಾಯಿತು. ಮೇ ತಿಂಗಳಿನಲ್ಲಿ ಉತ್ತಮ ಮಳೆಯಾಗುತ್ತೆ ಎಂಬ ಆಶಾಭಾವನೆ ಇದೆ. ಅದರಂತೆ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ 33 ರೈತ ಸಂಪರ್ಕ ಕೇಂದ್ರಗಳಲ್ಲಿಯೂ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ಮಾಡುತ್ತಿದ್ದು, ಅಗತ್ಯ ಇರುವಷ್ಟು ದಾಸ್ತಾನು ಇದ್ದು ಯಾವುದಕ್ಕೂ ಕೊರತೆ ಇಲ್ಲ. ಹಾಗೆಯೇ ಕ್ರಿಮಿನಾಶಕಗಳ ವಿತರಣೆಗೂ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.**
>
> 
>
> - ಕೆ.ಹೆಚ್.ರವಿ, ಜಂಟಿ ಕೃಷಿ ನಿರ್ದೇಶಕ, ಮೈಸೂರು

ಮಕ್ಕಳ ಗುರುತಿಸಿರುವ ಆರೋಗ್ಯ ಇಲಾಖೆ

ಹೆಚ್ಚಿಸುವಲ್ಲಿ ಹಾಗೂ ಮಾರಕ ರೋಗಗಳಿಂದ ಮಕ್ಕಳ ರಕ್ಷಿಸುವಲ್ಲಿ ಅಗತ್ಯವಿರುವ ಲಸಿಕೆಗಳನ್ನು ಕಾಲಕಾಲಕ್ಕೆ ಮಕ್ಕಳಿಗೆ ನೀಡುವುದು ಅವಶ್ಯಕವಾಗಿದೆ. ಆ ಮೂಲಕ ಮಕ್ಕಳ ಆರೋಗ್ಯ ರಕ್ಷಣೆ ಸಾಧ್ಯವಾಗಲಿದೆ. ವಿಶ್ವದಾದ್ಯಂತ ಪ್ರತಿವರ್ಷ ಏಪ್ರಿಲ್ ತಿಂಗಳ ಕೊನೆ ವಾರದಲ್ಲಿ ವಿಶ್ವ ಲಸಿಕಾ ಸಪ್ತಾಹ ಆಚರಿಸಲಾಗುತ್ತದೆ. ಆರೋಗ್ಯಕ್ಕೆ ಪೂರಕವಾದ ಲಸಿಕೆಗಳನ್ನು ಪಡೆಯುವಂತೆ ಸಾರ್ವಜನಿಕರನ್ನು ಉತ್ತೇಜಿಸುವ ಉದ್ದೇಶದಿಂದ ಲಸಿಕಾ ಸಪ್ತಾಹ ಆಚರಣೆಗೆ ತರಲಾಗಿದೆ.

ಇದರಡಿ ರಾಜ್ಯದಲ್ಲಿ ಆರೋಗ್ಯ ಇಲಾಖೆಯು ಲಸಿಕೆಗಳಿಂದ ವಂಚಿತರಾದ ಮಕ್ಕಳನ್ನು ಗುರುತಿಸಿ ಚುಚ್ಚುಮದ್ದು ನೀಡಲು ಅಭಿಯಾನ ಕೈಗೆತ್ತಿಕೊಂಡಿದೆ. ಅಂತೆಯೇ ಜಿಲ್ಲೆಯಲ್ಲಿ ಸಹ ಲಸಿಕಾ ಅಭಿಯಾನ ನಡೆಯುತ್ತಿದ್ದು, ಲಸಿಕೆಗಳಿಂದ ವಂಚಿತರಾದ ಐದು ವರ್ಷ ವಯೋಮಾನದ ಒಳಗಿನ ಮಕ್ಕಳನ್ನು ಗುರುತಿಸಿ ಲಸಿಕೆ ನೀಡಲಾಗುತ್ತಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಅವರ ಮಾರ್ಗದರ್ಶನ ಮತ್ತು ಜಿಲ್ಲಾ ಆರ್‌ಸಿ ಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್ ಮೇಲ್ವಿಚಾರಣೆಯಲ್ಲಿ ಈ ಅಭಿಯಾನ ಜಿಲ್ಲೆಯಾದ್ಯಂತ ನಡೆಯುತ್ತಿದೆ ಯು–ವಿನ್ ಪೋರ್ಟಲ್ ಮೂಲಕವೂ ನೋಂದಾಯಿಸಿ, ಲಸಿಕೆ ಪಡೆಯಬಹುದು. ಲಸಿಕೆ ಸಂಪೂರ್ಣ ಉಚಿತ.

ಅಭಿಯಾನ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆರೋಗ್ಯ ಇಲಾಖೆಯ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಪ್ರತಿ ಗುರುವಾರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳ ಲಸಿಕಾರಣ ನಡೆಯುತ್ತಿರುತ್ತದೆ. ಜೊತೆಗೆ ಪ್ರತಿ ಮಂಗಳವಾರ ಸಹ ವಿವಿಧಡೆ ಶಿಬಿರ ಆಯೋಜನೆ ಮೂಲಕ ಮಕ್ಕಳ ಲಸಿಕಾರಣ ಹಮ್ಮಿಕೊಳ್ಳ ಲಾಗುತ್ತದೆ. ಹೀಗಿದ್ದರೂ ಪೋಷಕರು ಕೆಲಸ ಕಾರ್ಯಗಳಲ್ಲಿ ನಿರತರಾಗುವ ಕಾರಣ ಕೆಲ ಮಕ್ಕಳು ಲಸಿಕೆಗಳಿಂದ ವಂಚಿತರಾಗುವ ಸಾಧ್ಯತೆ ಇರುತ್ತದೆ. ಜೊತೆಗೆ ಉದ್ಯೋಗ ಕ್ಕಾಗಿ ವಲಸೆ ಹೋಗುವ ಪ್ರವೃತ್ತಿ ಹೊಂದಿರುವ ಪೋಷಕರು ಇರುವ ಕಾರಣಕ್ಕೂ ಅಂತಹವರ ಮಕ್ಕಳು ಲಸಿಕೆಗಳಿಂದ ವಂಚಿತರಾಗುತ್ತಾರೆ. ಹಾಗಾಗಿ ಅಂತಹ ಮಕ್ಕಳನ್ನು ಗುರುತಿಸಿ ಲಸಿಕೆ ನೀಡಲು ಈ ವಿಶೇಷ ಲಸಿಕಾ ಸಪ್ತಾಹ ಅಭಿಯಾನ ಸಹಕಾರಿಯಾಗಲಿದೆ ಎಂದು ತಿಳಿಸಿದರು.

> **ಪೋಷಕರು ಅಭಿಯಾನ ಸದ್ಬಳಕೆ ಮಾಡಿಕೊಳ್ಳಬೇಕು...**
>
> **ಜಿಲ್ಲೆಯಲ್ಲಿ ಲಸಿಕೆಯಿಂದ ವಂಚಿತರಾದ ಐದು ವರ್ಷದೊಳಗಿನ ಮಕ್ಕಳ ಪಟ್ಟಿ ಸಿದ್ಧಪಡಿಸಿದ್ದು, ಈ ಮಕ್ಕಳು ಯಾವ್ಯಾವ ಲಸಿಕೆಗಳನ್ನು ಪಡೆಯುವುದು ಬಾಕಿ ಇದೆ ಎಂಬುದನ್ನೂ ಇಲಾಖೆ ಸಿಬ್ಬಂದಿ ಪಟ್ಟಿ ತಯಾರಿಸಿ ಅಭಿಯಾನ ಮುಂದುವರೆಸಿದ್ದಾರೆ. ಜೊತೆಗೆ ಮುಂದಿನ ತಿಂಗಳು ಸಹ ಇದೇ ರೀತಿಯಲ್ಲಿ ಲಸಿಕಾ ಅಭಿಯಾನ ನಡೆಸಲು ಯೋಜನೆ ರೂಪಿಸಲಾಗಿದೆ. ಆ ಮೂಲಕ ಯಾವುದೇ ಮಕ್ಕಳು ಲಸಿಕೆಗಳಿಂದ ವಂಚಿತರಾಗುವುದನ್ನು ತಪ್ಪಿಸಲು ಸಾಧ್ಯವಾಗಲಿದೆ. ತಮ್ಮ ಮಕ್ಕಳಿಗೆ ಅಗತ್ಯ ಲಸಿಕೆ ಕೊಡಿಸಲು ಪ್ರಸ್ತುತದ ಅಭಿಯಾನವನ್ನು ಜಿಲ್ಲೆಯ ಪೋಷಕರು ಸದ್ಬಳಕೆ ಮಾಡಿಕೊಳ್ಳಬೇಕು.**
>
> 
>
> -ಡಾ.ಮಹಮ್ಮದ್ ಸಿರಾಜ್ ಅಹಮದ್, ಆರ್‌ಸಿಹೆಚ್ ಅಧಿಕಾರಿಗಳು, ಆರೋಗ್ಯ ಇಲಾಖೆ ಮೈಸೂರು.

ತಹವ್ವೂರ್ ರಾಣಾನನ್ನು ಮತ್ತೆ 12 ದಿನ ಎನ್‌ಐಎ ಕಸ್ಟಡಿಗೆ



ನವದೆಹಲಿ: ಅಮೆರಿಕದಿಂದ ಗಡಿಪಾರಾಗಿರುವ ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹವ್ವೂರ್ ರಾಣಾನನ್ನು ಸೋಮವಾರ ದೆಹಲಿ ಕೋರ್ಟ್ ಹೆಚ್ಚಿನ ತನಿಖೆಗಾಗಿ ಮತ್ತೆ 12 ದಿನ ಎನ್‌ಐಎ ಕಸ್ಟಡಿಗೆ ನೀಡಿ ಆದೇಶಿಸಿದೆ.

ತಹವ್ವೂರ್ ರಾಣಾನ 18 ದಿನಗಳ ಎನ್‌ಐಎ ಕಸ್ಟಡಿ ಅವಧಿ ಇಂದು ಅಂತ್ಯಗೊಂಡ ಹಿನ್ನೆಲೆಯಲ್ಲಿ ಅಧಿಕಾರಿಗಳು ಆರೋಪಿಯನ್ನು ಬಿಗಿ ಭದ್ರತೆಯ ನಡುವೆ ಮತ್ತು ಮುಖಕ್ಕೆ ಮುಸುಕು ಹಾಕಿ ಎನ್‌ಐಎ ವಿಶೇಷ ನ್ಯಾಯಾಧೀಶ ಚಂದರ್ ಜಿತ್ ಸಿಂಗ್ ಅವರ ಮುಂದೆ ಹಾಜರುಪಡಿಸಿದರು.

ಮುಂಬೈ ದಾಳಿಯ ಉಗ್ರನ ವಿಚಾರಣೆ ನಡೆಸಿದ ಕೋರ್ಟ್, ಹೆಚ್ಚಿನ ತನಿಖೆಗಾಗಿ ರಾಣಾನನ್ನು ಮತ್ತೆ 12 ದಿನಗಳ ಕಾಲ ಎನ್‌ಐಎ ವಶಕ್ಕೆ ನೀಡಿದೆ. ANI ಜೊತೆ ಮಾತನಾಡಿದ ರಾಣಾ ಪರ ವಕೀಲ ಪಿಯೂಷ್ ಸಚ್‌ದೇವ್ ಅವರು, ಆರೋಪಿಯನ್ನು ಇನ್ನೂ 12 ದಿನಗಳ ಕಾಲ ಎನ್‌ಐಎ ಕಸ್ಟಡಿಗೆ ಕಳುಹಿಸಲಾಗಿದೆ. ಎನ್‌ಐಎ ಹೆಚ್ಚಿನ ದಾಖಲೆಗಳೊಂದಿಗೆ ಆರೋಪಿಯ ವಿಚಾರಣೆ ನಡೆಸಲು ಬಯಸಿದೆ ಎಂದರು.

ಎನ್‌ಐಎ ರಾಣಾ ವಿಚಾರಣೆಗೆ ಹೆಚ್ಚಿನ ಸಮಯ ಬೇಕು ಎಂದು ಹೇಳಿದೆ. ತಹವ್ವೂರ್ ರಾಣಾ ತನಿಖೆಯಲ್ಲಿದ್ದಾರೆ. ನಾನು ಅವರನ್ನು ನಿಯಮಿತವಾಗಿ ಭೇಟಿಯಾಗುತ್ತಿದ್ದೇನೆ ಅವರು ತಿಳಿಸಿದ್ದಾರೆ. 64 ವರ್ಷದ ರಾಣಾ ಪಾಕಿಸ್ತಾನ ಮೂಲದ ಕೆನಡಾ ಪ್ರಜೆ ಮತ್ತು 2008 ರ ಮುಂಬೈ ಭಯೋತ್ಪಾದಕ ದಾಳಿಯ ಪ್ರಮುಖ ಸಂಚುಕೋರರಲ್ಲಿ ಒಬ್ಬನಾದ ಡೇವಿಡ್ ಕೋಲ್ಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿ ಅವರ ನಿಕಟವರ್ತಿಯಾಗಿ ದ್ದಾರೆ. 2008 ರ ಮುಂಬೈ ದಾಳಿಯ ಪ್ರಮುಖ ಆರೋಪಿ ರಾಣಾ ಅರ್ಜಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ತಿರಸ್ಕರಿಸಿದ್ದರಿಂದ ಗಡಿಪಾರುನಿಂದ ತಪ್ಪಿಸಿಕೊಳ್ಳುವ ಕೊನೆಯ ಯತ್ನ ವಿಫಲವಾದ ನಂತರ ಗುರುವಾರ ವಿಶೇಷ ವಿಮಾನದಲ್ಲಿ ಭಾರತಕ್ಕೆ ಕರೆತರಲಾಗಿದೆ.

ಪಹಲ್ಗಾಮ್ ಉಗ್ರರ ದಾಳಿ ಪ್ರಕರಣ

ಭರತ್ ಭೂಷಣ್ ಮನೆಯಲ್ಲಿ ಎನ್‌ಐಎ ಮಾಹಿತಿ ಸಂಗ್ರಹ

ಬೆಂಗಳೂರು: ಪಹಲ್ಗಾಮ್ ನಲ್ಲಿ ಉಗ್ರರ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಳಿಸಿರುವ ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು, ಉಗ್ರರ ದಾಳಿಯಲ್ಲಿ ಮೃತಪಟ್ಟ ಬೆಂಗಳೂರಿನ ಭರತ್ ಭೂಷಣ್ ಮನೆಗೆ ಭೇಟಿ ನೀಡಿ ಘಟನೆ ಕುರಿತು ಮಹತ್ವದ ಮಾಹಿತಿಯನ್ನು ಕಲೆ ಹಾಕಿದ್ದಾರೆ.

ನಗರದ ಮತ್ತಿಕೆರೆಯಲ್ಲಿರುವ ಭರತ್ ಭೂಷಣ್ ಅವರ ನಿವಾಸಕ್ಕೆ ರಾಷ್ಟ್ರೀಯ ತನಿಖಾ ದಳದ ನಾಲ್ವರು ಅಧಿಕಾರಿಗಳು ಭೇಟಿ ನೀಡಿದ್ದು, ಭರತ್ ಅವರ ಪತ್ನಿ ಬಳಿ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಸುಮಾರು 12 ಗಂಟೆಗಳ ಕಾಲ ಭರತ್ ಭೂಷಣ್ ಅವರ ಮನೆಯಲ್ಲಿ ಎನ್‌ಐಎ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆಂದು ತಿಳಿದುಬಂದಿದೆ. ಸುಜಾತ ಅವರ ಬಳಿ ಸುಮಾರು 6 ಗಂಟೆಗಳ ಕಾಲ ಅಧಿಕಾರಿಗಳು ವಿಚಾರಣೆ ನಡೆಸಿದ್ದು, ಕಾಶ್ಮೀರ ಪ್ರವಾಸದ ಕುರಿತು ಪ್ರಶ್ನೆಗಳನ್ನು ಕೇಳಿದ್ದಾರೆ.

ಕಾಶ್ಮೀರಕ್ಕೆ ಹೋಗಿದ್ದು ಯಾವಾಗ, ಯಾವ ಟ್ರಾವೆಲ್ಸ್ ಮೂಲಕ ಹೋಗಿದ್ದಿರಿ, ಕಾಶ್ಮೀರದಲ್ಲಿ ಎಲ್ಲಿ ಉಳಿದುಕೊಂಡಿದ್ದಿರಿ, ಪಹಲ್ಗಾಮ್‌ಗೆ ಯಾವತ್ತೂ ಹೋಗದ್ದಿರಿ, ಎಷ್ಟೊತ್ತಿಗೆ ಹೋಗಿದ್ದಿ ಎನ್ನುವಂತೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆಂದು ತಿಳಿದುಬಂದಿದೆ.

ಇದಲ್ಲದೆ, ಉಗ್ರರು ದಾಳಿ ಮಾಡಿದ ಸಮಯ, ಎಷ್ಟು ಜನ ಇದ್ದರು, ಅವರು ಯಾವ ಭಾಷೆಯಲ್ಲಿ ಮಾತನಾಡಿದರು. ಭರತ್ ಭೂಷಣ್ ಬಳಿ ಏನಾದ್ರೂ ಮಾತನಾಡಿದ್ರಾ, ನಿಮ್ಮ ಬಳಿ ಏನ್ ಮಾತನಾಡಿದ್ದರು. ಅವರ ಮುಖದ ಚಹರೆ ನೆನಪು ಇದೆಯಾ, ಮುಖ ಯಾವ ರೀತಿ ಇತ್ತು, ಮುಖದ ಮೇಲೆ ಯಾವುದಾದರೂ ಮಾರ್ಕ್ ಇತ್ತಾ ಎಂಬ ಪ್ರಶ್ನೆಗಳ ಕೇಳಿದ್ದಾರೆ ಎನ್ನಲಾಗಿದೆ.

ಇದರ ಜೊತೆಗೆ ಸುಮಾರು 14ಕ್ಕೂ ಹೆಚ್ಚು ಶಂಕಿತರ ಫೋಟೋಗಳನ್ನೂ ಅಧಿಕಾರಿಗಳು ತೋರಿಸಿದ್ದು, ಇದರಲ್ಲಿ ಯಾರಾದ್ರೂ ಇದ್ದಾರಾ ಎಂದು ಪ್ರಶ್ನಿಸಿದ್ದಾರೆ. ವಿಚಾರಣೆ ವೇಳೆ ಭರತ್ ಪತ್ನಿಯ ವರ ಹೇಳಿಕೆ ಆಧರಿಸಿ ಎನ್‌ಐಎ ಕೆಲ ರೇಖಾಚಿತ್ರಗಳನ್ನು ಬಿಡಿಸಿದ್ದು, ಈ ರೇಖಾಚಿತ್ರಗಳನ್ನು ತೋರಿಸಿಕೊಂಡು ಇನ್ನಷ್ಟು ಮಾಹಿತಿ ಸಂಗ್ರಹಿಸಿದ್ದಾರೆ.

ಚಾ.ನಗರದಲ್ಲಿ ಗುಡುಗು ಸಹಿತ ಮಳೆ

ಅಂತೆಯೇ ಚಿತ್ರದುರ್ಗದ ಹೊಳಲ್ಕೆರೆ, ಚಳ್ಳಕೆರೆ, ಹಿರಿಯೂರು ಮತ್ತು ಹೊಸದುರ್ಗದಲ್ಲಿ ಚದುರಿದಂತೆ ಮಳೆಯಾಗಲಿದ್ದು, ಚಿತ್ರದುರ್ಗ ನಗರದಲ್ಲಿ ಒಣಹವೆ ಮುಂದುವರೆಯಲಿದೆ ಎನ್ನಲಾಗಿದೆ. ಉಳಿದಂತೆ ಉತ್ತರ ಕರ್ನಾಟಕ ಗದಗ, ಕೊಪ್ಪಳ, ಬಳ್ಳಾರಿ, ಹಾವೇರಿ ಯಲ್ಲಿ ಸಾಧಾರಣ ಮಳೆ ಜೊತೆ ಒಣಹವೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಬೆಂಗಳೂರಿನಲ್ಲಿ ಆಲಿಕಲ್ಲು ಮಳೆ: ಇನ್ನು ಬೆಂಗಳೂರು ಮತ್ತು ಅದರ ಸುತ್ತಮುತ್ತ ಪ್ರದೇಶಗಳಲ್ಲಿ ಏಪ್ರಿಲ್ 30 ಮತ್ತು ಮೇ 01, 2025 ರಂದು ಅಲ್ಲಲ್ಲಿ ಆಲಿಕಲ್ಲು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಮೋದಿ 'ಸಮರ' ಸಮಾಲೋಚನೆ!

ಪ್ರಸಕ್ತ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಪಹಲ್ಗಾಮ್ ಹತ್ಯಾಕಾಂಡದ ಬಗ್ಗೆ ವಿಶ್ವದ ಹಲವು ರಾಷ್ಟ್ರಗಳು ಭಾರತಕ್ಕೆ ಸಾಂತ್ವನ ಹೇಳುವುದರೊಂದಿಗೆ ಪ್ರತೀಕಾರಕ್ಕೆ ಮುಂದಾದರೆ, ಅದಕ್ಕೆ ತಮ್ಮ ಬೆಂಬಲವಿದೆ ಎಂಬುದನ್ನು ಬಹಿರಂಗವಾಗಿಯೇ ಘೋಷಿಸಿವೆ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ಅಲ್ಲದೇ ಹಲವು ಮುಸ್ಲಿಂ ರಾಷ್ಟ್ರಗಳೂ ಸಹ ಭಾರತದ ನಿಲುವನ್ನು ಬೆಂಬಲಿಸುವುದಾಗಿ ಪ್ರಕಟಿಸಿವೆ. ಇಸ್ರೇಲ್ ಅಂತೂ ಭಾರತ ಯುದ್ಧಕ್ಕೆ ಮುಂದಾದರೆ ಅದಕ್ಕೆ ತಮ್ಮ ಸಂಪೂರ್ಣ ಬೆಂಬಲವಿರುವುದಾಗಿ ಮೊದಲೇ ಘೋಷಿಸಿದೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಯುದ್ಧ ವಿಮಾನಗಳು, ಅಪಾರ ಸೈನ್ಯ ಹಾಗೂ ಉನ್ನತ ಯುದ್ಧತಂತ್ರವನ್ನು ಹೊಂದಿರುವ ಭಾರತ, ಪ್ರತೀಕಾರದಲ್ಲಿ ಜಯ ನನ್ನದೇ ಎಂಬ ವಿಶ್ವಾಸದಿಂದ ಬೀಗುತ್ತಿದೆ.

ಹೆಚ್ಚು ಸಕ್ರಿಯ ಉಗ್ರರ ಕೈವಾಡ ಪತ್ತೆ

ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾಗಿರುವ ಶಂಕೆ ಇದೆ. ಆತನ ಮನೆಯನ್ನು ಈಗಾಗಲೇ ಭದ್ರತಾ ಪಡೆಗಳು ಧ್ವಂಸಗೊಳಿಸಿವೆ. ಎಲ್‌ಇಟಿಯೊಂದಿಗೆ ಸಂಬಂಧ ಹೊಂದಿರುವ ಮತ್ತೊಬ್ಬ ಶಂಕಿತ ಶಾಹಿದ್ ಕುಟೇ ಅವರ ಮನೆಯನ್ನೂ ಧ್ವಂಸಗೊಳಿಸಲಾಗಿದೆ.

ಪಹಲ್ಗಾಮ್ ದಾಳಿಯಲ್ಲಿ ಇನ್ನೊಬ್ಬ ಭಯೋತ್ಪಾದಕ JEM ಸಂಘಟನೆಯ ಆಸಿಫ್ ಶೇಖ್ ಹೆಸರು ಕೂಡ ಕಾಣಿಸಿಕೊಂಡಿದೆ. ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ISI ನಿರ್ದೇಶನದ ಮೇರೆಗೆ ಪಹಲ್ಗಾಮ್ ಹತ್ಯೆಯಲ್ಲಿ LETಗೆ ಜೆಇಎಂ ನೆರವಾಗಿರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಶುಕ್ರವಾರ ಟ್ರಾಲ್‌ನಲ್ಲಿರುವ ಶೇಖ್ ಅವರ ನಿವಾಸವನ್ನು ಭದ್ರತಾ ಪಡೆಗಳು ನೆಲಸಮಗೊಳಿಸಿವೆ.

ಜಮ್ಮು ಮತ್ತು ಕಾಶ್ಮೀರ ಪೊಲೀಸರು ಈಗಾಗಲೇ ಇಬ್ಬರು ಪಾಕಿಸ್ತಾನಿಗಳಾದ ಅಲಿ ಭಾಯಿ ಅಲಿಯಾಸ್ ತಲ್ಹಾ ಭಾಯಿ ಮತ್ತು ಹಾಶಿಮ್ ಮೂಸಾ ಅಲಿಯಾಸ್ ಸುಲೇಮಾನ್ ಮತ್ತು ಸ್ಥಳೀಯ ಉಗ್ರ ಆದಿಲ್ ಹುಸೇನ್ ಥೋಕರ್ ಸೇರಿದಂತೆ ಮೂವರು ಭಯೋತ್ಪಾದಕರ ರೇಖಾಚಿತ್ರಗಳನ್ನು ಬಿಡುಗಡೆ ಮಾಡಿದ್ದು, ಅವರ ತಲೆಗೆ ತಲಾ 20 ಲಕ್ಷ ರೂಪಾಯಿ ಬಹುಮಾನ ಘೋಷಿಸಿದ್ದಾರೆ.

ಬಡಾಯಿ ಕೊಚ್ಚಿಕೊಳ್ಳುತ್ತಿರುವ ಪಾಕ್!

ಸಲಹೆ ನೀಡಿದ್ದಾರೆ. ಆದರೆ, ಪಾಕಿಸ್ತಾನ ಪ್ರಧಾನಮಂತ್ರಿ ಹಾಗೂ ಸಚಿವರು, ಉನ್ನತ ಅಧಿಕಾರಿಗಳು ಮಾತ್ರ ಪಾಕಿಸ್ತಾನ ಯುದ್ಧಕ್ಕೆ ಸಜ್ಜಾಗಿದೆ. ತಮ್ಮ ವಿರುದ್ಧ ಭಾರತ ಸಮರ ಸಾರಿದರೆ ತಕ್ಕ ಪ್ರತ್ಯುತ್ತರ ನೀಡುವುದಾಗಿ ಬಡಾಯಿ ಕೊಚ್ಚಿಕೊಳ್ಳುತ್ತಿರುವುದು ವಿಶ್ವ ಸಮುದಾಯದಲ್ಲಿ ಅಚ್ಚರಿಗೆ ಕಾರಣವಾಗಿದೆ.

ಉಗ್ರರ ದಾಳಿ ಹಿಂದೆ ಚೀನಾ, ಪಾಕ್: ಪಹಲ್ಗಾಮ್ ಉಗ್ರರ ದಾಳಿ ಹಿಂದೆ ಚೀನಾ ಮತ್ತು ಪಾಕಿಸ್ತಾನದ ಐಎಸ್‌ಐ ಕೈವಾಡವಿರುವುದು ಒಂದೊಂದೇ ಮಾಹಿತಿಯಿಂದ ಬಯಲಾಗುತ್ತಿದೆ. ದಾಳಿಗೆ 4 ಗಂಟೆ ಮುನ್ನಾ, ಉಗ್ರರು ಚೀನಾದ ಆಪ್ ಬಳಸಿ ಕರಾಚಿಯಲ್ಲಿರುವ ತಮ್ಮ ಮಾಸ್ಟರ್ ಮೈಂಡ್ ಸಂಪರ್ಕ ಸಾಧಿಸಿರುವುದು ಗೊತ್ತಾಗಿದೆ. ಅಲ್ಲದೇ, ಉಗ್ರರು ಈ ದಾಳಿಗೆ 5 ದಿನಗಳ ಮುನ್ನವೇ ಸಂಚು ರೂಪಿಸಿದ್ದಾರೆ. ಈ ಉಗ್ರರಿಗೆ ಪಾಕಿಸ್ತಾನದಿಂದ ಚೀನಾ ಡ್ರೋಣ್‌ಗಳ ಮೂಲಕ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗಿದೆ. ಪಾಕಿಸ್ತಾನದ ಐಎಸ್‌ಐ ಕೂಡ ಉಗ್ರರ ದಾಳಿಗೆ ಬೆಂಬಲವಾಗಿ ನಿಂತಿರುವುದು ಸ್ಪಷ್ಟವಾಗುತ್ತಿದೆ. ಮಾತ್ರವಲ್ಲ ಉಗ್ರರಿಗೆ ಆರ್ಥಿಕ ನೆರವನ್ನೂ ನೀಡಿದೆ. ದಾಳಿಯ ನಂತರ ಉಗ್ರರು ಕಳೆದ 5 ದಿನಗಳಲ್ಲಿ 4 ಬಾರಿ ಭಾರತೀಯ ಸೇನೆ ಕಣ್ಣಿಗೆ ಬಿದ್ದಿದ್ದಾರೆ. ಹತ್ಯಾಕಾಂಡ ನಡೆಸಿದ ಉಗ್ರರು ನಾಗ್‌ಬಾಲ್ ಅರಣ್ಯ ಪ್ರವೇಶಿಸಿದ್ದು, ಅವರ ಜಾಡನ್ನು ಹಿಂಬಾಲಿಸುತ್ತಿರುವ ಭಾರತೀಯ ಸೇನೆ ಯಾವುದೇ ಸಂದರ್ಭದಲ್ಲಿ ಅವರನ್ನು ಸೆರೆ ಹಿಡಿಯುವ ಇಲ್ಲವೇ ಸಂಹರಿಸುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಅಸ್ತಿತ್ವಕ್ಕೆ ಅಪಾಯ ಬಂದರೆ ಅಣ್ವಸ್ತ್ರ ಬಳಕೆ: ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರ ಹತ್ಯೆಗೈದ ಭಯೋತ್ಪಾದಕ ದಾಳಿಯ ನಂತರ ಭಾರತವು ದಾಳಿಗೆ ಸಜ್ಜಾಗಿದ್ದು, ಯಾವುದೇ ಕ್ಷಣದಲ್ಲಿ ನಡೆಯುವ ಸಾಧ್ಯತೆ ಇದೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಮೊಹಮ್ಮದ್ ಆಸಿಫ್ ಹೇಳಿದ್ದಾರೆ.

ಪಹಲ್ಗಾಮ್ ದಾಳಿಯ ಹೊಣೆ ಹೊತ್ತಿರುವ ದಿ ರೆಸಿಸ್ಟಂಟ್ ಫ್ರಂಟ್‌ಗೆ ಪಾಕಿಸ್ತಾನ ಮೂಲಕ ನಿಷೇಧಿತ ಜೈಶ್ ಎ ಮೊಹಮ್ಮದ್ ಸಂಘಟನೆಯ ಬೆಂಬಲವಿದೆ ಎಂದು ಭಾರತ ವಾದಿಸಿದ್ದು, ಘಟನೆಗೆ ಕಾರಣರಾದ ಪ್ರತಿಯೊಬ್ಬರನ್ನೂ ಹುಡುಕಿ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಪ್ರಧಾನಿ ನರೇಂದ್ರಮೋದಿ ಈಗಾಗಲೇ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಪಾಕಿಸ್ತಾನದ ಸೇನೆಯ ಸಿದ್ಧತೆ ಕುರಿತು ಮಾತನಾಡಿರುವ ಸಚಿವ ಆಸಿಫ್, ಕಾಲ ಸನ್ನಿಹಿತವಾಗಿದೆ. ಹೀಗಾಗಿ ನಮ್ಮ ಸೇನೆಯನ್ನು ಬಲಪಡಿಸುತ್ತಿದ್ದೇವೆ. ಸಂದಿಗ್ಧ ಸಂದರ್ಭದಲ್ಲಿ ಪ್ರಮುಖ ಕಾರ್ಯತಂತ್ರದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವೆಲ್ಲವನ್ನೂ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ವಾಗ್ಯುದ್ಧಗಳು ಹೆಚ್ಚಾಗಿವೆ. ಭಾರತದ ದಾಳಿಯ ಸಾಧ್ಯತೆ ಕುರಿತು ಸರ್ಕಾರಕ್ಕೆ ಸೇನೆ ಮಾಹಿತಿ ನೀಡಿದೆ. ನಮ್ಮ ಅಸ್ತಿತ್ವಕ್ಕೆ ನೇರ ಅಪಾಯ ಎದುರಾದರೆ ಮಾತ್ರ ಅಣ್ವಸ್ತ್ರ ಉಪಯೋಗಿಸಲಾಗುವುದು ಎಂದಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವೆ ಈವರೆಗೂ ಎರಡು ಪ್ರಮುಖ ಯುದ್ಧಗಳು ನಡೆದಿವೆ. ಪಹಲ್ಗಾಮ್ ದಾಳಿಯಲ್ಲಿ ಪಾಲ್ಗೊಂಡ ಇಬ್ಬರು ಭಯೋತ್ಪಾದಕರು ಪಾಕಿಸ್ತಾನದವರು ಎಂದು ಭಾರತ ಹೇಳಿದೆ. ಈ ಆರೋಪವನ್ನು ಪಾಕಿಸ್ತಾನ ತಳ್ಳಿಹಾಕಿದೆ. ಜತೆಗೆ ಘಟನೆ ಕುರಿತು ತಟಸ್ಥ ತನಿಖೆಗೆ ಆಗ್ರಹಿಸಿದೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಹತ್ಯೆ: ಭದ್ರತಾ ವೈಫಲ್ಯ ಮರೆಮಾಚಲು ಬಿಜೆಪಿ ನನ್ನ ಮೇಲೆ ಗೂಬೆ ಕೂರಿಸುತ್ತಿದೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ● ಪಾಕಿಸ್ತಾನ ವಿರುದ್ಧ ಸದ್ಯಕ್ಕೆ ಯುದ್ಧ ಬೇಡ ಎಂದಿದ್ದನ್ನೇ ತಿರುಚಿ ನನ್ನ ತೇಜೋವಧೆ ಮಾಡಲಾಗಿದೆ



ಬೆಳಗಾವಿಯಲ್ಲಿ ಎಐಸಿಸಿ ಆಯೋಜಿಸಿದ್ದ ಕೇಂದ್ರ ಸರ್ಕಾರದ ಬೆಲೆ ಏರಿಕೆ, ಜನ ವಿರೋಧಿ ನೀತಿ ಹಾಗೂ ದೇಶ ವಿರೋಧಿ ಆಡಳಿತ ಖಂಡನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಬೆಂಗಳೂರು,ಏ.28(ಕೆಎಂಶಿ)– ಕೇಂದ್ರ ಗುಪ್ತಚರ ವೈಫಲ್ಯದಿಂದ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಭಾರತೀಯರು ಗುಂಡಿಗೆ ಬಲಿಯಾಗಿದ್ದನ್ನು ಮರೆಮಾಚಲು ನನ್ನ ವಿರುದ್ಧ ಗೂಬೆ ಕೂರಿಸುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾನು, ಮೈಸೂರಿನಲ್ಲಿ ಪಾಕಿಸ್ತಾನದ ವಿರುದ್ಧ ಸದ್ಯಕ್ಕೆ ಯುದ್ಧ ಬೇಡ ಎಂಬ ಹೇಳಿಕೆ ನೀಡಿದ್ದನ್ನೇ ತಿರುಚಿ, ನನ್ನನ್ನೇ ಗುರಿಯಾಗಿಸಿ ಕೇಂದ್ರ ಸರ್ಕಾರ ತನ್ನ ತಪ್ಪನ್ನು ಮರೆಮಾಚುತ್ತಿದೆ. ಇದಕ್ಕೆ ಕೆಲವು ರಾಷ್ಟ್ರಮಟ್ಟದ ಸುದ್ದಿ ವಾಹಿನಿಗಳು ಕೈಜೋಡಿಸಿವೆ ಎಂಬುದಾಗಿ ಆರೋಪಿಸಿದ ಮುಖ್ಯಮಂತ್ರಿ, ಭಯೋತ್ಪಾದನೆ ಹತ್ತಿಕ್ಕಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಈ ವಿಷಯದಲ್ಲಿ ಕೇಂದ್ರ ಕೈಗೊಳ್ಳುವ ನಿರ್ಧಾರಗಳಿಗೆ ನಮ್ಮ ಬೆಂಬಲವಿದೆ. ನಾವು ಬಿಜೆಪಿಯ ಗೊಡ್ಡು ಬೆದರಿಕೆಗಳಿಗೆ ಜಗ್ಗಲ್ಲ, ಬಗ್ಗಲ್ಲ. ಎಲ್ಲವನ್ನೂ ಸಾರ್ವಜನಿಕವಾಗಿ ಎದುರಿಸುವ ಶಕ್ತಿ ನನಗಿದೆ, ನಮ್ಮ ಕಾರ್ಯಕರ್ತರಿಗೂ ಇದೆ ಎಂದರು.

ಬೆಳಗಾವಿಯಲ್ಲಿ ಎಐಸಿಸಿ ಆಯೋಜಿಸಿದ್ದ ಕೇಂದ್ರ ಸರ್ಕಾರದ ಬೆಲೆ ಏರಿಕೆ, ಜನ ವಿರೋಧಿ ನೀತಿ ಹಾಗೂ ದೇಶ ವಿರೋಧಿ ಆಡಳಿತ ಖಂಡನಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಿಂದ ನಿರಂತರ ಬೆಲೆ ಏರಿಕೆ ಮಾಡುತ್ತಾ, ಭಾರತೀಯರ ಬದುಕನ್ನು ಬೆಲೆ ಏರಿಕೆಯಲ್ಲಿ ಬೇಯಿಸುತ್ತಾ, ಸಮಾಜ ಛಿದ್ರಗೊಳಿಸಿ, ಬಿರುಕು ಮೂಡಿಸುತ್ತಾ ಜನದ್ರೋಹಿಯಾಗಿ ವರ್ತಿಸುತ್ತಿರುವುದು ಬಿಟ್ಟರೆ ಬೇರೆ ಏನು ಮಾಡಿದ್ದೀರಿ, ಜನರಿಗೆ ತೋರಿಸಿ ಎಂದು ಸವಾಲು ಹಾಕಿದರು.

ಸಂಘ ಪರಿವಾರ ಸ್ವಾತಂತ್ರ್ಯ ಹೋರಾಟಕ್ಕೆ ಏಕೆ ಬರಲಿಲ್ಲ, ಆಗ ಏನು ಮಾಡುತ್ತಿದ್ದೀರಿ. ಸ್ವಾತಂತ್ರ್ಯ ಹೋರಾಟದಿಂದ ಆಧುನಿಕ ಭಾರತ ನಿರ್ಮಾಣದವರೆಗೂ ಬಿಜೆಪಿ, ಸಂಘ ಪರಿವಾರದ ಕೊಡುಗೆ ಏನಿದೆ, ನಾಚಿಕೆ ಇಲ್ಲದೆ ದೇಶಭಕ್ತಿ ಬಗ್ಗೆ ಮಾತಾನಾಡುತ್ತೀರಾ. ಡಾ.ಮನಮೋಹನ್‌ಸಿಂಗ್ ಪ್ರಧಾನಿಯಾಗಿದ್ದಾಗ ಅತ್ಯಂತ ಶ್ರೀಮಂತರ ಮೇಲೆ 32% ಟ್ಯಾಕ್ಸ್ ಇತ್ತು. ನರೇಂದ್ರ ಮೋದಿ ಪ್ರಧಾನಿಯಾದ ಮೇಲೆ ಅತ್ಯಂತ ಶ್ರೀಮಂತರ ಮೇಲಿನ ತೆರಿಗೆ ಶೇ.25ಕ್ಕೆ ಇಳಿಯಿತು. ಬಡವರು, ಮಧ್ಯಮ ವರ್ಗದವರ ಮೇಲಿನ ತೆರಿಗೆ ಹೆಚ್ಚಿಸಿದಿರಿ. ಇದನ್ನು ಪ್ರಶ್ನಿಸಬಾರದೆ. ನಿರಂತರ ಸುಳ್ಳುಗಳಲ್ಲಿ ಇನ್ನೂ ಎಷ್ಟು ವರ್ಷ ಮರಳು ಮಾಡುತ್ತೀರಿ, ಸತ್ಯ ಹೇಳಿ ಎಂದರು.

ಹಾಲಿನ ದರ 4 ರೂ ಹೆಚ್ಚಿಸಿ, ಪೂರ್ತಿಯಾಗಿ ರೈತರಿಗೆ, ಗೋಪಾಲಕರಿಗೆ, ಗೋವು ಸಾಕಾಣಿಕೆದಾರರಿಗೆ ವರ್ಗಾಯಿಸಿದ್ದೀವಿ, ಒಂದು ರೂಪಾಯಿ ಕೂಡ ಸರ್ಕಾರಕ್ಕೆ ಬರಲ್ಲ, ಹಾಲಿನ ದರ ಇಡೀ ದೇಶದಲ್ಲಿ ಕಡಿಮೆ ಇರುವುದು ನಮ್ಮ ರಾಜ್ಯದಲ್ಲಿ ಮಾತ್ರ ಬಸ್ ದರ, ನೀರಿನ ದರ, ವಿದ್ಯುತ್ ದರ ಅಕ್ಕಪಕ್ಕದ ರಾಜ್ಯಗಳಿಗಿಂತ ಅತ್ಯಂತ ಕಡಿಮೆ ಇರುವುದು ನಮ್ಮ ರಾಜ್ಯದಲ್ಲಿ ಮಾತ್ರ. ನಿಮ್ಮ ಸುಳ್ಳು, ಅಪಪ್ರಚಾರ, ಬೆದರಿಕೆಗೆ ಸಿದ್ದರಾಮಯ್ಯ ಹೆದರುವವನಲ್ಲ. ನಿಮ್ಮನ್ನು ಮೆಟ್ಟಿ ನಿಲ್ಲುತ್ತೇವೆ, ಕಾಂಗ್ರೆಸ್ ಸರ್ಕಾರಕ್ಕೆ ಆ ಶಕ್ತಿ ಇನ್ನೂ ಇದೆ. ಅಕ್ಕಿ, ಎಣ್ಣೆ, ಚಿನ್ನ, ಬೆಳ್ಳಿ, ಗೊಬ್ಬರ, ಕಾಳು, ಬೇಳೆ, ಡೀಸೆಲ್, ಪೆಟ್ರೋಲ್, ಸಿಲಿಂಡರ್ ಎಲ್ಲದರ ಬೆಲೆ ಏರಿಸಿದ್ದೀರಿ, ಯಾವುದನ್ನು ಬಿಟ್ಟಿದ್ದೀರಿ ಹೇಳಿ. ಕಚ್ಚಾ ತೈಲ ಬೆಲೆ ಕಡಿಮೆ ಇದ್ದಾಗಲೂ ಪೆಟ್ರೋಲ್, ಡೀಸೆಲ್ ಬೆಲೆ ಮಾತ್ರ ನಿರಂತರವಾಗಿ ಏರಿಕೆ ಮಾಡುತ್ತಲೇ ಇರುವುದು ಭಾರತೀಯರಿಗೆ ಬಿಜೆಪಿ ಬಗೆಯುತ್ತಿರುವ ಮಹಾದ್ರೋಹ. ಭಾರತೀಯರನ್ನು ಸುಳ್ಳುಗಳ ಸರಮಾಲೆಯಲ್ಲಿ ಮುಳುಗಿಸಿ, ಸಮಾಜದಲ್ಲಿ ಬಿರುಕು ಮೂಡಿಸಿ ಬಿಜೆಪಿ ಕಾಲ ಕಳೆಯುತ್ತಿದೆ, ನಿಮಗೆ ತಕ್ಕ ಉತ್ತರ ಕೊಡುವ ಶಕ್ತಿ ನಮಗಿದೆ, ಉತ್ತರ ಕೊಡುತ್ತೇವೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆ ಉಂಟುಮಾಡಬಾರದು

ಕೇಂದ್ರದ ನಿಲುವಿಗೆ ಡಿಸಿಎಂ ಡಿಕೆಶಿ ಆಕ್ಷೇಪ

ಬೆಂಗಳೂರು,ಏ.28(ಕೆಎಂಶಿ)–ಬಿಜೆಪಿ ಹೇಳುವುದೊಂದು ಮಾಡುವುದು ಇನ್ನೊಂದು, ಇದೇ ಅವರ ಮುಖವಾಡ. ರೈಲ್ವೆ ಪರೀಕ್ಷೆಯಲ್ಲಿ ಮಂಗಳಸೂತ್ರ, ಜನಿವಾರ ತೆಗೆಯಲು ಹೇಳಿರುವುದು ಸರಿಯಲ್ಲ ಈ ಆದೇಶ ಹಿಂಪಡೆಯಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒತ್ತಾಯಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧಾರ್ಮಿಕ ಸಂಕೇತಗಳಾಗಿ ಕಿವಿ ಓಲೆ, ಮೂಗುತಿ, ಮಂಗಳಸೂತ್ರ, ಜನಿವಾರ, ಉಡುದಾರ, ಹಣೆಬೊಟ್ಟು ಇವುಗಳನ್ನು ಪರಿಶೀಲಿಸಲಿ, ಆದರೆ, ತೆಗೆಸುವುದು ಸರಿಯಲ್ಲ, ಇಂತಹ ಆದೇಶ ವಿರುದ್ಧ ಜನರೇ ಪ್ರತಿಕ್ರಿಯಿಸಬೇಕು ಎಂದರು.

ಸಣ್ಣ, ಸಣ್ಣ ಉಪಕರಣ ಬಳಸಿ ಪರೀಕ್ಷಾ ಅಕ್ರಮ ಎಸಗಿದ ಉದಾಹರಣೆಗಳಿದ್ದು ಈ ಹಿನ್ನೆಲೆಯಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಹ ಆದೇಶಗಳನ್ನು ಜಾರಿ ಮಾಡಬಾರದು ಎಂದರು. ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಜನಜಾಗೃತಿ ಮೂಡಿಸಿ, ಸಂವಿಧಾನ ರಕ್ಷಣೆಗೆ ಬೆಳಗಾವಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಭಾಗವಹಿಸಲಿದ್ದು, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರದರ್ಶನ ನಡೆಯಲಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕೇಂದ್ರ ಸರ್ಕಾರ ಕಾರಣವಾಗಿದ್ದು, ಇದರ ವಿರುದ್ಧ ಬಿಜೆಪಿ ಪ್ರತಿಭಟನೆ ಮಾಡಬೇಕು, ನಾವು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೆಲೆ ಏರಿಕೆ ನೀತಿ ವಿರುದ್ಧ ಪ್ರತಿಭಟನೆ ನಡೆಸುತ್ತೇವೆ ಎಂದರು.


ಹೆಚ್ಚುವರಿ ಎಸ್‌ಪಿ ವಿರುದ್ಧ ಸಿಎಂ ಗರಂ: ವೇದಿಕೆಯಲ್ಲೇ ಕೈ ಎತ್ತಿದ ಸಿದ್ದರಾಮಯ್ಯ!

ಬೆಳಗಾವಿ: ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ ಆಗಿದ್ದರು. ವೇದಿಕೆ ಮೇಲೆಯೇ ಧಾರವಾಡದ ಹೆಚ್ಚುವರಿ ಎಸ್‌ಪಿ ನಾರಾಯಣ ಭರಮನಿ ಅವರತ್ತ ಸಿಎಂ ಸಿದ್ದರಾಮಯ್ಯ ಕೈ ಎತ್ತಿದ್ದ ವಿಡಿಯೋ ಈಗ ಎಲ್ಲೆಡೆ ವೈರಲ್ ಆಗಿದೆ. ಬೆಲೆ ಏರಿಕೆ ವಿರೋಧಿಸಿ ಇಂದು ಕಾಂಗ್ರೆಸ್ ಪ್ರತಿಭಟನಾ ಸಭೆ ಆಯೋಜಿಸಿತ್ತು. ಸಿಎಂ ಮಾತನಾಡುವಾಗ ಬಿಜೆಪಿಯ ಮಹಿಳಾ ಕಾರ್ಯಕರ್ತೆಯರು ಕಪ್ಪು ಪಟ್ಟಿಯನ್ನು ಧರಿಸಿ ಪ್ರತಿಭಟಿಸಿದರು. ಪಾಕ್ ಜೊತೆ ಯುದ್ಧ ಅನಿವಾರ್ಯವಲ್ಲ ಎಂಬ ಹೇಳಿಕೆಯನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಕಪ್ಪು ಪಟ್ಟಿ ಪ್ರದರ್ಶಿಸಿದ್ದಾರೆ. ಈ ವೇಳೆ ಸಂಯಮ ಕಳೆದುಕೊಂಡ ಸಿಎಂ ಹೆಚ್ಚುವರಿ ಎಸ್‌ಪಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ ಸಮಾವೇಶಕ್ಕೆ ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಆಗಮಿಸಿದ್ದರು. ಬೇರೆ ನಾಯಕರ ಭಾಷಣದವರೆಗೆ ಸುಮ್ಮನೇ ಕುಳಿತಿದ್ದ ಕಾರ್ಯಕರ್ತೆಯರು ಸಿಎಂ ಭಾಷಣ ಮಾಡುವಾಗ ಕಪ್ಪು ಪಟ್ಟಿಯನ್ನು ತೋರಿಸಿ ಪ್ರತಿಭಟಿಸಿದರು. ಇದ್ದಕ್ಕಿದ್ದಂತೆ ತನ್ನ ಮುಂಭಾಗವೇ ಪ್ರತಿಭಟನೆ ನೋಡಿ ಸಿಎಂ ಒಂದು ಕ್ಷಣ ಭಾಷಣ ಮಾಡುವುದನ್ನು ನಿಲ್ಲಿಸಿದರು. ನಿಲ್ಲಿಸಿದ ಬಳಿಕ ಯಾರದು ಎಸ್‌ಪಿ ಎಂದು ಹೇಳಿ ವೇದಿಕೆಗೆ ಬರುವಂತೆ ಹೇಳಿದ್ದಾರೆ. ಹೆಚ್ಚುವರಿ ಎಸ್‌ಪಿ ಬರುತ್ತಿದ್ದಂತೆ ಏನ್ರೀ ಇದು, ಏನು ಮಾಡ್ತಾ ಇದ್ದೀರಿ ಎಂದು ಪ್ರಶ್ನಿಸಿ ಕೈ ಎತ್ತಿ ಸಿಟ್ಟು ಹೊರಹಾಕಿದ್ದಾರೆ. ನಂತರ ಸಚಿವ ಎಂಬಿ ಪಾಟೀಲ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಸಮಾಧಾನಪಡಿಸಿದರು.



ಡಾ.ಕಸ್ತೂರಿ ರಂಗನ್ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ

ಮೈಸೂರು,ಏ.28–ಸುಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿಗಳು ಮತ್ತು ಇಸ್ರೋ ಸಂಸ್ಥೆಯ ವಿಶ್ರಾಂತ ಅಧ್ಯಕ್ಷರಾಗಿದ್ದ ಡಾ. ಕಸ್ತೂರಿ ರಂಗನ್ ನಿಧನಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅತೀವ ಸಂತಾಪ ಸೂಚಿಸಿದ್ದಾರೆ.



ಡಾ.ಕಸ್ತೂರಿ ರಂಗನ್

ಡಾ.ಕಸ್ತೂರಿ ರಂಗನ್ ಅವರು ಜಾಗತಿಕ ಮಟ್ಟದಲ್ಲಿ ಅತ್ಯಂತ ಮಾನ್ಯರಾಗಿದ್ದ ಹಿರಿಯ ವಿಜ್ಞಾನಿಗಳು. ಅವರು ಯೋಜನಾ ಆಯೋಗದಲ್ಲಿ ಸೇವೆ ಸಲ್ಲಿಸಿದ್ದರು. ರಾಜ್ಯಸಭೆಯ ಸದಸ್ಯರಾಗಿದ್ದರು. ಅವರ ಕಾಲದಲ್ಲಿ ಇಸ್ರೋ ಇಡೀ ಜಗತ್ತೇ ಗಮನಿಸುವಂಥ ಗಮನಾರ್ಹ ಸಾಧನೆಗಳನ್ನು ಮಾಡಿತ್ತು. ಜೊತೆಗೆ ರಾಷ್ಟ್ರೀಯ ಶಿಕ್ಷಣ ನೀತಿಯ ನಿರೂಪಣೆ ಮತ್ತು ಅನುಷ್ಠಾನಗಳಿಗೆ ಗಮನಾರ್ಹ ಕೊಡುಗೆ ನೀಡಿದ್ದರು. ವಿಜ್ಞಾನಿಗಳು, ಶಿಕ್ಷಣ ತಜ್ಞರು, ಪರಿಸರ ತಜ್ಞರು–ಹೀಗೆ ಹಲವಾರು ಕ್ಷೇತ್ರಗಳಲ್ಲಿ ಏಕಪ್ರಕಾರವಾದ ಪ್ರತಿಭೆಯನ್ನು ಹೊಂದಿದ್ದರು. ಉದಾತ್ತ ಮಾನವತಾವಾದಿಗಳು, ಸಂವೇದನಾಶೀಲರು. ಜವಾಹರಲಾಲ್ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ, ಕರ್ನಾಟಕ ಜ್ಞಾನ ಆಯೋಗದ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅಪಾರ. ಅವರ ಬಹುಮುಖ ಸಾಧನೆಗಳನ್ನು ಗುರುತಿಸಿ ಕೇಂದ್ರ ಸರ್ಕಾರವು ಪದ್ಮವಿಭೂಷಣ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಅವರ ಅಗಲಿಕೆಯಿಂದ ಹಳೆಯ ತಲೆಮಾರಿನ ವಿದ್ವತ್ತು, ಮೌಲ್ಯಗಳ ಒಂದು ಕೊಂಡಿ ಕಳಚಿದಂತಾಗಿದೆ. ಡಾ ಕಸ್ತೂರಿ ರಂಗನ್ ಅವರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರು ಮತ್ತು ಅಭಿಮಾನಿಗಳಿಗೆ ಈ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಶ್ರೀಗಳು ಹಾರೈಸಿದ್ದಾರೆ.

ಉಸಿರು ಕಟ್ಟಿಸಿ ಪತ್ನಿ ಹತ್ಯೆಗೈದ ಆರೋಪಿಗೆ ಜೀವಾವಧಿ ಶಿಕ್ಷೆ

ಮೈಸೂರು, ಏ.28(ಆರ್‌ಕೆ)– ನಡತೆಯ ಬಗ್ಗೆ ಅನುಮಾನ ಪಟ್ಟು, ಪತ್ನಿ ಹತ್ಯೆಗೈದಿದ್ದ ಆರೋಪಿಗೆ ಮೈಸೂರು ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ, ತೀರ್ಪು ನೀಡಿದೆ.



ಪಿರಿಯಾಪಟ್ಟಣ ತಾಲೂಕು, ಬೂದಿತಿಟ್ಟು ಗ್ರಾಮದ ಚೆಲುವಮ್ಮ ಎಂಬುವರ ಬ್ಯಾರನ್ ಮನೆಯಲ್ಲಿ ವಾಸವಿದ್ದ ಸ್ವಾಮಿನಾಯಕ ಶಿಕ್ಷೆಗೆ ಗುರಿಯಾದವನು. ಏಳು ವರ್ಷಗಳ ಹಿಂದೆ ಅಬ್ಬಳತಿ ಗ್ರಾಮದ ಮಹದೇವಿ ಅವರ ಮಗಳಾದ ಸೌಮ್ಯಳನ್ನು ಪ್ರೀತಿಸಿ ಮದುವೆಯಾಗಿದ್ದ. ಕೆಲ ತಿಂಗಳ ನಂತರ ಆಕೆಯ ನಡತೆಯ ಬಗ್ಗೆ ಅನುಮಾನಪಟ್ಟು ಆಗಿಂದಾಗ್ಗೆ ಜಗಳ ಮಾಡುತ್ತಿದ್ದ.

2022ರ ಮೇ 8ರಂದು ರಾತ್ರಿ ಮಹದೇವಿ ಅವರು ಸೌಮ್ಯ ಮನೆಗೆ ಬಂದಿದ್ದಾಗ ಆರೋಪಿ ಪತ್ನಿ ಜೊತೆ ಮತ್ತೆ ಜಗಳವಾಡಿದ. ಅಳಿಯನಿಗೆ ಬುದ್ಧಿವಾದ ಹೇಳಿ ಮರುದಿನ ಮೇ 9ರಂದು ಬೆಳಗ್ಗೆ ಅವರು ಹೊರಟು ಹೋದರು. ಅದೇ ದಿನ ಮಧ್ಯಾಹ್ನ 12 ಗಂಟೆ ವೇಳೆಗೆ ಸ್ವಾಮಿನಾಯಕ ಪತ್ನಿ ಸೌಮ್ಯಳ ಮೇಲೆ ಹಲ್ಲೆ ನಡೆಸಿ, ತಲೆದಿಂಬಿನಿಂದ ಮುಖ ಅದುಮಿ ಉಸಿರು ಕಟ್ಟಿಸಿ ಕೊಲೆ ಮಾಡಿದ್ದ.

ಪಿರಿಯಾಪಟ್ಟಣ ಠಾಣೆ ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಜಗದೀಶ್ ಅವರು ಕೊಲೆ ಪ್ರಕರಣ ದಾಖಲಿಸಿ ಸ್ವಾಮಿನಾಯಕನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗುರುರಾಜ ಸೋಮಕ್ಕಳವರ್, ವಾದ–ಪ್ರತಿವಾದ ಆಲಿಸಿದ ಬಳಿಕ ಕೊಲೆ ಮಾಡಿರುವುದು ಸಾಕ್ಷ್ಯಾಧಾರಗಳಿಂದ ದೃಢಪಟ್ಟ ಹಿನ್ನೆಲೆಯಲ್ಲಿ ಆರೋಪಿಗೆ ಜೀವಾವಧಿ ಶಿಕ್ಷೆ ಮತ್ತು 5000 ರೂ. ದಂಡ ವಿಧಿಸಿ, ಏಪ್ರಿಲ್ 23ರಂದು ತೀರ್ಪು ನೀಡಿದ್ದಾರೆ.

ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಇ.ಯೋಗೇಶ್ವರ್ ವಾದ ಮಂಡಿಸಿದ್ದರು.

ಕಾಶ್ಮೀರದಲ್ಲಿ ಪ್ರವಾಸಿಗರ ಹತ್ಯೆಗೆ ಖಂಡನೆ



ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಲ್ಲಿ ಮಣಿದವರಿಗೆ ಚಾಮುಂಡಿಪುರಂನ ಅಂದಾನಿ ಸರ್ಕಲ್‌ನಲ್ಲಿ ಮೇಣದ ಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಏ. 28– ಅಖಿಲ ಭಾರತ ಅಸಂಘಟಿತ ಪುರೋಹಿತ ಕಾರ್ಮಿಕರ ಫೆಡರೇಶನ್ ವತಿಯಿಂದ ಪಹಲ್ಗಾಮ್ ಕಣಿವೆಯಲ್ಲಿ ಉಗ್ರರ ದಾಳಿಯಲ್ಲಿ ಪ್ರಾಣ ಕಳೆದುಕೊಂಡವರಿಗೆ ಚಾಮುಂಡಿಪುರಂನ ಅಂದಾನಿ ಸರ್ಕಲ್‌ನಲ್ಲಿ ಮೇಣದ ಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮ್‌ಪ್ರಸಾದ್, ಸಂಸ್ಥೆಯ ಗೌರವ ಅಧ್ಯಕ್ಷ ಲಕ್ಷ್ಮೀಶ, ಅಧ್ಯಕ್ಷ ಸಂತೋಷ್‌ಕುಮಾರ್, ಉಪಾಧ್ಯಕ್ಷ ಗಣೇಶ್, ಕಾರ್ಯದರ್ಶಿ ರವಿಶಂಕರ್, ಖಜಾಂಚಿ ಮನೋಹರ್, ನಿರ್ದೇಶಕರಾದ ರಾಜಣ್ಣ ವಿಜಯ ವಿಠಲಾಚಾರ್ಯ, ಗುರುರಾಜ್, ಶರ್ವಾ, ಪ್ರಸನ್ನಕುಮಾರ್, ವೇಣುಗೋಪಾಲ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಗಾಂಧಿನಗರದ ದಿ ಮೈಸೂರು ಸಿಟಿ ಗಾಂಧಿನಗರ ಅಭಿವೃದ್ಧಿ ಸಂಘ ಆಡಳಿತ ಮಂಡಳಿ ವಿರುದ್ಧ ಗಾಂಧಿನಗರದ ವಿವಿಧ ಸಂಘ–ಸಂಸ್ಥೆ ಮುಖಂಡರು, ಯುವಕರು ನಾನಾ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಪ್ರತಿಭಟಿಸಿದರು. ಚಿತ್ರದಲ್ಲಿ ಅಧ್ಯಕ್ಷರಾದ ಯೋಗನರಸಿಂಹ, ಸಿದ್ದರಾಜು, ನಾಗಣ್ಣ, ದೇವೇಂದ್ರಣ್ಣ, ಕಿರಣ್‌ಕುಮಾರ್, ಎಂ.ಚೇತನ್‌ಕಾಂತರಾಜು, ಚರಣ್, ಹರೀಶ್ ಇತರರು ಇದ್ದಾರೆ.

ಒಕ್ಕಲಿಗ ವುಮೆನ್ಸ್ ವೆಲ್‌ಫೇರ್ ಟ್ರಸ್ಟ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಒಕ್ಕಲಿಗ ವುಮೆನ್ಸ್ ವೆಲ್‌ಫೇರ್ ಟ್ರಸ್ಟ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಕಲ್ಯಾಣಿ ಹೋಟೆಲ್‌ನಲ್ಲಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾಗ್ಯ ಮಾದೇಶ್, ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಪದ್ಮಜ ಶ್ರೀನಿವಾಸ್, ಶ್ರೀಮತಿ ವಿಜಯಾ ಮಂಜುನಾಥ, ಶ್ರೀಮತಿ ವಸಂತ ಮುನೀಶ್, ಶ್ರೀಮತಿ ಶೋಭಾ ಮಂಜುನಾಥ್ ಉಪಸ್ಥಿತರಿದ್ದರು. ಈ ವೇಳೆ ನವದುರ್ಗಿ ನೃತ್ಯ, ಕಂಸಾಳೆ, ಜನಪದ ಗೀತೆ, ಭಕ್ತಿಗೀತೆ, ಪಾಶ್ಚಿಮಾತ್ಯ ನೃತ್ಯಗಳಂತಹ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಟ್ರಸ್ಟ್‌ನ ನಿರ್ದೇಶಕರಾದ ಶ್ರೀಮತಿ ನಳಿನ, ಶ್ರೀಮತಿ ಭವ್ಯ, ಶ್ರೀಮತಿ ಯಶೋಧ, ಶ್ರೀಮತಿ ನವೀನ, ಶ್ರೀಮತಿ ವನಿತ, ಶ್ರೀಮತಿ ಸುನಿತ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ನೃತ್ಯೋತ್ಸವ

ಮೈಸೂರು,ಏ.28– ಸಂಗೀತ ನಾಟಕ ಅಕಾಡೆಮಿ, ನವದೆಹಲಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸ್ವಾಯತ್ತ ಸಂಸ್ಥೆ ಸಹಯೋಗದಲ್ಲಿ ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಎಸ್.ಎನ್.ಎ ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರ ಸಂಗೀತ ಮತ್ತು ನೃತ್ಯೋತ್ಸವವನ್ನು ಏ.29ರಿಂದ ಮೇ 3ರವರೆಗೆ ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಗೆ ಹಾಗೂ ಸಂಜೆ 4ರಿಂದ ರಾತ್ರಿ 8 ಗಂಟೆವರೆಗೆ ವಿಜ್ಞಾನ ಭವನ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಂಸದ ಯದುವೀರ್ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆ ವಹಿಸಲಿದ್ದಾರೆ.

ಡಾ.ರಾಜ್‌ಕುಮಾರ್ ನಡೆ–ನುಡಿ, ಸರಳತೆ ಇಂದಿನ ಪೀಳಿಗೆಗೆ ಆದರ್ಶ

ಡಾ.ರಾಜ್‌ಕುಮಾರ್ ನೆನಪಿನೋತ್ಸವ, ಗೀತಾ ಗಾಯನ ಕಾರ್ಯಕ್ರಮದಲ್ಲಿ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಅಭಿಮತ

ಮೈಸೂರು,ಏ.28(ಎಸ್‌ಪಿಎನ್)–ವರನಟ ಡಾ.ರಾಜ್‌ಕುಮಾರ್ ಅವರ ನಡೆ, ನುಡಿ, ಜೀವನದ ಸರಳತೆ ಇಂದಿನ ಪೀಳಿಗೆಗೆ ಆದರ್ಶ ಎಂದು ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದ ಜಿಲ್ಲಾ ಕಸಾಪ ಭವನದಲ್ಲಿ ಉತ್ತಿಷ್ಠ ಭಾರತ ಪ್ರತಿಷ್ಠಾನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಡಾ.ರಾಜ್‌ಕುಮಾರ್ ನೆನಪಿನೋತ್ಸವ, ಗೀತಾಗಾಯನ ಹಾಗೂ ಡಾ.ರಾಜ್‌ಕುಮಾರ್ ಸದ್ಭಾವನಾ ಪ್ರಶಸ್ತಿ–2025ರ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.



ವಿವಿಧ ಕ್ಷೇತ್ರ ಸಾಧಕರಿಗೆ ಡಾ.ರಾಜ್‌ಕುಮಾರ್ ಸದ್ಭಾವನಾ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಡಾ.ರಾಜ್‌ಕುಮಾರ್ ನಮ್ಮೂರಿನ ಅಳಿಯ. ನಮ್ಮ ತಾಯಿಯ ಒಡನಾಡಿಯಾಗಿದ್ದರು. ಅವರ ಕುಟುಂಬದವರು ನಮಗೆ ಆತ್ಮೀಯರಾಗಿದ್ದರು. ಅವರ ಹೆಸರಿನಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಪ್ರಶಸ್ತಿ ಕೊಡುವಾಗ ಅವರ ಬದುಕಿನ ರೀತಿಯನ್ನು ಅನುಸರಿಸಿದ ಸಾಧಕರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಿದರೆ ಉತ್ತಮ ಎಂದು ಆಯೋಜಕರಿಗೆ ಸಲಹೆ ನೀಡಿದರು.

ಸಿನಿಮಾ ಕ್ಷೇತ್ರದಲ್ಲಿ ಅಭಿನಯ ಮತ್ತು ಗಾಯನ ಕ್ಷೇತ್ರದ ಎರಡರಲ್ಲೂ ಅಮೋಘ ಸಾಧನೆ ಮಾಡಿ, ರಾಷ್ಟ್ರೀಯ ಪ್ರಶಸ್ತಿ ಪಡೆದ ಏಕೈಕ ನಟ ಡಾ.ರಾಜ್‌ಕುಮಾರ್. ಇವರು ನಟಿಸಿದ ಎಷ್ಟೋ ಚಿತ್ರದಿಂದ ಪ್ರೇರೇಪಿತರಾದ ಜನ ಅವರನ್ನು ಅನುಸರಿಸಿ ಸಮಾಜ ಸೇವೆಗೆ ಮುಂದಾಗಿರುವುದು ವಿಶೇಷ. ಅವರು ನಟನಾಗಿ ಮಾತ್ರವಲ್ಲದೇ ಒಬ್ಬ ಆದರ್ಶ ವ್ಯಕ್ತಿಯಾಗಿಯೂ ಕಾಣುತ್ತಾರೆ. ರಾಜಕುಮಾರ್ ಅವರು ಸಿನಿಮಾ ಕ್ಷೇತ್ರದ ಮೂಲಕ ಕನ್ನಡ ನಾಡು ನುಡಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರು ಹೆಚ್ಚಾಗಿ ಭಾಷೆ, ನೆಲ–ಜಲ ಹಾಗೂ ತಾವು ಅಭಿನಯಿಸಿದ ಚಿತ್ರಗಳಿಗೂ ಹೆಚ್ಚಿನ ಗಮನ ಕೊಡುತ್ತಿದ್ದರು ಎಂದು ತಿಳಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಡಾ.ರಾಜ್‌ಕುಮಾರ್ ಕನ್ನಡ ಚಿತ್ರರಂಗದ ಮೇರು ಪರ್ವತ. ಅವರ ಕಾಲಘಟ್ಟದಲ್ಲಿ ಸಿನಿಮಾ ಕ್ಷೇತ್ರದ ದೇಶದ ಇತರೆ ಭಾಷೆಗಳ ಸಿನಿಮಾಗಿಂತ ಕನ್ನಡ ಹೆಚ್ಚು ಜನಪ್ರಿಯವಾಗಿತ್ತು. ಆದರೆ ಪ್ರಸ್ತುತ ಕನ್ನಡ ಚಿತ್ರರಂಗ ಅನೇಕ ಸವಾಲಿನ ನಡುವೆಯೂ ಸಿನಿಮಾ ಕ್ಷೇತ್ರ ಜನಸಾಮಾನ್ಯರ ಬದುಕಿಗೆ ಅತ್ಯಂತ ಹತ್ತಿರವಾಗಿದೆ. ಜನಸಾಮಾನ್ಯರು ವರನಟ ಡಾ.ರಾಜ್‌ಕುಮಾರ್ ಅವರ ಚಿತ್ರಗಳನ್ನು ಜಾತಿ–ಭೇದ, ಧರ್ಮಾಧಾರಿತವಾಗಿ ಯಾರು ನೋಡುತ್ತಿರಲಿಲ್ಲ. ಬದಲಾಗಿ ಕುಟುಂಬದ ಸಮೇತ ಎಲ್ಲರೂ ಸೇರಿ ಖುಷಿಯಿಂದ ಸಿನಿಮಾ ನೋಡುತ್ತಿದ್ದರು ಎಂದರು.

ಸದ್ಭಾವನ ಪ್ರಶಸ್ತಿ ಪ್ರದಾನ: ಹಿರಿಯ ಸಾಹಿತಿ ಡಾ ಕೆ.ಲೀಲಾಪ್ರಕಾಶ್(ಸಾಹಿತ್ಯ), ದೇವರಾಜು(ಯೋಗ), ಎನ್.ಶ್ರೀಧರ್ ದೀಕ್ಷಿತ್(ಸಮಾಜ ಸೇವೆ), ನಾಗಮ್ಮ(ಕಾವ್ಯ), ಕೃಷ್ಣಮೂರ್ತಿ(ಆಡಳಿತ) ಅವರಿಗೆ ಡಾ.ರಾಜ್‌ಕುಮಾರ್ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಯೂನಿವರ್ಸಲ್ ಅಕಾಡೆಮಿ ಸಂಸ್ಥಾಪಕ ಪ್ರಕಾಶ್ ಎಸ್.ಹಳ್ಳಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಯೋಗಾಚಾರ್ಯ ಎಸ್.ವಿ. ವೆಂಕಟೇಶಯ್ಯ, ಉತ್ತಿಷ್ಠ ಭಾರತ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವಿ.ನಾಗೇಂದ್ರಬಾಬು, ಟಿ.ಎಸ್.ಅರುಣ್, ಸಂಚಾಲಕ ಅರುಣ್ ಹೇಮಂತ್, ಉಪಾಧ್ಯಕ್ಷ ಎನ್.ಅನಂತ್ ಸೇರಿದಂತೆ ಇತರರಿದ್ದರು. ಈ ವೇಳೆ 40ಕ್ಕೂ ಹೆಚ್ಚು ಗಾಯಕರಿಂದ ಡಾ.ರಾಜ್ ಅಭಿನಯದ ಹಾಗೂ ಹಾಡಿರುವ ಗೀತೆಗಳನ್ನು ಹಾಡಿ ಪ್ರೇಕ್ಷಕರ ಮನಗೆದ್ದರು.

ದೇಶ – ವಿದೇಶ

ಪಾಕ್‌ನಲ್ಲಿ ಬಾಂಬ್ ಸ್ಫೋಟ: ಏಳು ಮಂದಿ ಸಾವು



ಪೇಶಾವರ: ಪಾಕಿಸ್ತಾನದ ಪ್ರಕ್ಷುಬ್ಧ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಸೋಮವಾರ ನಡೆದ ಪ್ರಬಲ ಬಾಂಬ್ ಸ್ಫೋಟದಲ್ಲಿ ಕನಿಷ್ಠ ಏಳು ಜನ ಸಾವನ್ನಪ್ಪಿದ್ದಾರೆ ಮತ್ತು 9 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದಕ್ಷಿಣ ವಜೀರಿಸ್ತಾನ್ ಜಿಲ್ಲೆಯ ಪ್ರಧಾನ ಕಚೇರಿಯಾದ ವಾನಾದಲ್ಲಿರುವ ಸ್ಥಳೀಯ ಶಾಂತಿ ಸಮಿತಿ ಕಚೇರಿಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಫೋಟದ ನಂತರ 16 ಗಾಯಾಳುಗಳನ್ನು ಆಸ್ಪತ್ರೆಗೆ ತರಲಾಯಿತು. ಅವರಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಆಡಳಿತ ತಿಳಿಸಿದೆ.

ಸ್ಫೋಟವು ಎಷ್ಟು ತೀವ್ರವಾಗಿತ್ತು ಎಂದರೆ, ಶಾಂತಿ ಸಮಿತಿಯ ಕಚೇರಿಯ ಕಟ್ಟಡ ಸಂಪೂರ್ಣ ಧ್ವಂಸಗೊಂಡಿದೆ ಮತ್ತು ಹಲವಾರು ಜನ ಕಟ್ಟಡದ ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಹಿತಿ ಪಡೆದ ನಂತರ ರಕ್ಷಣಾ ತಂಡಗಳು ಮತ್ತು ಸ್ಥಳೀಯ ಪೊಲೀಸರು ಸ್ಥಳಕ್ಕೆ ತೆರಳಿ ಗಾಯಾಳುಗಳನ್ನು ಅವಶೇಷಗಳಿಂದ ಹೊರತೆಗೆಯುವ ಕಾರ್ಯಾಚರಣೆ ಪ್ರಾರಂಭಿಸಿದರು.

ಈಗ ರಾಜ್ಯದ ಸ್ಥಾನಮಾನ ಕೇಳಿದರೆ ನನಗೆ ಶಾಪ ತಟ್ಟುತ್ತದೆ

ಶ್ರೀನಗರ: ಪಹಲ್ಗಾಮ್ ಭಯೋತ್ಪಾದಕ ದಾಳಿಯ ಲಾಭ ಪಡೆದು ಕೇಂದ್ರಾಡಳಿತ ಪ್ರದೇಶಕ್ಕೆ ರಾಜ್ಯದ ಸ್ಥಾನಮಾನವನ್ನು ಪುನಃಸ್ಥಾಪಿಸಲು ಒತ್ತಾಯಿಸುವುದಿಲ್ಲ ಎಂದು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದ್ದಾರೆ. ಇಂದು ವಿಧಾನ ಸಭೆಯಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿ ಖಂಡಿಸಿ ಅಂಗೀಕರಿಸಲಾದ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಒಮರ್ ಅಬ್ದುಲ್ಲಾ ಅವರು, ಜಮ್ಮು–ಕಾಶ್ಮೀರದಲ್ಲಿನ ಭದ್ರತೆಯು ಕೇಂದ್ರಾಡಳಿತ ಪ್ರದೇಶದ ಚುನಾಯಿತ ಸರ್ಕಾರದ ಜವಾಬ್ದಾರಿಯಲ್ಲ. ಆದರೆ ನಾನು ಈ ಸಂದರ್ಭವನ್ನು ರಾಜ್ಯದ ಸ್ಥಾನಮಾನ ಪಡೆಯಲು ಬಳಸುವುದಿಲ್ಲ. ನಾನು ಈಗ ರಾಜ್ಯದ ಸ್ಥಾನಮಾನಕ್ಕಾಗಿ ಹೇಗೆ ಒತ್ತಾಯಿಸಬಹುದು. ನನಗೆ ಕೀಳು ರಾಜಕೀಯದಲ್ಲಿ ನಂಬಿಕೆಯಿಲ್ಲ. ಕಳೆದುಹೋದ 26 ಜೀವಗಳಿಗೆ ನಾನು ಯಾವುದೇ ಬೆಲೆ ಕಟ್ಟಲು ಸಾಧ್ಯವಿಲ್ಲ. ಈಗ ರಾಜ್ಯದ ಸ್ಥಾನಮಾನಕ್ಕಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೇ ಎಂದು ಪ್ರಶ್ನಿಸಿದರು. ಜಮ್ಮು– ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ಸೋಲಿಸಲು ರಾಜ್ಯದ ಸ್ಥಾನಮಾನ ಮರುಸ್ಥಾಪನೆಗೆ ಒತ್ತಾಯಿಸಿದ ಸದನದ ಕೆಲವು ಸದಸ್ಯರನ್ನು ಉಲ್ಲೇಖಿಸಿ ಸಿಎಂ ಈ ಹೇಳಿಕೆ ನೀಡಿದರು.



'ಅಲ್ಲಿಗೆ ಹೋಗುವುದಕ್ಕಿಂತ ಇಲ್ಲಿಯೇ ಸಾಯುತ್ತೇವೆ'!

ಕಾಶ್ಮೀರ: ಪಹಲ್ಗಾಮ್ ಉಗ್ರರ ದಾಳಿ ನಂತರ ಪಾಕ್ ಪ್ರಜೆಗಳು ದೇಶ ತೊರೆಯುವಂತೆ ಸರ್ಕಾರ ಆದೇಶ ಮಾಡಿದ್ದು, ದಶಕಗಳಿಂದಲೂ ಇಲ್ಲಿಯೇ ವಾಸಿಸುತ್ತಿರುವವರು ದೇಶ ಬಿಟ್ಟು ಹೋಗಲು ನಿರಾಕರಿಸುತ್ತಿದ್ದಾರೆ. ತಮ್ಮ ಮೂಲ ದೇಶಕ್ಕೆ ಮರಳುವುದಕ್ಕಿಂತ ಇಲ್ಲಿಯೇ ಸಾಯುತ್ತೇವೆ ಎಂದು ಕಾಶ್ಮೀರದಲ್ಲಿ ಪುನರ್ವಸತಿ ಪಡೆದಿರುವ ಮಾಜಿ ಉಗ್ರರ ಪಾಕಿಸ್ತಾನಿ ಪತ್ನಿಯರು ಹೇಳಿದ್ದಾರೆ. ಮಾಜಿ ಉಗ್ರರಿಗಾಗಿ 2010ರ ಪುನರ್ವಸತಿ ನೀತಿಯಡಿಯಲ್ಲಿ ಕಾಶ್ಮೀರಕ್ಕೆ ಬಂದಿದ್ದ ಪಾಕಿಸ್ತಾನಿ ಮಹಿಳೆಯರು, ತಮ್ಮನ್ನು ಇಲ್ಲಿಯೇ ಉಳಿಯಲು ಬಿಡಿ ಅಥವಾ ನಮ್ಮ ಶವವನ್ನು ಕಳುಹಿಸಿ ಎಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಪಾಕಿಸ್ತಾನಿ ಮಹಿಳೆ ಜಾಹಿದಾ ಬೇಗಂ, ಕಾಶ್ಮೀರದಲ್ಲಿ ಶಾಂತಿಯಿಂದ ಬದುಕಲು ಬಯಸುವುದಾಗಿ ಹೇಳಿದರು. ದೇಶ ತೊರೆಯಲು ಪೊಲೀಸರು ನನಗೆ ಹೇಳಿದ್ದಾರೆ. ನಾನು ಹಿಂತಿರುಗಲು ಇಷ್ಟವಿಲ್ಲ. ನನಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ, ನನ್ನ ಮಗನಿಗೆ 10 ವರ್ಷ. ಆತನನ್ನು ಇಲ್ಲಿಯೇ ಇರಿಸಲು ನನಗೆ ಹೇಳುತ್ತಿದ್ದಾರೆ. ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ಇಲ್ಲಿಯೇ ವಾಸಿಸಲು ಬಯಸುತ್ತೇನೆ ಎಂದು ಅವರು ಹೇಳಿದರು.

ಭಾರತ–ಫ್ರಾನ್ಸ್ 63,000 ಕೋಟಿಯ 26 'ರಾಫೆಲ್ ಎಂ' ಜೆಟ್ ಒಪ್ಪಂದ

ನವದೆಹಲಿ: ಭಾರತ ಸೋಮವಾರ ಫ್ರಾನ್ಸ್‌ನಿಂದ 26 ರಫೇಲ್ ಎಂ ಫೈಟರ್ ಜೆಟ್‌ಗಳನ್ನು–ಸಮುದ್ರದಿಂದ ಉಡಾವಣೆ ಮಾಡಬಹುದಾದ ಫೈಟರ್ ಜೆಟ್‌ಗಳನ್ನು ಖರೀದಿಸಲು 63,000 ಕೋಟಿ ರೂ.ಗಳ ಒಪ್ಪಂದಕ್ಕೆ ಸಹಿ ಹಾಕಿದೆ. 22 ಸಿಂಗಲ್–ಸೀಟರ್ ಜೆಟ್‌ಗಳು ಮತ್ತು ತರಬೇತುದಾರರಿಗೆ ಆಸನವಿರುವ ನಾಲ್ಕು ಅವಳಿ–ಆಸನಗಳಿರುವ ಜೆಟ್‌ಗಳಿಗೆ ಒಪ್ಪಂದ ನಡೆದಿದ್ದು, 2031ರ ವೇಳೆಗೆ ವಿತರಣೆಗಳು ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಒಪ್ಪಂದ ಫ್ಲೀಟ್ ನಿರ್ವಹಣೆ, ಲಾಜಿಸ್ಟಿಕಲ್ ಬೆಂಬಲ ಮತ್ತು ಸಿಬ್ಬಂದಿ ತರಬೇತಿ ಮತ್ತು 'ಆತ್ಮನಿರ್ಭರ ಭಾರತ' ಉಪಕ್ರಮಕ್ಕೆ ಮಹತ್ವದ ಕ್ಷಣದಲ್ಲಿ, ಆಫ್‌ಸೆಟ್ ಬಾಧ್ಯತೆಗಳ ಅಡಿಯಲ್ಲಿ ಘಟಕಗಳ ಸ್ಥಳೀಯ ತಯಾರಿಕೆಯನ್ನು ಸಹ ಒಳಗೊಂಡಿದೆ. ರಫೇಲ್ ಎಂ ಅನ್ನು ವಿಶ್ವದ ಅತ್ಯಂತ ಮುಂದುವರಿದ ನೌಕಾ ಯುದ್ಧ ಜೆಟ್‌ಗಳಲ್ಲಿ ಒಂದೆಂದು ವ್ಯಾಪಕವಾಗಿ ಪರಿಗಣಿಸಲಾಗಿದೆ. ಪ್ರಸ್ತುತ ಫ್ರೆಂಚ್ ನೌಕಾಪಡೆ ಮಾತ್ರ ಈ ಜೆಟ್ ಅನ್ನು ಹೊಂದಿದೆ.



ಪಾಕ್‌ನ 15 ಯೂಟ್ಯೂಬ್ ಚಾನೆಲ್ ಬ್ಯಾನ್

ನವದೆಹಲಿ: ಪಹಲ್ಗಾಮ್ ಉಗ್ರರ ದಾಳಿ ಘಟನೆ ಬೆನ್ನಲ್ಲೇ ಭಾರತ ಹಾಗೂ ಪಾಕಿಸ್ತಾನದ ನಡುವಿನ ಸಂಬಂಧ ಮತ್ತಷ್ಟು ಹಳಸಿದ್ದು, ಇದರ ನಡುವಲ್ಲೇ ಭಾರತದ ವಿರುದ್ಧವಾಗಿ ದ್ವೇಷ ಹಾಗೂ ನಕಲಿ ಸುದ್ದಿ ಪ್ರಸಾರ ಮಾಡುತ್ತಿರುವ ಪಾಕಿಸ್ತಾನದ 17 ಯೂಟ್ಯೂಬ್ ಚಾನೆಲ್‌ಗಳನ್ನು ಕೇಂದ್ರ ಸರ್ಕಾರ ನಿಷೇಧ ಮಾಡಿದೆ. ಕೋಮು ಉದ್ವಿಗ್ನತೆಯನ್ನು ಪ್ರಚೋದಿಸುವ, ಭಾರತದ ಸಾರ್ವಭೌಮತ್ವ ಮತ್ತು ಭದ್ರತೆ ದುರ್ಬಲಗೊಳಿಸುವ ಗುರಿಯನ್ನು ಹೊಂದಿರುವ ಪ್ರಚೋದನಕಾರಿ, ಸುಳ್ಳು ಸುದ್ದಿಗಳನ್ನು ಹರಡಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ, ಪಾಕಿಸ್ತಾನದ ಪ್ರಮುಖ ಸುದ್ದಿ ಸಂಸ್ಥೆಗಳು ಮತ್ತು ಮಾಜಿ ಕ್ರಿಕೆಟಿಗ ಶೋಯೆಬ್ ಅಖ್ತರ್ ಸೇರಿದಂತೆ 16 ಪಾಕಿಸ್ತಾನಿ ಯೂಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸಿದೆ. ದಿ ಪಾಕಿಸ್ತಾನ್ ರೆಫರೆನ್ಸ್, ಸಮಾ ಸ್ಪೋರ್ಟ್ಸ್, ಉಜೈರ್ ಕ್ರಿಕೆಟ್. ರಾಜಿ ನಾಮಾ, ಡಾನ್ ನ್ಯೂಸ್, ಸಮಾ ಟಿವಿ, ಎಆರ್‌ವೈ ನ್ಯೂಸ್, ಬೋಲ್ ನ್ಯೂಸ್, ಜಿಯೋ ನ್ಯೂಸ್, ರಫ್ತಾರ್ ಮತ್ತು ಸುನೋ ನ್ಯೂಸ್ ನಂತಹ ಪ್ರಮುಖ ಪಾಕಿಸ್ತಾನಿ ಸುದ್ದಿವಾಹಿನಿಗಳನ್ನು ನಿಷೇಧಿಸಲಾಗಿದೆ ಎಂದು ತಿಳಿದುಬಂದಿದೆ. ಇರ್ಷಾದ್ ಭಟ್ಟಿ, ಅಸ್ಮಾ ಶಿರಾಜಿ, ಉಮರ್ ಚೀಮಾ ಮತ್ತು ಮುನೀಬ್ ಫಾರೂಕ್‌ನಂತಹ ಪತ್ರಕರ್ತರು ನಿರ್ವಹಿಸುವ ಯೂಟ್ಯೂಬ್ ಚಾನೆಲ್‌ಗಳನ್ನೂ ಸಹ ಭಾರತೀಯ ಬಳಕೆದಾರರಿಗೆ ನಿರ್ಬಂಧಿಸಲಾಗಿದೆ.



ದಿನಗೂಲಿ ನೌಕರರಿಂದ ಶಾಸಕ ಪೊನ್ನಣ್ಣರಿಗೆ ಮನವಿ

ವಿರಾಜಪೇಟೆ, ಏ.28–ಅರಣ್ಯ ಇಲಾಖೆಯ ವನ್ಯಜೀವಿ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಅದೇ ಹೆಸರಿನಲ್ಲಿಯೇ ಮುಂದುವರಿಸುವಂತೆ ಆಗ್ರಹಿಸಿ ವಿವಿಧ ಜಿಲ್ಲೆಗಳ ನೌಕರರು ಮುಖಂಡರು ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣರಿಗೆ ಮನವಿ ಸಲ್ಲಿಸಿದರು.

ರಾಜ್ಯ ವನ್ಯಜೀವಿ ವಿಭಾಗದ ಅಧ್ಯಕ್ಷ ಮೇರಿಯಂಡ ಸಂಕೇತ್ ಪೂವಯ್ಯ ಮಾತನಾಡಿ ರಾಜ್ಯದ ಅರಣ್ಯ ಇಲಾಖೆಯ ಒಟ್ಟು 33 ವನ್ಯಜೀವಿ ಘಟಕಗಳು ಮತ್ತು 5 ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆಯ ನೌಕರರು ಮತ್ತು ಆನೆ ಕಾರ್ಯಚರಣೆ, ಹುಲಿಕಾರ್ಯಾಚರಣೆ, ಪ್ರಾಣಿ ಹತ್ಯೆ ತಡೆ ಶಿಬಿರ, ಗಡಿ ಪ್ರದೇಶಗಳಲ್ಲಿ ಹತ್ತು ವರ್ಷಗಳಿಂದ ನಿರಂತರ ಕರ್ತವ್ಯದಲ್ಲಿ ತೊಡಗಿಸಿಕೊಂಡಿರುವ ಹಂಗಾಮಿ ನೌಕರರ ಸಮಸ್ಯೆಗಳ ಬಗೆಹರಿಸಿ ನೌಕರರ ಹೊಸ ನೇಮಕಾತಿ ಮಾಡಬೇಕೆಂದು ಶಾಸಕ ಪೊನ್ನಣ್ಣನವರ ಮುಖೇನ ಮುಖ್ಯಮಂತ್ರಿಗೆ ಮನವಿ ಸಲ್ಲಿಸುತ್ತಿದ್ದೇವೆ ಕೊಡಗು ಭಾಗದ ವಿರಾಜಪೇಟೆ ಶಾಸಕರು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ವನ್ಯಜೀವಿ ಮಾನವ ಸಂಘಟನೆಗಳನ್ನು ಹತ್ತಿರದಿಂದ ನೋಡಿದವರಾಗಿದ್ದು ದಿನಗೂಲಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದವರಾಗಿದ್ದಾರೆ. ನಮ್ಮ ಸಮಸ್ಯೆಗಳ ಬಗ್ಗೆ ನಿವೇದನೆ ಮಾಡುತ್ತಾ ಸಂಕಷ್ಟಗಳಲ್ಲಿರುವ ನೌಕರರ ಮುಖ್ಯವಾದ ಬೇಡಿಕೆಗಳನ್ನು ಬಗೆಹರಿಸುವಂತೆ ಮನವಿ ಮಾಡಿದರು.



ದಿನಗೂಲಿ ನೌಕರರನ್ನು ಅದೇ ಹೆಸರಿನಲ್ಲಿಯೇ ಮುಂದುವರಿಸುವಂತೆ ಆಗ್ರಹಿಸಿ ವಿವಿಧ ಜಿಲ್ಲೆಗಳ ನೌಕರರು ಮುಖಂಡರು ಶಾಸಕ ಎ.ಎಸ್.ಪೊನ್ನಣ್ಣರಿಗೆ ಮನವಿ ಸಲ್ಲಿಸಿದರು.

ವನ್ಯಜೀವಿ ವಿಭಾಗದ ರಾಜ್ಯ ಗೌರವ ಅಧ್ಯಕ್ಷ ಕೆ.ಎಂ.ನಾಗರಾಜ್ ಶೋಷಿತ ವರ್ಗದ ಧ್ವನಿಯಾದ ತಾವು ಸೌಲಭ್ಯಗಳನ್ನು ದೊರಕಿಸಿಕೊಡುವಂತೆ ರಾಜ್ಯದ ಮೂಲೆ ಮೂಲೆಗಳಿಂದಲು ನೌಕರರು ಭಾಗವಹಿಸಿ ಮನವಿ ಸಲ್ಲಿಸಿರುವುದಾಗಿ ಹೇಳಿದರು.

ನೌಕರರ ಮನವಿ ಸ್ವೀಕರಿಸಿದ ಪೊನ್ನಣ್ಣ ಮಾತನಾಡಿ, ನೊಂದವರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ, ಈ ನಿಟ್ಟಿನಲ್ಲಿ ರಾಜ್ಯದ ಅರಣ್ಯ ಇಲಾಖೆ ವನ್ಯಜೀವಿ ವಿಭಾಗದ ನೌಕರರ ಸಮಸ್ಯೆಗಳ ಪರಿಹರಿಸುವ ಬಗ್ಗೆ ಅರಣ್ಯ ಸಚಿವರು ಮತ್ತು ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಿ ನೌಕರರ ಬೇಡಿಕೆಯನ್ನು ಕೂಡಲೆ ಬಗೆಹರಿಸಲು ಪ್ರಯತ್ನ ಮಾಡುವ ಭರವಸೆ ನೀಡಿದರು.

ವನ್ಯಜೀವಿ ಘಟಕದ ಉಪಾಧ್ಯಕ್ಷ ಹರೀಶ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಸಭೆಯಲ್ಲಿ ಬಂಡಿಪುರ ವನ್ಯಜೀವಿ ವಿಭಾಗ, ಬಿ.ಆರ್.ಟಿ.ಹೆಚ್, ಮಲೆ ಮಹದೇಶ್ವರ, ಕಾವೇರಿ ವನ್ಯಜೀವಿ, ಬನ್ನೇರು ಘಟ್ಟ ಜೈವಿಕ ಉದ್ಯಾನವನ, ಭದ್ರ ಅಭಯಾರಣ್ಯ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಆಕಾಶಿ ದಾಂಡೇಲಿ, ದೇರೋಜಿ ಕುಡಿಗ್ರಾಮ ಬಳ್ಳಾರಿ, ಶಿವಮೊಗ್ಗ, ಕುದುರೆಮುಖ, ಕೊಡಗು, ಮೈಸೂರು, ದಾವಣಗೇರಿ, ಮೇಲುಕೋಟೆ ರಂಗನ ತಿಟ್ಟು ವನ್ಯಜೀವಿ ವಿಭಾಗದಿಂದಲೂ ಭಾರಿ ಸಂಖ್ಯೆಯಲ್ಲಿ ನೌಕರರು ಆಗಮಿಸಿದ್ದರು.

ವಿದ್ಯುತ್ ತಂತಿ ತುಳಿದು ವ್ಯಕ್ತಿ ಸಾವು

ಕುಶಾಲನಗರ/ಮಡಿಕೇರಿ: ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ವ್ಯಕ್ತಿಯೋರ್ವರು ಮೃತಪಟ್ಟಿರುವ ಘಟನೆ ಕುಶಾಲನಗರದ ಬೈಚನಹಳ್ಳಿಯಲ್ಲಿ ನಡೆದಿದೆ. ಕುಶಾಲನಗರದ ಕಾವೇರಿ ಬಡಾವಣೆ ನಿವಾಸಿ ಬಿ.ಬಿ.ಮೋಹನ್(63) ಸಾವನ್ನಪ್ಪಿದ ದುರ್ದೈವಿ.

ಮೃತ ಬಿ.ಬಿ.ಮೋಹನ್ ಅವರು ಬೈಚನಹಳ್ಳಿಯ ರೈತ ಸಹಕಾರ ಭವನದ ಬಳಿ ನಡೆದುಕೊಂಡು ಬರುತ್ತಿದ್ದ ಸಂದರ್ಭ ನೆಲಕ್ಕೆ ಬಿದ್ದಿದ್ದ 11 ಕೆ.ವಿ ವಿದ್ಯುತ್ ತಂತಿ ತುಳಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಹಾಗೂ ಚೆಸ್ಕಾಂ ಇಂಜಿನಿಯರ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಸಾರ್ವಜನಿಕರು ಚೆಸ್ಕಾಂ ನಿರ್ಲಕ್ಷ್ಯದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಘಟನೆಯೂ ನಡೆದಿದೆ. ಮೃತ ಬಿ.ಬಿ.ಮೋಹನ್ ಅವರ ಕುಟುಂಬಕ್ಕೆ 3 ತಿಂಗಳೊಳಗೆ ಪರಿಹಾರ ದೊರಕಿಸುವುದಾಗಿ ಚೆಸ್ಕಾಂ ಇಂಜಿನಿಯರ್ ಮಂಜುನಾಥ್ ಹೇಳಿದರು. ಘಟನೆ ಕುರಿತು ಕುಶಾಲನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಏ.28– ಸಿದ್ದಾಪುರ ಮಾರ್ಗದಲ್ಲಿ ಮಾರ್ಗದ ದುರಸ್ತಿ ಹಾಗೂ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದರಿಂದ ಸಿದ್ದಾಪುರ, ನೆಲ್ಲಿಹುದಿಕೇರಿ, ಮೇಕೂರು, ಇಂಜಿಲಗೆರೆ, ಗುಹ್ಯ, ಮಾಲ್ದಾರೆ ಫೀಡರ್‌ನಲ್ಲಿ ಏ.29ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಆದ್ದರಿಂದ ಸಿದ್ದಾಪುರ, ಗುಹ್ಯ, ಮಾಲ್ದಾರೆ, ಕರಡಿಗೋಡು, ಇಂಜಿಲಗೆರೆ, ತೂಪನಕೊಲ್ಲಿ, ನೆಲ್ಲಿಹುದಿಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರತಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ– ಮೇ 5ರಿಂದ ಸಮೀಕ್ಷೆ

ಮಡಿಕೇರಿ,ಏ.28–ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಕುರಿತು ಮೇ 5 ರಿಂದ ನಡೆಯುವ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಮಾಡದೆ ಸಮೀಕ್ಷೆ ಕೈಗೊಳ್ಳುವಂತೆ ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ ನಿರ್ದೇಶನ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಸಂಬಂಧ ಮಾಸ್ಟರ್ ತರಬೇತಿದಾರರಿಗೆ ನಡೆದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಡಾ.ಎಚ್.ಎನ್. ನಾಗಮೋಹನ್ ದಾಸ್ ಏಕಸದಸ್ಯ ವಿಚಾರಣಾ ಆಯೋಗವು ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯನ್ನು ನಡೆಸುತ್ತಿದ್ದು, ಈ ಸಂಬಂಧ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಸಭೆ ನಡೆಯಿತು.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಸಂಬಂಧ ಸಮೀಕ್ಷೆ ಕೈಗೊಳ್ಳಲಾಗಿದ್ದು, ಮೊಬೈಲ್ ಆ್ಯಪ್ ಆಧಾರ್‌ದಲ್ಲಿ ಮನೆ ಮನೆ ಸಮೀಕ್ಷೆ ಮಾಡಬೇಕಿದೆ ಎಂದರು.

ಜಿಲ್ಲೆಯ 544 ಪೋಲಿಂಗ್ ಸ್ಟೇಷನ್ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಯಲಿದ್ದು, ತಾಲೂಕು ಸಂಪನ್ಮೂಲ ತರಬೇತಿ ಅಧಿಕಾರಿಗಳು ಸಮೀಕ್ಷೆ ಮಾಡುವವರಿಗೆ ಸರಿಯಾದ ಮಾಹಿತಿ ನೀಡುವಂತಾಗಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್ ಮೇ 5 ರಿಂದ 17 ರವರೆಗೆ ಸಮೀಕ್ಷೆದಾರರು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದಾರೆ. ಹಾಗೆಯೇ ಮೇ 19 ರಿಂದ 21 ರವರೆಗೆ ಸಮೀಕ್ಷೆ ಬ್ಲಾಕ್‌ಗಳಲ್ಲಿ ವಿಶೇಷ ಶಿಬಿರ ಕೈಗೊಂಡು ಮನೆ ಮನೆ ಭೇಟಿಯಲ್ಲಿ ಬಿಟ್ಟು ಹೋದ ಪರಿಶಿಷ್ಟ ಜಾತಿಗಳ ಕುಟುಂಬಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ ಎಂದರು.

ಭವಿಷ್ಯ ರೂಪಿಸಿಕೊಳ್ಳುವತ್ತ ಗಮನಹರಿಸಿ: ಎ.ಎಸ್.ಪೊನ್ನಣ್ಣ



ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ ಕಲೋತ್ಸವ ಜಿಲ್ಲಾ ಮಟ್ಟದ ಅಂತರ್ ಕಾಲೇಜು ಸ್ಪರ್ಧಾ ಕಾರ್ಯಕ್ರಮದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿದರು.

ಮಡಿಕೇರಿ: ಆಧುನಿಕ ಯುಗದಲ್ಲಿ ಪ್ರತಿ ಕ್ಷೇತ್ರಗಳಲ್ಲಿಯೂ ಸ್ಪರ್ಧೆ ಇದ್ದು, ವಿದ್ಯಾರ್ಥಿಗಳು ಸ್ಪರ್ಧೆಯನ್ನು ಆರೋಗ್ಯಯುತವಾಗಿ ಬೆಳೆಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳುವತ್ತ ಗಮನಹರಿಸಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಕರೆ ನೀಡಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಗರದ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ ಕಲೋತ್ಸವ ಜಿಲ್ಲಾ ಮಟ್ಟದ ಅಂತರ್ ಕಾಲೇಜು ಸ್ಪರ್ಧಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು ಇದ್ದಲ್ಲಿ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪ್ರತಿಯೊಬ್ಬರಲ್ಲಿಯೂ ಸಹ ಒಂದಲ್ಲ ಒಂದು ರೀತಿ ಪ್ರತಿಭೆ ಇದ್ದು, ಅದನ್ನು ಸರಿಯಾಗಿ ಬಳಸಿಕೊಂಡು ಗೆಲುವು ಸಾಧಿಸಲು ಪ್ರಯತ್ನಿಸಬೇಕು. ವಿದ್ಯಾರ್ಥಿ ಜೀವನವು ಅತ್ಯಮೂಲ್ಯವಾಗಿದ್ದು, ಭವಿಷ್ಯದಲ್ಲಿ ಸ್ಮರಿಸುವಂತಹ ಬದುಕನ್ನು ಕಟ್ಟಿಕೊಳ್ಳಬೇಕು. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳವಣಿಗೆ ಹೊಂದಬೇಕು ಎಂದು ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವೆಂಕಟೇಶ್ ಪ್ರಸನ್ನ, ಕಸಾಪ ಪ್ರಧಾನ ಕಾರ್ಯದರ್ಶಿ ಮುನೀರ್ ಅಹ್ಮದ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಿಡಿಸಿ ಸದಸ್ಯ ಅಂಬೆಕಲ್ ನವೀನ್, ಪ್ರಾಧ್ಯಾಪಕರಾದ ಡಾ.ನಿರ್ಮಲ, ಕಾವೇರಿ ಪ್ರಕಾಶ್, ಚೈತ್ರ, ಅನುಪಮ ಇದ್ದರು.

ಇಂದು ಸಾರಿಗೆ ಅದಾಲತ್

ಮಡಿಕೇರಿ: ಪ್ರಾದೇಶಿಕ ಸಾರಿಗೆ ಕಚೇರಿ ಸಭಾಂಗಣದಲ್ಲಿ ಏ.29ರ ಮಧ್ಯಾಹ್ನ 3 ಗಂಟೆಗೆ ಸಾರಿಗೆ ಅದಾಲತ್ ನಡೆಯಲಿದೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ತಮ್ಮ ಕುಂದುಕೊರತೆಯ ಅಹವಾಲನ್ನು ಸಲ್ಲಿಸಬಹುದು ಎಂದು ಪ್ರಾದೇಶಿಕ ಸಾರಿಗೆಅಧಿಕಾರಿ ನಾಗರಾಜಾಚಾರ್ ತಿಳಿಸಿದ್ದಾರೆ.

ಮುದ್ದಂಡ ಕಪ್ ಹಾಕಿ: ಚಾಂಪಿಯನ್ ಪಟ್ಟಕ್ಕೆ ಮಂಡೇಪಂಡ ತಂಡ



ಮಡಿಕೇರಿ,ಏ.28– ಕೊಡವ ಕೌಟುಂಬಿಕ 'ಮುದ್ದಂಡ ಕಪ್ ಹಾಕಿ ಉತ್ಸವ'ದ ಅಂತಿಮ ಪಂದ್ಯ ಮಳೆಯಿಂದ ಬಾಧಿತವಾಗಿ ನಿಯಮಗಳಂತೆ ಪಂದ್ಯ ನಿಲುಗಡೆಗೂ ಮುನ್ನ ಏಕೈಕ ಗೋಲಿನ ಮುನ್ನಡೆ ಪಡೆದಿದ್ದ 'ಮಂಡೇ ಪಂಡ' ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು. ಆ ಮೂಲಕ ಬೆಳ್ಳಿ ಮಹೋತ್ಸವದ ಪಂದ್ಯಾವಳಿಯ ಚಾಂಪಿಯನ್ ಪಟ್ಟವನ್ನು ಮಂಡೇ ಪಂಡ ತಂಡ ತನ್ನ ಮುಡಿಗೇರಿಸಿಕೊಂಡಿತು. ಕಳೆದ ಸಾಲಿನ ಚಾಂಪಿಯನ್ ತಂಡ ಚೇಂದಂಡ ರನ್ನರ್ಸ್ ಪ್ರಶಸ್ತಿಗೆ ತೃಪ್ತಿಪಡಬೇಕಾಯಿತು.

ಕಾರ್ಮೋಡಗಳು ಕವಿದ ವಾತಾವರಣದ ನಡುವೆ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಪ್ರೇಕ್ಷಕರ ಹರ್ಷೋದ್ಗಾರಗಳ ನಡುವೆ ಮಂಡೇ ಪಂಡ ಮತ್ತು ಚೇಂದಂಡ ನಡುವಿನ ಪಂದ್ಯ ಅತ್ಯಂತ ಕುತೂಹಲಕಾರಿಯಾಗಿ ಆರಂಭಗೊಂಡಿತು. ಪಂದ್ಯದ ಆರಂಭಿಕ ಕ್ಷಣಗಳಲ್ಲೆ ಚೇಂದಂಡ ತಂಡ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಪಡೆದು ಕೊಂಡಿತು.

ಮೇ 5ರಿಂದ ಒಳಮೀಸಲಾತಿ ಸಮೀಕ್ಷೆ: ಶಿಲ್ಪಾ ನಾಗ್

ಚಾಮರಾಜನಗರ,ಏ.28–ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಸಂಬಂಧ ಉಪವರ್ಗೀಕರಣ ಕೈಗೊಳ್ಳಲು ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಮೇ 5 ರಿಂದ 17ರವರೆಗೆ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದು, ಈ ಕಾರ್ಯವನ್ನು ಸಮೀಕ್ಷಾದಾರರು ಅತ್ಯಂತ ಹೊಣೆಗಾರಿಕೆ ಹಾಗೂ ಗಂಭೀರತೆಯಿಂದ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.



ಮಾಸ್ಟರ್ ಟ್ರೈನರ್ ತರಬೇತಿಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾರ್ಗಸೂಚಿ ಬಿಡುಗಡೆ ಮಾಡಿದರು.

ನಗರದ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಸಂಬಂಧ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಮನ್ವಯ ಸಮಿತಿ ಸಭೆ ಹಾಗೂ ಮಾಸ್ಟರ್ ಟ್ರೈನರ್ ತರಬೇತಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಜಾರಿ ಮಾಡಲು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕವ್ಯಕ್ತಿ ವಿಚಾರಣಾ ಆಯೋಗವನ್ನು ನೇಮಿಸಿ ಒಳಮೀಸಲಾತಿಯನ್ನು ವರ್ಗಿಕರಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಉಪ ವರ್ಗೀಕರಣ ಕೈಗೊಳ್ಳಲು ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಈ ಸಮೀಕ್ಷಾ ಕಾರ್ಯವು ಅತ್ಯಂತ ಮಹತ್ವದ್ದಾಗಿದ್ದು ನಿಯೋಜಿತ ಸಮೀಕ್ಷಾದಾರರು ಮುತುವರ್ಜಿಯಿಂದ ಸಮೀಕ್ಷಾ ಕೆಲಸವನ್ನು ಮಾಡಬೇಕು ಎಂದು ಹೇಳಿದರು.

ಸಮೀಕ್ಷೆಯನ್ನು ಮೊಬೈಲ್ ಆಪ್ ಮೂಲಕ ಕೈಗೊಳ್ಳಲಾಗುತ್ತದೆ. ಮೇ 5ರಿಂದ 17ರವರೆಗೆ ಮೊದಲ ಹಂತದಲ್ಲಿ ಸಮೀಕ್ಷೆದಾರರು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದಾರೆ. ಮೇ 19ರಿಂದ 21ರವರೆಗೆ ಸಮೀಕ್ಷೆ ಬ್ಲಾಕ್‌ಗಳಲ್ಲಿ ವಿಶೇಷ ಶಿಬಿರಗಳನ್ನು ಕೈಗೊಂಡು ಮನೆ ಮನೆ ಭೇಟಿಯ ಅವಧಿಯಲ್ಲಿ ಬಿಟ್ಟು ಹೋದ ಪರಿಶಿಷ್ಟ ಜಾತಿ ಕುಟುಂಬಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ ಎಂದರು.

ಸಮೀಕ್ಷೆ ವೇಳೆ ಕುಟುಂಬವನ್ನು ಭೇಟಿ ಮಾಡಿದಾಗ ಸ್ನೇಹಮಯ ಹಾಗೂ ಸೌಜನ್ಯ ಪೂರ್ವಕ ನಡತೆ, ತಾಳ್ಮೆಯಿಂದ ಸಮೀಕ್ಷೆಗೆ ಬೇಕಾಗುವ ಮಾಹಿತಿಯನ್ನು ಪಡೆಯಬೇಕು. ಸಮೀಕ್ಷೆ ಬ್ಲಾಕಿನ ಅಧಿಕೃತ ಭಾಗವಾಗಿರುವ ಯಾವುದೇ ಮನೆಯನ್ನು ಬಿಡಬಾರದು. ಗ್ರಾಮಲೆಕ್ಕಿಗರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಿಲ್ ಕಲೆಕ್ಟರ್, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಇತರರ ನೆರವನ್ನು ಪಡೆಯಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚಿಸಿದರು.

ಜಿಪಂ ಸಿಇಓ ಮೋನಾ ರೋತ್, ಎಸಿ ಬಿ.ಆರ್. ಮಹೇಶ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಎಂ.ವಿ. ಸುಧಾ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ತಹಶೀಲ್ದಾರ್ ಬಸವರಾಜು, ರಮೇಶ್ ಬಾಬು, ಗುರುಪ್ರಸಾದ್, ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಂಬೇಡ್ಕರ್ ಸಂವಿಧಾನದ ಮೂಲಕ ವಿಶ್ವ ನಾಯಕ:ಎಆರ್‌ಕೆ

ಕೊಳ್ಳೇಗಾಲ, ಏ.28– ಸಂವಿಧಾನ ರಚನೆ ಮೂಲಕವೇ ಅಂಬೇಡ್ಕರ್ ವಿಶ್ವ ನಾಯಕರಾಗಿದ್ದಾರೆ, ಸ್ವಾವಲಂಬಿ ಬದುಕಿಗೆ ಅವರು ಕೊಡುಗೆ ನೀಡಿದ ಸಂವಿಧಾನ ಸಹಕಾರಿ ಎಂದು, ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು

ಹೊಸ ಅಣಗಳ್ಳಿ ಬಡಾವಣೆಯ ವಿಶ್ವರತ್ನ ಡಾ.ಬಿ.ಆರ್.ಅಂಬೇಡ್ಕರ್ ಸಂಘ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿ, ಬಾಬಾ ಸಾಹೇಬರು ಒಂದೇ ಸಮಾಜದ ಬೆಳಣಿಗೆಗಾಗಿ ಸಂವಿಧಾನ ರಚಿಸಿಲ್ಲ, ಅವರು ರಚಿಸಿದ ಸಂವಿಧಾನ ಎಲ್ಲಾ ವರ್ಗಗಳ ಬದುಕಿಗೂ ಸಮಾನ ಅವಕಾಶ ಕಲ್ಪಿಸಿದೆ. ಸಂವಿಧಾನ ಎಂಬುದು ಪವಿತ್ರ ಗ್ರಂಥ, ಹಾಗಾಗಿಯೇ ಬಾಬಾ ಸಾಹೇಬರು ವಿಶ್ವ ನೆನೆಯುವ ಉನ್ನತ ನಾಯಕರಾಗಿದ್ದಾರೆ ಎಂದರು.

ಈ ವೇಳೆ ಸಾಧಕ ವಿದ್ಯಾಥಿಗಳನ್ನು ಮತ್ತು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ನೀಡಿ ಪುರಸ್ಕರಿಸಲಾಯಿತು. ಸಮಾರಂಭದಲ್ಲಿ ತಹಶಿಲ್ದಾರ್ ಬಸವರಾಜು, ನಗರಸಭೆ ಅಧ್ಯಕ್ಷ ರೇಖಾ, ರಮೇಶ್, ಸದಸ್ಯೆ ಕವಿತಾ, ಬೆಂಗಳೂರು ಆರ್ಥಿಕ & ಸಾಂಖ್ಯಿಕ ಇಲಾಖೆ ನಿವೃತ್ತ ನಿರ್ದೇಶಕ ಎಂ.ಮಾದೇಶ್, ಪೊಲೀಸ್ ಇಲಾಖೆಯ ನಿವೃತ್ತ ನೌಕರ ಮುತ್ತುರಾಯ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಚಂದ್ರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಹೊಸ ಅಣಗಳ್ಳಿ ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ನಂಜುಂಡಮೂರ್ತಿ, ಸಹಕಾರ್ಯದರ್ಶಿ ಕೀರ್ತಿರಾಜ್, ಸಂಘಟನಾ ಕಾರ್ಯದರ್ಶಿ ಜೋಗಪ್ಪ, ಖಜಾಂಚಿ ಬಂಗಾರಪ್ಪ, ಯಜಮಾನರಾದ ಮಹದೇವ, ಶಿವಣ್ಣ, ರಾಚಯ್ಯ, ಚಿಕ್ಕಣ್ಣ, ನಾರಾಯಣಮೂರ್ತಿ ಇನ್ನಿತರಿದ್ದರು.



ಹೊಸ ಅಣಗಳ್ಳಿ ಬಡಾವಣೆಯ ಅಂಬೇಡ್ಕರ್ ಜಯಂತಿ ಸಮಾರಂಭಕ್ಕೆ ಶಾಸಕ ಎ ಆರ್ ಕೃಷ್ಣಮೂರ್ತಿ ಚಾಲನೆ ನೀಡಿದರು.

ಡೈರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಲು ಕರೆ



ಯಳಂದೂರು ತಾಲೂಕಿನ ಕಟ್ನವಾಡಿ ಕಿನಕಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಸಭಾಭವನವನ್ನು ಚಾಮುಲ್ ಅಧ್ಯಕ್ಷ ಎಂ. ನಂಜುಂಡಸ್ವಾಮಿ ಸೋಮವಾರ ಉದ್ಘಾಟಿಸಿದರು.

ಯಳಂದೂರು,ಏ.28–ಡೈರಿಗಳಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿದರೆ ಹೈನುಗಾರರಿಗೂ ಹೆಚ್ಚು ಹಣ ಬರುವುದರ ಜೊತೆಗೆ ಒಕ್ಕೂಟಕ್ಕೂ ಅನುಕೂಲವಾಗುತ್ತದೆ ಎಂದು ಚಾಮುಲ್ ಅಧ್ಯಕ್ಷ ಎಂ. ನಂಜುಂಡಸ್ವಾಮಿ ಹೇಳಿದ್ದಾರೆ.

ತಾಲೂಕಿನ ಕಟ್ನವಾಡಿ–ಕಿನಕಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಸಭಾಭವನ ಉದ್ಘಾಟನೆ ಮತ್ತು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಚಾಮುಲ್‌ನಲ್ಲಿ ಪ್ರಸ್ತುತ 75 ಸಾವಿರ ಲೀ. ಹಾಲು ಮಾರಾಟವಾಗುತ್ತಿದ್ದು, ದೇಶದ ವಿವಿಧ ಭಾಗಗಳಿಗೆ ಗುಡ್‌ಲೈಫ್ ಹಾಲು ಪೂರೈಕೆ ಮಾಡಲಾಗುತ್ತಿದೆ ಎಂದರು.

ಚಾಮುಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ. ರಾಜ್‌ಕುಮಾರ್ ಮಾತನಾಡಿ, ಚಾಮುಲ್‌ನಿಂದ ಕಟ್ಟಡಗಳ ದುರಸ್ತಿ ಹಾಗೂ ಹೊಸ ಕಟ್ಟಡ ನಿರ್ಮಾಣಕ್ಕೆ ಪ್ರತಿ ವರ್ಷವೂ 1 ಕೋಟಿ ರೂ. ಮೀಸಲಿಡಲಾಗಿದ್ದು, ಪ್ರತಿ ತಾಲೂಕಿಗೂ 10 ಲಕ್ಷ ರೂ ನೀಡಲಾಗುತ್ತಿದೆ. ಯಳಂದೂರಿನಲ್ಲಿ ಒಟ್ಟು 18 ಕಟ್ಟಡಗಳಿದ್ದು ಇನ್ನೂ 7 ಕಡೆ ಕಟ್ಟಡಗಳನ್ನು ನಿರ್ಮಿಸಿಕೊಳ್ಳಬೇಕಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಡಾ.ಅಂಬೇಡ್ಕರ್ ಒಂದು ಸಮುದಾಯಕ್ಕೆ ಸೀಮಿತಗೊಳಿಸಬಾರದು: ಗಣೇಶ್ ಪ್ರಸಾದ್



ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಗಣೇಶ್ ಪ್ರಸಾದ್, ಸುನಿಲ್ ಬೋಸ್ ಉದ್ಘಾಟಿಸಿದರು. ಬೋಧಿರತ್ನ ಬಂತೇಜಿ, ಜ್ಞಾನಪ್ರಕಾಶ ಸ್ವಾಮೀಜಿ ಇತರಿದ್ದರು.

ಗುಂಡ್ಲುಪೇಟೆ, ಏ–28–ಅಂಬೇಡ್ಕರ್ ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲರೂ ಅವರ ಆದರ್ಶಗಳನ್ನು ಅಳವಡಿಸಿ ಪ್ರತಿ ದಿನವೂ ಪಾಲಿಸುವಂತಾಗಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ ದೇಶಕ್ಕೆ ಉತ್ತಮ ಸಂವಿಧಾನವನ್ನು ನೀಡಿ ಸಂವಿಧಾನ ಶಿಲ್ಪಿಯಾದ ಅವರನ್ನು ಒಂದು ವರ್ಗಕ್ಕೆ ಸೀಮಿತಗೊಳಿಸಬಾರದು. ಅವರ ತತ್ವ ಆದರ್ಶಗಳು ಇಂದಿಗೂ ಸಹ ಎಲ್ಲರಿಗೂ ಬೇಕಾಗಿದೆ. ಹಿಂದುಳಿದ ವರ್ಗಗಳು ಹೆಚ್ಚಿನ ರೀತಿಯಲ್ಲಿ ಶಿಕ್ಷಣಕ್ಕೆ ಒತ್ತು ನೀಡಿ ಉತ್ತಮ ವಿದ್ಯಾವಂತರಾಗಬೇಕಾಗಿದೆ ಎಂದರು.

ಸಂಸದ ಸುನಿಲ್ ಬೋಸ್ ಮಾತನಾಡಿ, ಅಂಬೇಡ್ಕರ್ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಮತದಾನದ ಹಕ್ಕನ್ನು ದೊರಕುವಂತೆ ಮಾಡುವ ಮೂಲಕ ರಾಜಪ್ರಭುತ್ವದ ಬದಲು ಪ್ರಜಾಪ್ರಭುತ್ವದ ಆಳ್ವಿಕೆಗೆ ಅವಕಾಶ ನೀಡಿದ್ದಾರೆ ಎಂದು ಹೇಳಿದರು.

ಪುರಸಭಾಧ್ಯಕ್ಷ ಜಿ.ಎಸ್.ಮಧುಸೂಧನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಗೋಪಾಲ್ ಮೊದಲಾದವರು ಭಾಗವಹಿಸಿದ್ದರು. ನಳಂದ ಬೌದ್ಧವಿಹಾರದ ಬೋಧಿರತ್ನ ಬಂತೇಜಿ, ಉರಿಲಿಂಗ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ಮುಖ್ಯಭಾಷಣಕಾರ ಕೃಷ್ಣಮೂರ್ತಿ ಚಮರಂ ಅಂಬೇಡ್ಕರ್ ವಿಚಾರ ಧಾರೆಗಳನ್ನು ಮಾತನಾಡಿದರು.

ಇದಕ್ಕೂ ಮೊದಲು ಅಂಬೇಡ್ಕರ್ ಭಾವ ಚಿತ್ರವನ್ನು ಮಂಗಳವಾದ್ಯಗಳು, ವಿವಿಧ ಜನಪದ ಕಲಾತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮೇ 3, 4 ರಂದು ಶ್ರೀ ಮಹಾ ಗಣಪತಿ ದೇವಸ್ಥಾನದ ಕುಂಭಾಭಿಷೇಕ

ಚಾಮರಾಜನಗರ,ಏ.28–ನಗರದ ಭ್ರಮರಾಂಬ ಬಡಾವಣೆಯ 4ನೇ ಕ್ರಾಸ್‌ನಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದ ಕುಂಭಾಭಿಷೇಕ ಮತ್ತು ಶ್ರೀಶನೇಶ್ವರ ಸ್ವಾಮಿಗೆ ಕವಚಧಾರಣಾ ಮಹೋತ್ಸವವು ಮೇ 3 ಮತ್ತು 4 ರಂದು ನಡೆಯಲಿದೆ.

ಶ್ರೀ ವಿಶ್ವಾವಸು ನಾಮ ಸಂವತ್ಸರದ ವೈಶಾಖ ಮಾಸ ಶುಕ್ಲ ಪಕ್ಷ ಮೇ 3ರಂದು ಶನಿವಾರ ಷಷ್ಠಿ ಪುನರ್ವಸು ನಕ್ಷತ್ರ ಸಂಜೆ 4.30ಕ್ಕೆ ಅನುಜ್ಞೆ ಗಣಪತಿ ಪೂಜೆ, ಪುಣ್ಯಾಹ ಪಂಚಗವ್ಯ, ಕಳಶ ಸ್ಥಾಪನೆ, ವೇದಪಾರಾಯಣ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಹಾಗೂ ಸಪ್ತಮಿ ತಿಥಿ ಪುಷ್ಯ ನಕ್ಷತ್ರದ ಮಿಥುನ ಲಗ್ನದ ಶುಭ ಮುಹೂರ್ತದಲ್ಲಿ ಮೇ 4 ರಂದು ಬೆಳಿಗ್ಗೆ 7 ಗಂಟೆಯಿಂದ ಕಲ್ಪೋಕ್ತಿ ಪೂಜೆ, ಪಾರಾಯಣ, ಶ್ರೀಶನೇಶ್ವರ ಸ್ವಾಮಿಗೆ ಬೆಳ್ಳಿಕವಚಧಾರಣೆ, ಹೋಮಾಧಿಗಳು, ಪೂರ್ಣಾಹುತಿ ಶ್ರೀಯವರ ಕುಂಭಾಭಿಷೇಕ ಮಹೋತ್ಸವದ ಪೂಜಾ ಕೈಂಕರ್ಯ ವೇ.ಬ್ರ.ಶ್ರೀ ಪಲಾಶ ಭಾರದ್ವಾಜ್ ರವರು ಹಾಗೂ ತಂಡದವರಿಂದ ನೆರವೇರಲಿದೆ. ಮಧ್ಯಾಹ್ನ 12:30ಕ್ಕೆ ಮಹಾ ಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ.

ಈ ಕಾರ್ಯಕ್ರಮಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರಕೃಪೆಗೆ ಪಾತ್ರರಾಗಬೇಕು ಎಂದು ದೇವಸ್ಥಾನದ ಅರ್ಚಕ ಕಾರ್ತಿಕ ಭಾರದ್ವಾಜ್ ಕೋರಿದ್ದಾರೆ.

ಕರಿನಂಜನಪುರದಲ್ಲಿ ಶ್ರೀ ಮಂಟೇಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ಪೂಜೆ



ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಅವರು ಮಂಟೇಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ ಕಾರ್ಯ ನೆರವೇರಿಸಿದರು.

ಚಾಮರಾಜನಗರ: ಶ್ರೀ ಮಂಟೇಸ್ವಾಮಿ ಪರಂಪರೆಯು ಕಾಯಕ ಯೋಗಿಗಳ ಶಕ್ತಿಯಾಗಿದ್ದು, ಸಮಾಜದಲ್ಲಿ ಜನರು ಶಾಂತಿ, ಸಮಾನತೆ ಹಾಗೂ ಸಹಬಾಳ್ವೆಯಲ್ಲಿ ಬದುಕುವ ಸಂಕೇತವಾಗಿದೆ ಎಂದು ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ತಿಳಿಸಿದರು.

ನಗರದ ಕರಿನಂಜನಪುರ ಬಡಾವಣೆಯಲ್ಲಿ ಇಂದು ಶ್ರೀ ಮಂಟೇಸ್ವಾಮಿ ದೇವರ ಗುಡ್ಡರ ದೇವಸ್ಥಾನ ಸೇವಾ ಟ್ರಸ್ಟಿನಿಂದ ದೇವಸ್ಥಾನದ ಭೂಮಿಪೂಜೆ ಕಾರ್ಯ ನೆರವೇರಿಸಿ ಅವರು ಮಾತನಾಡಿ, ಪ್ರಸ್ತುತ ಮಂಟೇಸ್ವಾಮಿ ಗುಡ್ಡರು ಮಂಟೇಸ್ವಾಮಿ ಪರಂಪರೆಯನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ತಲುಪಿಸುವ ಸಾರ್ಥಕ ಕಾಯಕವನ್ನು ಮಾಡುತ್ತಿದ್ದಾರೆ ಎಂದರು.

ಮಂಟೇಸ್ವಾಮಿ ಕಾಯಕ ಪರಂಪರೆಯನ್ನು ಅಪ್ಪಿಕೊಂಡಿರುವ, ರಾಚಪ್ಪಾಜಿ, ಸಿದ್ದಪ್ಪಾಜಿ ಮಂಟೇಸ್ವಾಮಿಯ ಶಿಷ್ಯರು. ಅವರು ಕಾಯಕ ಸಮಾಜದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಕಾಯಕದ ಜೊತೆಗೆ ಧರ್ಮ ಧೀಕ್ಷೆ ಮತ್ತು ಬದುಕು ಶಕ್ತಿಯನ್ನು ನೀಡಿದ ದಾರ್ಶನಿಕರು. ಒಂದು ಶಕ್ತಿ ರೂಪವಾಗಿದ್ದರು ಎಂದು ಶ್ರೀಗಳು ಬಣ್ಣಿಸಿದರು. ದೇವಾಲಯಕ್ಕೆ ಸ್ಥಳ ದಾನ ಮಾಡಿದ ಶಿವಮಲ್ಲಪ್ಪ ಹಾಗೂ ಸುಬ್ರಹ್ಮಣ್ಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕೂಡ್ಲೂರು ಶ್ರೀ ಮಂಟೇಸ್ವಾಮಿ ದೇವಸ್ಥಾನದ ಆದಿ ಮಠದ ಸತ್ಯಪ್ಪ, ಜೆಎಸ್‌ಎಸ್ ನಿವೃತ್ತ ಅಧೀಕ್ಷಕ ಚಂದ್ರಶೇಖರ್, ನಗರಸಭಾ ಸದಸ್ಯ ಮನೋಜ್‌ಪಟೇಲ್, ಪ್ರೊ. ಮಲ್ಲೇಶಪ್ಪ, ಗೌಡಿಕೆ ಲಿಂಗಣ್ಣ, ಗೌಡಿಕೆ ಕುಮಾರಸ್ವಾಮಿ, ಶ್ರೀ ಮಂಟೇಸ್ವಾಮಿ ದೇವರಗುಡ್ಡರ ದೇವಸ್ಥಾನದ ಸೇವಾ ಟ್ರಸ್ಟ್‌ನ ಗೌರವ ಅಧ್ಯಕ್ಷ ಕುಮಾರ್, ಅಧ್ಯಕ್ಷ ಕೆ.ವಿ. ನಾಗರಾಜು, ಷಡಕ್ಷರ ಸ್ವಾಮೀಜಿ, ಕಾರ್ಯದರ್ಶಿ ಚಿನ್ನಸ್ವಾಮಿ ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಸಿದ್ದು ವಿರುದ್ಧ ಸಿಡಿದೆದ್ದ ವಿಜಯೇಂದ್ರ, ಯತ್ನಾಳ್!

ಬೆಂಗಳೂರು: ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧ ಬೆಳಗಾವಿಯಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ತಾಳ್ಮೆ ಕಳೆದು ಕೊಂಡು ಪೊಲೀಸ್ ಅಧಿಕಾರಿ ಮೇಲೆ ಕೈಮಾಡಲು ಮುಂದಾದದ್ದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಮತ್ತು ಬಿಜೆಪಿ ಉಚ್ಚಾಟಿತ ಶಾಸಕ ಯತ್ನಾಳ್ ಕಿಡಿಕಾರಿದ್ದಾರೆ.



ಬಿ.ವೈ. ವಿಜಯೇಂದ್ರ ಟ್ವೀಟ್: ಪಾಕಿಸ್ತಾನದ ಪರ ಸಹಾನುಭೂತಿ ಮಾತನಾಡಿ ಅಖಂಡ ಭಾರತದ ಏಕತೆಯ ನಡುವೆ ಬಿರುಕು ಮೂಡಿಸುವ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಇಂದು ಬೆಳಗಾವಿಯ ಕಾಂಗ್ರೆಸ್ ಸಮಾವೇಶದಲ್ಲಿ ರಾಷ್ಟ್ರಭಕ್ತ ಮಹಿಳೆಯರು ದಿಟ್ಟತನದಿಂದ ಘೋಷಣೆ ಕೂಗುವ ಮೂಲಕ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಇದರಿಂದ ವಿಚಲಿತಗೊಂಡ ಮುಖ್ಯಮಂತ್ರಿಗಳು ಸಮವಸ್ತ್ರದಲ್ಲಿದ್ದ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಏಕವಚನದಲ್ಲಿ ಸಂಬೋಧಿಸಿ, ಹತಾಶೆಯಿಂದ ಆರ್ಭಟಿಸಿ ಕೈ ಮಾಡಲು ಮುಂದಾಗಿರುವ ಕ್ರಮ ಮುಖ್ಯಮಂತ್ರಿ ಸ್ಥಾನದ ಘನತೆಗೆ ಧಕ್ಕೆ ತಂದ ಗೂಂಡಾ ವರ್ತನೆಯಾಗಿದೆ.

ಯತ್ನಾಳ್ ಆಕ್ರೋಶ: ಅಧಿಕಾರ ಮದದಲ್ಲಿ ತೇಲುತ್ತಿರುವ ಸಿದ್ದರಾಮಯ್ಯನವರ ನಡೆ, ನುಡಿಗಳು ಇತ್ತೀಚಿನ ದಿನಗಳಲ್ಲಿ ವಿಪರೀತಕ್ಕೆ ಹೋಗುತ್ತಿದೆ. ಕೆಲ ತಿಂಗಳ ಹಿಂದೆ ಸಭೆಯೊಂದರಲ್ಲಿ ದಕ್ಷ ಜಿಲ್ಲಾಧಿಕಾರಿಯೊಬ್ಬರನ್ನು ಕೇವಲವಾಗಿ ಅಪಮಾನಿಸಿ, ತಮ್ಮ ಸಂಸ್ಕೃತಿಹೀನ ನಡುವಳಿಕೆಯನ್ನು ಸಿದ್ದರಾಮಯ್ಯನವರು ಅನಾವರಣ ಮಾಡಿಕೊಂಡಿದ್ದರು. ಅವರ ವರ್ತನೆ ಇಂದು – ನಿನ್ನೆಯದಲ್ಲ, ತಮ್ಮ ಸ್ವಕ್ಷೇತ್ರದಲ್ಲಿ ಮಹಿಳೆಯೊಬ್ಬರ ಸೆರಗೆಳೆದು ರೌದ್ರಾವತಾರ ಪ್ರದರ್ಶಿಸಿದ ಘಟನೆ ಇನ್ನೂ ಹಸಿಯಾಗಿಯೇ ಇದೆ. ಅದೇ ರೀತಿ ಮೈಸೂರು ಭಾಗದ ಹಿರಿಯ ರಾಜಕಾರಿಣಿಯಾಗಿದ್ದ ನಂಜನಗೂಡಿನ ದಿವಂಗತ ಎಂ.ಮಹದೇವು ಅವರ ಮೇಲೂ ಹಲ್ಲೆ ನಡೆಸಿದ ಪ್ರಕರಣವನ್ನು ಮಾಧ್ಯಮಗಳು 'ಸಿದ್ದು–ಗುದ್ದು' ಪ್ರಕರಣ ಎಂದೇ ವ್ಯಾಖ್ಯಾನಿಸಿದ್ದವು.

ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರಿಗೆ ಅನುಭವದ ಹಿರಿತನ, ನಡವಳಿಕೆ, ಹಾಗೂ ಮಾತುಗಳನ್ನು ಮಾಗಿಸಬೇಕು, ಆದರೆ ಸಿದ್ದರಾಮಯ್ಯನವರ ವಿಷಯದಲ್ಲಿ ಇದು ತಿರುಗು–ಮುರುಗಾಗಿದೆ, ದಿನೇ ದಿನೆ ಅವರು ತಮ್ಮ ನಾಲಿಗೆಯ ಮೇಲೆ ಹಿಡಿತ ಕಳೆದುಕೊಳ್ಳುತ್ತಿದ್ದಾರೆ. ಹತಾಶೆಯಿಂದ ಜನರು ಹಾಗೂ ಅಧಿಕಾರಿಗಳ ಮೇಲೆ ಅಹಂಕಾರ ಹಾಗೂ ತೋಳ್ಬಲ ಪ್ರದರ್ಶಿಸುತ್ತಿದ್ದಾರೆ. ಇದು ಅತ್ಯಂತ ದುರ್ದೈವದ ಹಾಗೂ ಖಂಡನೀಯ ವರ್ತನೆಯಾಗಿದೆ. ಕರ್ನಾಟಕದ ಮುಖ್ಯಮಂತ್ರಿ ಸ್ಥಾನಕ್ಕೆ ಬಹುದೊಡ್ಡ ಹಿನ್ನೆಲೆಯಿದೆ, ಆ ಸ್ಥಾನದಲ್ಲಿ ಕುಳಿತ ಅನೇಕ ಮಹನೀಯರು ಮುಖ್ಯಮಂತ್ರಿ ಸ್ಥಾನದ ಘನತೆಯನ್ನು ಮೇರುಮಟ್ಟಕ್ಕೆ ಕೊಂಡೊಯ್ದಿದ್ದಾರೆ, ವಿಶ್ವಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ.

ಕರ್ನಾಟಕ ಎಂದರೆ ಸಜ್ಜನಿಕೆಯ ರಾಜಕಾರಣ, ಸಂಸ್ಕೃತಿ–ಸಂಸ್ಕಾರದ ನೆಲೆಬೀಡು ಎಂಬ ಮಾತಿದೆ, ಆದರೆ ಸಿದ್ದರಾಮಯ್ಯನವರ ವರ್ತನೆಯಿಂದಾಗಿ ಇತಿಹಾಸದ ಪರಂಪರೆಗೆ ಕಪ್ಪು ಮಸಿ ಬಳಿಯುತ್ತಿದೆ. ಕರ್ನಾಟಕದ ಗೌರವ ಹಾಗೂ ಮುಖ್ಯ ಮಂತ್ರಿ ಸ್ಥಾನದ ಘನತೆ ಸಂಪೂರ್ಣ ಕುಗ್ಗುತ್ತಿದೆ. ರಾಷ್ಟ್ರ ಭಕ್ತರೆಂದರೆ ಕೆಂಡಕಾರುವ, ದೇಶ ಸುರಕ್ಷತೆಯ ಬಗ್ಗೆ ಉಡಾಫೆಯ ಮಾತನಾಡುವ ಸಿದ್ದರಾಮಯ್ಯನವರಿಂದಾಗಿ ಇಡೀ ರಾಷ್ಟ್ರ 'ಭಾರತದ ಸುಭದ್ರತೆಗೆ' ಒಕ್ಕೊರಲ ದನಿಯಾಗಿ ನಿಂತಿದ್ದರೆ, ಅದಕ್ಕೆ ವ್ಯತಿರಿಕ್ತವಾಗಿ ಕರ್ನಾಟಕದ ಮುಖ್ಯಮಂತ್ರಿ ವರ್ತಿಸುತ್ತಿದ್ದಾರೆ.

ಸಿದ್ದರಾಮಯ್ಯನವರ ವಿರುದ್ಧ ಘೋಷಣೆ ಕೂಗುವ ಮೂಲಕ ರಾಷ್ಟ್ರಭಕ್ತಿ ಮೆರೆದ ದಿಟ್ಟ ಮಹಿಳೆಯರೆಲ್ಲರಿಗೂ ಅಭಿನಂದನೆ ಸಲ್ಲಿಸುವೆ.

ಕರ್ತವ್ಯ ನಿರತ ಪೊಲೀಸ್ ವರಿಷ್ಠಾಧಿಕಾರಿಯ ಮೇಲೆ ದರ್ಪ ತೋರಿ, ಅವರ ಮೇಲೆ ಹಲ್ಲೆಗೆ ಮುಂದಾದ ಸಿದ್ದರಾಮಯ್ಯನವರ ವರ್ತನೆ ಇಡೀ ಪೊಲೀಸ್ ಇಲಾಖೆಗೆ ಮಾಡಿದ ಅಪಮಾನವಾಗಿದೆ. ಈ ಹಿನ್ನೆಲೆಯಲ್ಲಿ ಅವಮಾನಕ್ಕೊಳಗಾದ ಪೊಲೀಸ್ ಅಧಿಕಾರಿ ಹಾಗೂ ಇಡೀ ಪೊಲೀಸ್ ಇಲಾಖೆಗೆ ಸಿದ್ದರಾಮಯ್ಯನವರು ಕ್ಷಮೆಯಾಚಿಸಬೇಕೆಂದು ಒತ್ತಾಯಿಸುತ್ತೇನೆ.

ಯತ್ನಾಳ್ ಟ್ವೀಟ್ ಏನು: ಕರ್ತವ್ಯ ನಿರತ ಹೆಚ್ಚುವರಿ ಎಸ್‌ಪಿ ಮೇಲೆ ಕೈ ಕೈ ಮಿಲಾಯಿಸುವ ಹಂತಕ್ಕೆ ಮುಖ್ಯಮಂತ್ರಿಗಳು ಹೋಗಿದ್ದು ಅಕ್ಷಮ್ಯ. ಅಧಿಕಾರಿಗಳೊಂದಿಗೆ ಸೌಜನ್ಯತೆಯಿಂದ ವರ್ತಿಸಬೇಕಾಗಿದ್ದ ಮುಖ್ಯಮಂತ್ರಿಗಳು ಆಕ್ರಮಣಕಾರಿಯಾಗಿ, ಅನುಚಿತವಾಗಿ ವರ್ತಿಸುತ್ತಿರುವುದು ತರವಲ್ಲ. ಈ ನಿರಂಕುಶ ನಡವಳಿಕೆ ನಿಜಕ್ಕೂ ಖಂಡನಾರ್ಹ. ಹಗಲಿರುಳು ಟೊಂಕಕಟ್ಟಿ ದುಡಿಯುವ ಪೊಲೀಸರ ಮನೋ ಸ್ಥೈರ್ಯವನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕೆ ಹೊರತು ಸಾರ್ವಜನಿಕವಾಗಿ ಅವರಿಗೆ ಅವಮಾನಿಸುವ ಕೆಲಸ ಆಗಬಾರದು. ಸಿದ್ದರಾಮಯ್ಯನವರು ಕೂಡಲೇ ಆ ಅಧಿಕಾರಿಗೆ ಕ್ಷಮೆಯಾಚಿಸಬೇಕು.

ಅಂಗನವಾಡಿ ಮಕ್ಕಳಿಗೆ ರಾಗಿ ಮಿಕ್ಸ್ ನೀಡಲು ಸರ್ಕಾರ ಚಿಂತನೆ

ಬೆಂಗಳೂರು: ಅಂಗನವಾಡಿ ಮಕ್ಕಳಿಗೆ ಅಗತ್ಯ ಪೌಷ್ಟಿಕಾಂಶ ಒದಗಿಸಲು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗದೊಂದಿಗೆ ರಾಗಿ ಹೆಲ್ತ್ ಮಿಕ್ಸ್ ನೀಡಲು ಯೋಜಿಸುತ್ತಿದೆ.



ಸಾಂದರ್ಭಿಕ ಚಿತ್ರ

ಸದ್ಯ ಸರ್ಕಾರಿ ಶಾಲೆಗಳಿಗೆ ಪೌಷ್ಟಿಕಾಂಶ ಭರಿತ ಮಿಶ್ರಣವನ್ನು ಪೂರೈಸಲು ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ರಾಜ್ಯ ಸರ್ಕಾರದೊಂದಿಗೆ ಕೈಜೋಡಿಸಿದೆ. ತೀವ್ರ ಅಪೌಷ್ಟಿಕತೆ ಮತ್ತು ಮಧ್ಯಮ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಮೇಲೆ ವಿಶೇಷ ಗಮನಹರಿಸುವ ಮೂಲಕ ಈ ಕಾರ್ಯಕ್ರಮವನ್ನು ಅಂಗನವಾಡಿ ಮಕ್ಕಳಿಗೆ ವಿಸ್ತರಿಸುವ ಯೋಜನೆ ಈಗ ಇದೆ. ಜುಲೈ ವೇಳೆಗೆ ಕಾರ್ಯಕ್ರಮ ಆರಂಭವಾಗುವ ನಿರೀಕ್ಷೆ ಇದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಹಂತದಲ್ಲಿ ಯಾದಗಿರಿ, ಚಾಮರಾಜನಗರ, ಬಾಗಲಕೋಟೆ, ಹಾವೇರಿ ಮತ್ತು ಧಾರವಾಡದಂತಹ ಜಿಲ್ಲೆಗಳಾದ್ಯಂತ ಸುಮಾರು 4,000 ಮಕ್ಕಳಿಗೆ ಮೊಟ್ಟ ಮೊದಲಿಗೆ ಈ ಹೆಲ್ತ್ ಮಿಕ್ಸ್ ನೀಡುವ ಯೋಜನೆಯಿದೆ ಎಂದು ಹಿರಿಯ ಇಲಾಖೆಯ ಅಧಿಕಾರಿಯೊಬ್ಬರು ಮಾಧ್ಯಮಕ್ಕೆ ತಿಳಿಸಿದ್ದಾರೆ.

ಒಂದು ವರ್ಷದಲ್ಲಿ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿಯೂ ಕಾರ್ಯಕ್ರಮವನ್ನು ವಿಸ್ತರಿಸಲು ಇಲಾಖೆ ಯೋಜಿಸುತ್ತಿದೆ. ಈ ವಿಸ್ತರಣೆಯು ರಾಜ್ಯಾದ್ಯಂತ ಪೌಷ್ಟಿಕಾಂಶದ ಬೆಂಬಲದ ವ್ಯಾಪ್ತಿಯನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ ಎಂದು ಅಧಿಕಾರಿ ಸೇರಿಸಲಾಗಿದೆ.

ಟ್ರಸ್ಟ್ ನಡೆಸುತ್ತಿರುವ ಶ್ರೀ ಮಧುಸೂದನ್ ಸಾಯಿ ಗ್ಲೋಬಲ್ ಹ್ಯುಮಾನಿಟೇರಿಯನ್ ಮಿಷನ್‌ನ ಸಂಸ್ಥಾಪಕರಾದ ಶ್ರೀ ಮಧುಸೂದನ್ ಸಾಯಿ ಮಾತನಾಡಿ ಮಕ್ಕಳಿಗೆ ಪೌಷ್ಟಿಕಾಂಶವನ್ನು ಸುಧಾರಿಸುವ ಗುರಿಯನ್ನು ಹೊಂದಿರುವುದಾಗಿ ಹೇಳಿದ್ದಾರೆ. ಇದು ಸಾಯಿಸೂರ್ ಮಾಲ್ಟ್ ಮಲ್ಟಿ–ನ್ಯೂಟ್ರಿಯೆಂಟ್ ಹೆಲ್ತ್ ಮಿಕ್ಸ್ ಆಗಿದೆ. ಹಾಲಿಗೆ ಸೇರಿಸಲು ವಿನ್ಯಾಸಗೊಳಿಸಲಾಗಿದೆ. ರಾಗಿ ಮತ್ತು ಬೆಲ್ಲದ ಮಿಶ್ರಣದ ಪೋಷಕಾಂಶಗಳನ್ನು ಹೊಂದಿದೆ.

ಈ ಮಿಶ್ರಣವು ಅಗತ್ಯ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪೋಷಕಾಂಶಗಳನ್ನು ಒದಗಿಸುತ್ತದೆ. ಈ ಮಿಶ್ರಣವನ್ನು ಒಂದು ಲೋಟ ಹಾಲಿನೊಂದಿಗೆ ಬೆರೆಸುವ ಅಗತ್ಯವಿದೆ. ಸರ್ಕಾರವು ಈಗಾಗಲೇ ಹಾಲು ನೀಡುತ್ತಿರುವುದರಿಂದ, ಇದು ಸರ್ಕಾರದ ಯೋಜನೆಗಳಿಗೆ ಪೂರಕವಾಗಿದೆ, ಮಕ್ಕಳ ಬೆಳವಣಿಗೆಗೆ ಅಗತ್ಯವಾದ ಪ್ರಮುಖ ಪೋಷಕಾಂಶಗಳನ್ನು ಪಡೆಯಬಹುದಾಗಿದೆ ಎಂದು ಅವರು ಹೇಳಿದರು, ಟ್ರಸ್ಟ್ ರಾಗಿ ಚಿಕ್ಕಿ ಮತ್ತು ಲಡ್ಡೂಗಳಂತಹ ಉತ್ಪನ್ನಗಳ ವಿಸ್ತರಿಸಲು ಯೋಜಿಸುತ್ತಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವರ್ಷದ ಬಜೆಟ್‌ನಲ್ಲಿ ಸರ್ಕಾರಿ ಶಾಲೆಗಳಲ್ಲಿ ಪೌಷ್ಟಿಕಾಂಶ ಕಾರ್ಯಕ್ರಮಕ್ಕಾಗಿ ಶೇ. 25 ರಷ್ಟು ವೆಚ್ಚವನ್ನು ಕರ್ನಾಟಕ ಸರ್ಕಾರ ಭರಿಸಲಿದ್ದು, ಉಳಿದ 75% ಅನ್ನು ಟ್ರಸ್ಟ್ ಭರಿಸಲಿದೆ ಎಂದು ಘೋಷಿಸಿದ್ದರು. ಆದರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮುಂಬರುವ ಕಾರ್ಯಕ್ರಮಕ್ಕೆ ಅನುದಾನ ನೀಡುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ತಿಳಿದು ಬಂದಿದೆ.

ಕೇರಳ ಸಿಎಂ ಕಚೇರಿ, ರಾಜಭವನ, ಕೊಚ್ಚಿ ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ

ತಿರುವನಂತಪುರಂ: ಕೇರಳದ ಮುಖ್ಯಮಂತ್ರಿಗಳ ಕಚೇರಿ, ಕ್ಲಿಫ್ ಹೌಸ್, ರಾಜಭವನ, ತಿರುವನಂತಪುರಂನಲ್ಲಿರುವ ಸಾರಿಗೆ ಆಯುಕ್ತರ ಕಚೇರಿ ಮತ್ತು ಕೊಚ್ಚಿಯ ನೆಡುಂಬಸ್ಸೆರಿ ವಿಮಾನ ನಿಲ್ದಾಣ ಸೇರಿದಂತೆ ಕೇರಳದ ಐದು ಪ್ರಮುಖ ಸ್ಥಳಗಳಿಗೆ ಸೋಮವಾರ ಹೊಸದಾಗಿ ಬಾಂಬ್ ಬೆದರಿಕೆ ಬಂದಿರುವುದಾಗಿ ವರದಿಯಾಗಿದೆ.



ಇಮೇಲ್ ಮೂಲಕ ಬೆದರಿಕೆ ಸಂದೇಶ ಕಳುಹಿಸಲಾಗಿದ್ದು, ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ತಂಡಗಳು ಎಲ್ಲಾ ಸ್ಥಳಗಳಲ್ಲಿ ತಪಾಸಣೆ ಆರಂಭಿಸಿವೆ.

ತಿರುವನಂತಪುರಂನಲ್ಲಿ ಮಧ್ಯಾಹ್ನ 2 ಗಂಟೆಯ ವೇಳೆಗೆ ನಾಲ್ಕು ಕೇಂದ್ರಗಳಲ್ಲಿ ಮತ್ತು ನೆಡುಂಬಸ್ಸೆರಿ ವಿಮಾನ ನಿಲ್ದಾಣದಲ್ಲಿ ಮಧ್ಯಾಹ್ನ 2.30 ರ ಸುಮಾರಿಗೆ ಸ್ಫೋಟ ಸಂಭವಿಸಲಿದೆ ಎಂಬ ಎಚ್ಚರಿಕೆಯ ಸಂದೇಶ ಕಳುಹಿಸಲಾಗಿದೆ. ಇಮೇಲ್‌ಗಳ ಸ್ವರೂಪ ಒಂದೇ ರೀತಿಯದ್ದಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಿರುವನಂತಪುರಂ ವಿಮಾನ ನಿಲ್ದಾಣ ಸ್ಫೋಟಿಸುವುದಾಗಿ ನೆನ್ನೆ ಇದೇ ರೀತಿಯ ಸಂದೇಶ ಬಂದಿತ್ತು. ಕಳೆದ ಮೂರು ವಾರಗಳಿಂದ ರಾಜ್ಯವನ್ನು ಪೀಡಿಸುತ್ತಿರುವ ಹುಸಿ ಬಾಂಬ್ ಬೆದರಿಕೆ ಕರೆಗಳು ಕಡಿಮೆಯಾಗಿವೆ ಎಂದು ಅಧಿಕಾರಿಗಳು ನಂಬಿದ್ದರು, ಆದರೆ ಸೋಮವಾರ ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಮತ್ತೆ ಹೊಸದಾಗಿ ಬಾಂಬ್ ಬೆದರಿಕೆ ಬರಲು ಶುರು ಆಗಿದೆ.

ಆರಂಭಿಕ ಪರಿಶೀಲನೆ ವೇಳೆ ಹುಸಿ ಬೆದರಿಕೆ ಎಂದು ಸೂಚಿಸಿದರೂ, ಭದ್ರತಾ ಏಜೆನ್ಸಿಗಳು ತೀವ್ರ ತಪಾಸಣೆ ನಡೆಸುತ್ತಿವೆ. ಸಿಐಎಸ್‌ಎಫ್ ಸಿಬ್ಬಂದಿ, ಬಾಂಬ್ ನಿಷ್ಕ್ರಿಯ ದಳ ಮತ್ತು ರಾಜ್ಯ ಪೊಲೀಸರು ಜಂಟಿಯಾಗಿ ಸಂಪೂರ್ಣ ತಪಾಸಣೆ ನಡೆಸುತ್ತಿದ್ದಾರೆ. ಕಳೆದ ಎರಡು ದಿನಗಳಲ್ಲಿ ಇಂತಹ ಎಂಟು ಹುಸಿ ಬಾಂಬ್ ಬೆದರಿಕೆ ಕರೆ ಸ್ವೀಕರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಗತ್ಯ ವಸ್ತುಗಳ ಬೆಲೆಏರಿಕೆ ಖಂಡಿಸಿ ವಿಮೆನ್ ಇಂಡಿಯಾ ಮೂವ್ಮೆಂಟ್ ವಿನೂತನ ಪ್ರತಿಭಟನೆ

ಮೈಸೂರು, ಏ.28(ಎಂಕೆ)– ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ವಿಮೆನ್ ಇಂಡಿಯಾ ಮೂವ್ಮೆಂಟ್ ಮೈಸೂರು ನಗರ ವಿಭಾಗದ ವತಿಯಿಂದ ರಸ್ತೆಯಲ್ಲಿ ಅಡುಗೆ ಗ್ಯಾಸ್ ಸಿಲಿಂಡರ್, ಹಾಲು, ತರಕಾರಿ, ಸೌದೆ ಹಾಗೂ ಖಾಲಿ ಪಾತ್ರೆಗಳನ್ನಿಟ್ಟು ವಿನೂತನವಾಗಿ ಪ್ರತಿಭಟನೆ ನಡೆಸಲಾಯಿತು.



ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ವಿಮೆನ್ ಇಂಡಿಯಾ ಮೂವ್ಮೆಂಟ್ ಮೈಸೂರು ನಗರ ವಿಭಾಗದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಮಹದೇವಪುರ ಮುಖ್ಯರಸ್ತೆಯ ಉದಯಗಿರಿ ಸಿಗ್ನಲ್ ಬಳಿ ಜಮಾವಣೆಗೊಂಡ ಮಹಿಳಾ ಕಾರ್ಯಕರ್ತರು, ಹೆಣ್ಣು ಮಕ್ಕಳು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಉಜ್ವಲ ಯೋಜನೆ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳೆಲ್ಲಾ ಬರೀ ಟೊಳ್ಳು, ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಸಿಲಿಂಡರ್ ಸೇರಿದಂತೆ ದಿನ ಬಳಕೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು, ಜನತೆ ಮೇಲಿನ ಬೆಲೆ ಏರಿಕೆ ಹೊರೆ ಇಳಿಸಿ ಎಂದು ಆಗ್ರಹಿಸಿದರು.

ವಿಮೆನ್ ಇಂಡಿಯಾ ಮೂವ್ಮೆಂಟ್ ರಾಷ್ಟ್ರೀಯ ಕಮಿಟಿ ಸದಸ್ಯೆ ಸಮೀನಾ ಭಾನು ಮಾತನಾಡಿ, ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿರಂತರವಾಗಿ ಆಗುತ್ತಲೇ ಇದೆ. ಬೆಲೆ ಏರಿಕೆಯಿಂದ ಆದಾಯಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗ ಅಗತ್ಯವಿದ್ದು, ಸಾಲ ಮಾಡಲೇ ಸಂಕಷ್ಟಕ್ಕೆ ಜನರು ಸಿಲುಕುವಂತಾಗಿದೆ. ಗ್ಯಾಸ್, ಪೆಟ್ರೋಲ್, ಡೀಸೆಲ್ ಹಾಗೂ ಆಹಾರ ಪದಾರ್ಥಗಳ ಬೆಲೆ ಏರಿಕೆ ಜನರನ್ನು ಹೈರಾಣಾಗಿಸಿದೆ. ಬೆಲೆ ಏರಿಕೆ ವಿರುದ್ಧ ದೇಶದಾದ್ಯಂತ ವಿಮೆನ್ ಇಂಡಿಯಾ ಮೂಮ್ಮೆಂಟ್ ಪ್ರತಿಭಟನೆ ನಡೆಸುತ್ತಿದೆ ಎಂದರು.

ಎಸ್‌ಡಿಪಿಐ ಮಹಿಳಾ ಘಟಕದ ಜಿಲ್ಲಾ ಕಾರ್ಯದರ್ಶಿ ಆಯೇಷಾ ಝುಬಿ ಮಾತನಾಡಿ, ಕೇಂದ್ರ ಸರ್ಕಾರದ ಉಜ್ವಲ ಯೋಜನೆ, ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಬರೀ ಟೊಳ್ಳು ಗೃಹಲಕ್ಷ್ಮಿ ಹಣ ಬರುತ್ತಿಲ್ಲ ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಮಾಡಿ, ಪುರುಷರಿಗೆ ಟಿಕೆಟ್ ದರವನ್ನು ಹೆಚ್ಚಿಸಲಾಗಿದೆ. ಬಡತರ ಆದಾಯ ಕಡಿಮೆ ಮಾಡಿ, ಶಾಸಕ ಮತ್ತು ಸಚಿವರ ವೇತನ ಹೆಚ್ಚಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ವಿಮೆನ್ ಇಂಡಿಯಾ ಮೂವ್ಮೆಂಟ್ ಜಿಲ್ಲಾಧ್ಯಕ್ಷೆ ಝರೀನಾ ಭಾನು, ಕಾರ್ಯದರ್ಶಿ ಶಾಹೀನ್ ತಾಜ್, ಎಸ್‌ಡಿಪಿಐ ಮಹಿಳಾ ವಿಭಾಗದ ಜಿಲ್ಲಾ ಉಪಾಧ್ಯಕ್ಷೆ ರೇಷ್ಮಾ ಷಫಿ ಮತ್ತಿತರರಿದ್ದರು.

53 ದೇಶಗಳ 402 ಪರ್ವತಾರೋಹಿಗಳಿಗೆ ಮೌಂಟ್ ಎವರೆಸ್ಟ್ ಏರಲು ಅನುಮತಿ

ಕಠ್ಮಂಡು: ಈ ಬಾರಿಯ ಮೌಂಟ್ ಎವರೆಸ್ಟ್ ಶಿಖರ ಏರಲು 53 ದೇಶಗಳ 402 ಪರ್ವತಾರೋಹಿಗಳಿಗೆ ಅನುಮತಿ ನೀಡಲಾಗಿದೆ. ಇದರಲ್ಲಿ 74 ಮಂದಿ ಮಹಿಳೆಯರೂ ಸೇರಿದ್ದಾರೆ ಎಂದು ನೇಪಾಳದ ಪ್ರವಾಸೋದ್ಯಮ ಇಲಾಖೆ ಹೇಳಿದೆ.

ಈವರೆಗೆ ಇಲಾಖೆಯು 8,848.86 ಮೀಟರ್ ಎತ್ತರದ ಶಿಖರವೇರಲು 41 ಬಾರಿ ಅವಕಾಶ ನೀಡಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 75 ಮಹಿಳೆಯರು, 330 ಪುರುಷರು ಸೇರಿ 414 ಮಂದಿಗೆ ಶಿಖರ ಏರಲು ಅವಕಾಶ ನೀಡಲಾಗಿತ್ತು ಎಂದು ಹೇಳಿದೆ. ಈ ವರ್ಷ ನೇಪಾಳದ ವಿವಿಧ ಶಿಖರಗಳನ್ನು ಏರಲು ನೀಡಿದ್ದ ಅನುಮತಿಯಲ್ಲಿ ಒಟ್ಟು 68.4 ಕೋಟಿ ಗೌರವ ಧನ ಸಂಗ್ರಹವಾಗಿದೆ. ಅದರಲ್ಲಿ ಮೌಂಟ್ ಎವರೆಸ್ಟ್ ಮಾತ್ರ ಏರಲು ನೀಡಿದ ಗೌರವ ಧನದ ಸಂಗ್ರಹ 59.5 ಕೋಟಿ ಆಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೇಪಾಳಿಗರು ಮತ್ತು ವಿದೇಶಿಗರು ಸೇರಿ ಒಟ್ಟು 8 ಸಾವಿರ ಪರ್ವತಾರೋಹಿಗಳು ಈವರೆಗೆ ಮೌಂಟ್ ಎವರೆಸ್ಟ್ ಶಿಖರದ ಪರ್ವತಾರೋಹಣವನ್ನು ಕೈಗೊಂಡಿದ್ದಾರೆ ಎಂದು ಇಲಾಖೆ ಮಾಹಿತಿ ನೀಡಿದೆ.

ಶ್ರವಣದೋಷವುಳ್ಳ ಬಾಲಕ, ಬಾಲಕಿಯರಿಗೆ ಉಚಿತ ಶಾಲಾ ಪ್ರವೇಶ

ಮೈಸೂರು,ಏ.28– ಮೈಸೂರಿನ ತಿಲಕ ನಗರದ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ಸಂಸ್ಥೆಯು ಕರ್ನಾಟಕ ರಾಜ್ಯ ಸಂಸ್ಥೆಯಾಗಿದ್ದು ಸಂಸ್ಥೆಯಲ್ಲಿ ಶ್ರವಣ ದೋಷವುಳ್ಳ, ಕಿವುಡ ಬಾಲಕರಿಗೆ ಉಚಿತ ವಸತಿಯುತ ಹಾಗೂ ಬಾಲಕಿಯರಿಗೆ ಬಾಹ್ಯ ವಿದ್ಯಾರ್ಥಿನಿಯರಾಗಿ ಉಚಿತವಾಗಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಬೋಧನಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯವರು ನಿಗದಿ ಪಡಿಸಿರುವ ಸಾಮಾನ್ಯ ಮಕ್ಕಳಿಗೆ ನೀಡುತ್ತಿರುವ ಶಿಕ್ಷಣವನ್ನೇ ಇಲ್ಲಿಯೂ ಬೋಧಿಸಲಾಗುತ್ತದೆ. ವಿಶೇಷ ಮಕ್ಕಳಿಗೆ ಭಾಷಾ ಕಲಿಕೆಯಲ್ಲಿ ವಿನಯಿತಿ ಇದ್ದು, ಒಟ್ಟಾರೆಯಾಗಿ ಕನ್ನಡ ಭಾಷೆಯೊಂದಿಗೆ ಗಣಿತ ವಿಜ್ಞಾನ ಹಾಗೂ ಸಮಾಜಶಾಸ್ತ್ರ ವಿಷಯವನ್ನು ಮಕ್ಕಳು ಕಲಿಯಬೇಕಾಗಿದೆ.

ಮೇ 29 ರಂದು 2025–26ನೇ ಶೈಕ್ಷಣಿಕ ಸಾಲಿಗೆ 1ನೇ ತರಗತಿಗೆ 05 ವರ್ಷ 05 ತಿಂಗಳು ವಯೋಮಾನದಿಂದ 9 ವರ್ಷದೊಳಗಿನ ಕಿವುಡ ಬಾಲಕ ಬಾಲಕಿಯರು, ವಿಕಲಚೇತನ ಕಾರಣದಿಂದಾಗಿ ಇದುವರೆಗೂ ಶಾಲೆಗೆ ದಾಖಲಾಗದವರನ್ನು ಹಾಗೂ ಈಗಾಗಲೇ ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಕಿವುಡ ಗಂಡು ಮಕ್ಕಳು ಬಯಸಿದ್ದಲ್ಲಿ ಅವರನ್ನು ಸಹ ದಾಖಲು ಮಾಡಿಕೊಳ್ಳಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ತಿಲಕ ನಗರ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ಅಧೀಕ್ಷಕರ ಕಚೇರಿಯ ದೂ. ಸಂ. 0821–2494104, ಅಧೀಕ್ಷಕರ ದೂ.ಸಂ. 94490 10499 ಹಾಗೂ ಮುರಳೀಧರ ಎಂ. 97310 59098, ಚಿಕ್ಕಮಹದೇವ 9036088374 ನ್ನು ಸಂಪರ್ಕಿಸಬಹುದು ಎಂದು ಮೈಸೂರಿನ ತಿಲಕ ನಗರದ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಹತ್ಯಾಕಾಂಡ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ

ಭಯೋತ್ಪಾದಕರ ದಾಳಿಯಲ್ಲಿ ಮೃತರಾದವರಿಗೆ ಸಿಪಿಐ (ಎಂ) ಶ್ರದ್ಧಾಂಜಲಿ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಸಿಪಿಐ(ಎಂ) ವತಿಯಿಂದ ಪಹಲ್ಗಾಮ್ ಭಯೋತ್ಪಾದಕರ ದಾಳಿ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.28(ಪಿಎಂ)– ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಹತ್ಯಾಕಾಂಡ ನಡೆಸಿದ ಉಗ್ರರ ಕೃತ್ಯ ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ ಮೈಸೂರು ನಗರ ಸ್ಥಳೀಯ ಸಮಿತಿ (ಮಾರ್ಕ್ಸ್‌ವಾದಿ, ಸಿಪಿಐ–ಎಂ) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತಲ್ಲದೆ, ಮೊಂಬತ್ತಿ ಬೆಳಗಿಸಿ ಭಯೋತ್ಪಾದಕರ ದಾಳಿಯಲ್ಲಿ ಮೃತರಾದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, 'ಕಾಶ್ಮೀರದಲ್ಲಿ ಶಾಂತಿ ನೆಲೆಸಲೇಬೇಕು, ಅಲ್ಲಿಯ ಜನರೊಂದಿಗೆ ನಾವಿದ್ದೇವೆ'. 'ಯುದ್ಧ ಬೇಡ–ಶಾಂತಿ ಬೇಕು' ಎಂಬಿತ್ಯಾದಿ ಘೋಷಣೆಗಳನ್ನು ಮೊಳಗಿಸಿದರು. ಭಯೋತ್ಪಾದನೆ ನಿರ್ಮೂಲನೆ ಮಾಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ಇದೇ ವೇಳೆ ಮಾತನಾಡಿದ ಸಿಪಿಐ–ಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ದಾಳಿಯಲ್ಲಿ ಅಮಾಯಕರು ಮೃತರಾಗಿದ್ದಾರೆ. ಪೆಹಲ್ಗಾಮ್‌ಗೆ ಪ್ರವಾಸಕ್ಕೆ ಹೋದ ಸುಮಾರು 26 ಮಂದಿ ಪ್ರವಾಸಿಗರನ್ನು ಅಮಾನುಷವಾಗಿ ಹತ್ಯೆ ಮಾಡಲಾಗಿದೆ. ಆ ಮೂಲಕ ಇಡೀ ದೇಶದಲ್ಲಿ ಸೂತಕದ ಛಾಯೆ ಮನೆ ಮಾಡಿದೆ. ಈ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ನಮ್ಮ ಪಕ್ಷ ಸಾಂತ್ವನ ತಿಳಿಸುವುದಲ್ಲದೆ, ಅವರೊಂದಿಗೆ ನಿಲ್ಲಲಿದೆ ಎಂದು ತಿಳಿಸಿದರು.

ಭಯೋತ್ಪಾದಕರ ದಾಳಿಯಿಂದ ಜಮ್ಮು ಮತ್ತು ಕಾಶ್ಮೀರ ಮತ್ತಷ್ಟು ನಲುಗುವಂತಾಗಿದೆ. ಇಲ್ಲಿ ಭಯೋತ್ಪಾದನೆಯನ್ನು ನಿಗ್ರಹ ಮಾಡುತ್ತೇವೆ ಎಂದು ಹೇಳಿದ ಕೇಂದ್ರ ಸರ್ಕಾರಕ್ಕೆ ಈ ದಾಳಿಯ ಬಗ್ಗೆ ಮುನ್ಸೂಚನೆ ದೊರೆಯಲಿಲ್ಲ ಏಕೆ? ಇದು ಭದ್ರತಾ ವೈಫಲ್ಯ ತಾನೆ ಎಂದು ಕೇಂದ್ರ ಸರ್ಕಾರವನ್ನು ಕೇಳಬಯಸುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಭಯೋತ್ಪಾದನೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಈ ಭಯೋತ್ಪಾದನಾ ಕೃತ್ಯವನ್ನು ತನಿಖೆಗೆ ಒಳಪಡಿಸಿ ಆದಷ್ಟು ಶೀಘ್ರದಲ್ಲಿ ದೇಶದ ಮುಂದೆ ಸತ್ಯಾಂಶವನ್ನು ಬಿಚ್ಚಿಡಬೇಕು. ಕೇಂದ್ರ ಸರ್ಕಾರ ಈ ವಿಚಾರವನ್ನು ರಾಜಕೀಯ ದೃಷ್ಟಿಯಲ್ಲಿ ನೋಡದೇ ಮಾನವೀಯ ನೆಲೆಯಲ್ಲಿ ನೋಡಬೇಕು ಎಂದು ಒತ್ತಾಯಿಸಿದರು. ಸಿಪಿಐ (ಎಂ) ಮೈಸೂರು ನಗರ ಸ್ಥಳೀಯ ಸಮಿತಿ ಕಾರ್ಯದರ್ಶಿ ಎನ್.ಸುಬ್ರಹ್ಮಣ್ಯ, ಮುಖಂಡರಾದ ರಾಜೇಂದ್ರ, ಮೆಹಬೂಬ್, ಜಯರಾಂ, ಬಾಲಾಜಿರಾವ್, ಬಲರಾಂ, ಎಲ್.ಜಗನ್ನಾಥ್, ವಿನಾಯಕ, ಸುಬ್ರಹ್ಮಣ್ಯ, ಕೃಷ್ಣಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಾಜಮಂಗಲದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ

ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ತಿ.ನರಸೀಪುರ, ಏ.28– ಮೈಸೂರು ತಾಲೂಕಿನ ವಾಜಮಂಗಲದಲ್ಲಿ ಸಂವಿಧಾನ ಶಿಲ್ಪಿ, ಶೋಷಿತ ಸಮುದಾಯಗಳ ವಿಮೋಚಕ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅವಮಾನಿಸಿರುವ ಕಿಡಿಗೇಡಿಗಳ ಬಂಧಿಸಿ, ಕಠಿಣ ಶಿಕ್ಷೆ ನೀಡುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.



ಅಂಬೇಡ್ಕರ್‌ರನ್ನು ಅವಮಾನಿಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರಿನ ಅಂಬೇಡ್ಕರ್ ಪುತ್ಥಳಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನೆತ್ತಿ ಸುಡುವ ಬಿಸಿಲಿನ ನಡುವೆ ಪ್ರತಿಭಟನೆ ಪ್ರಾರಂಭಿಸಿ ಆಧುನಿಕ ಭಾರತದ ನಿರ್ಮಾತೃ ಅಂಬೇಡ್ಕರ್ ಅವರನ್ನೇ ಅವಮಾನಸುತ್ತಿರುವ ವಿಕೃತಿ ಮನಸ್ಸಿನ ಕಿಡಿಗೇಡಿಗಳ ವಿರುದ್ಧ ಘೋಷಣೆ ಕೂಗಿದರು. ಅಲ್ಲದೇ ಘಟನೆ ನಡೆದು ಹಲವು ದಿನಗಳಾದರೂ ಕಿಡಿಗೇಡಿಗಳನ್ನು ಪತ್ತೆ ಹಚ್ಚದ ಜಿಲ್ಲಾಡಳಿದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಒಕ್ಕೂಟದ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಸರ್ವರು ಸಮಾಧಾನದಿಂದ ಜೀವನ ನಡೆಸಲಿ. ಕಾನೂನು ಸುವ್ಯವಸ್ಥೆಯಿಂದ ಪ್ರತಿಯೊಬ್ಬರೂ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲಿ ಎಂದು ಅತ್ಯುತ್ತಮ ಸಂವಿಧಾನ ರಚನೆ ಮಾಡಿದ ಅಂಬೇಡ್ಕರ್ ಅವರ ಬಗ್ಗೆ ಕೆಲವರಲ್ಲಿ ತಪ್ಪು ಭಾವನೆ ಮತ್ತು ವಿಕೃತಿ ಮನಸ್ಸು ಇರುವುದರಿಂದ ಅಂಬೇಡ್ಕರ್ ಅವರನ್ನು ಅಪಮಾನಿಸುವ ಘಟನೆಗಳು ನಡೆಯುತ್ತಿವೆ. ವಾಜಮಂಗಲದಲ್ಲಿ ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿ ವಿಕೃತಿ ಮೆರೆದಿರುವ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು. ಅಲ್ಲದೇ ಜಿಲ್ಲೆಯಿಂದ ಗಡಿಪಾರು ಮಾಡಬೇಕು. ಅಲ್ಲಿವರೆಗೂ ಹೋರಾಟ ನಿರಂತರವಾಗಿ ನಡೆಯಲಿದೆ. ಮಂಗಳವಾರ ಅಂಬೇಡ್ಕರ್ ಅಭಿಮಾನಿಗಳು ಆಯೋಜಿಸಿರುವ ಪಾದಯಾತ್ರೆ ಚಳವಳಿಯಲ್ಲಿ ಒಕ್ಕೂಟದ ಪದಾಧಿಕಾರಿಗಳೆಲ್ಲರೂ ಭಾಗವಹಿಸಲಿದ್ದಾರೆ ಎಂದರು.

ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಸೇರಿದಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಎಸ್.ಚಂದ್ರಶೇಖರ್ ಹಾಗೂ ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರ ಮೂರ್ತಿ ಮಾತನಾಡಿದರು. ನಂತರ ತಹಸೀಲ್ದಾರ್ ಸುರೇಶ್ ಆಚಾರ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಆಲಗೂಡು ಶಿವಣ್ಣ, ಸೋಸಲೆ ಗಂಗಾಧರ, ನಂಜುಂಡಯ್ಯ, ಕನ್ನಾಯಕನಹಳ್ಳಿ ಮರಿಸ್ವಾಮಿ, ಕೇಶವಮೂರ್ತಿ, ನಿಲಸೋಗೆ ಕುಮಾರ, ಎಚ್ ಡಿ ರಾಜೇಶ್, ರಂಗಸ್ವಾಮಿ, ಬಸವರಾಜು, ಶಾಂತಕುಮಾರ್ ಹಾಗೂ ಇತರರಿದ್ದರು.

ಭಾಷೆ, ಸಂಸ್ಕೃತಿ ಒಂದು ನಾಣ್ಯದ 2 ಮುಖಗಳು

ಪ್ರೊ.ಬಿ.ವಿ.ವಸಂತಕುಮಾರ್ ಅಭಿಪ್ರಾಯ

ಹುಣಸೂರು, ಏ.28– ಸಾಹಿತ್ಯದ ಮೂಲಕ ಭಾಷೆ ಕಲಿಯಬಹುದು ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಬಿ.ವಿ.ವಸಂತಕುಮಾರ್ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಕನ್ನಡ ವಿಭಾಗದಿಂದ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಸ್ಕೃತಿ ಪರಿಕಲ್ಪನೆ ಬಹುಶಾಸ್ತ್ರೀಯ ಅಧ್ಯಯನ ಶರೀಫರ ತತ್ವ ಪದಗಳು ಮತ್ತು ವಸಾಹತುಶಾಹಿ ವಿಷಯದ ಕುರಿತು ಅವರು ಮಾತನಾಡಿದರು.


ಕಾರ್ಯಕ್ರಮದಲ್ಲಿ ಪ್ರೊ.ಬಿ.ವಿ.ವಸಂತಕುಮಾರ್ ಮಾತನಾಡಿದರು.


ಸಾಹಿತ್ಯಕ್ಕೆ ತನ್ನದೇ ಆದ ವಸ್ತು, ಹಾಗೆಯೇ ಒಂದು ಶಿಸ್ತು ಇದೆ. ಸಾಹಿತ್ಯ ಜೀವನದ ಒಂದು ಅಂಗ. ಇದನ್ನು ಸಾಹಿತ್ಯದ ಮೂಲಕ ಅರ್ಥಮಾಡಿಕೊಳ್ಳಬಹುದು. ಸಾಹಿತ್ಯದಲ್ಲಿ ಮಣ್ಣು, ನೀರು, ಕಲ್ಲು, ಪ್ರಕೃತಿ ಸುತ್ತಮುತ್ತಲಿನ ಪರಿಸರ ಎಲ್ಲವೂ ಇರುತ್ತದೆ. ಇದನ್ನು ಸಾಹಿತ್ಯ ಕಟ್ಟಿಕೊಡುತ್ತದೆ. ಸಂಸ್ಕೃತಿ ಕೇವಲ ಸಾಹಿತ್ಯಕ್ಕೆ ಮಾತ್ರ ಮೀಸಲಲ್ಲ. ಅದು ಬಹುಶಾಸ್ತ್ರೀಯವಾದದ್ದು, ಬೇರೆ ಬೇರೆ ವಿಷಯದಲ್ಲಿ ಸಾಂಸ್ಕೃತಿಕ ಅಧ್ಯಯನ ಭಿನ್ನವಾಗಿರುತ್ತದೆ. ಒಂದು ವಸ್ತುವಿಗೆ ಬೇರೆ ಬೇರೆ ಹೆಸರು ಕೊಡುವುದು ಬೌದ್ಧಿಕ ಕ್ರಿಯೆ. ಭಾಷೆ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳು. ಸಂಸ್ಕೃತಿ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ವಸ್ತು ಪದದ ಅರ್ಥ, ಸ್ವರೂಪ, ಸ್ವಭಾವ ಇವುಗಳೆಲ್ಲವನ್ನು ಪರಿಕಲ್ಪನೆ ಒಳಗೊಂಡಿರುತ್ತದೆ. ಮುಖ್ಯವಾಗಿ ಪ್ರಕೃತಿ, ಆಕೃತಿ, ಸಂಸ್ಕೃತಿ, ವಿಕೃತಿ ಇವುಗಳನ್ನು ಅರ್ಥೈಸಿಕೊಳ್ಳಲು ಬೌದ್ಧಿಕ ಕ್ರಿಯೆ ಮುಖ್ಯ. ನಂತರ ಅದೊಂದು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಗಾಗುತ್ತದೆ. ಹುಟ್ಟಿನಿಂದ ಸಾಯುವ ತನಕ ನಡೆಯುವ ಬದುಕಿನ ಚಿಂತನಾ ಕ್ರಮವೇ ಸಂಸ್ಕೃತಿ. ಮನುಷ್ಯನ ಬುದ್ಧಿಯ ಆಲೋಚನೆಯ ಭಾಗ ಬೌದ್ಧಿಕ ಚಿಂತನೆ ಎನ್ನುತ್ತಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರೊ.ಮಂಜು ಮಾತನಾಡಿ, ಇಂತಹ ಉಪನ್ಯಾಸಗಳು ಹೆಚ್ಚು ನಡೆಯಬೇಕು. ಕನ್ನಡ ಸಾಹಿತ್ಯದ ಅಧ್ಯಯನದ ಮಹತ್ವ ತಿಳಿದುಕೊಂಡು ಒಂದು ಪದದೊಳಗೆ ಮೌಲ್ಯಯುತವಾದ ಅರ್ಥದ ಅಧ್ಯಯನವಿದೆ ಎಂಬುದು ಇಂದಿನ ಉಪನ್ಯಾಸದಿಂದ ತಿಳಿದು ಬಂದಿದೆ. ಸಾಹಿತ್ಯ ಓದುವ ಅಭಿರುಚಿ ಇಂತಹ ಉಪನ್ಯಾಸದಿಂದ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಪ್ರಾಧ್ಯಾಪಕರಾದ ರಾಜಶೇಖರ್, ಬಸವಲಿಂಗಸ್ವಾಮಿ, ಡಾ.ನಂಜುಂಡಸ್ವಾಮಿ, ಡಾ.ಕೆ.ಪಿ.ಪ್ರಸನ್ನ, ಹನುಮಂತಪ್ಪ, ಕ್ಯೂಎಸಿ ಸಂಚಾಲಕರಾದ ಪ್ರತಿಭಾ, ಜೆನಿಫರ್, ಅತಿಥಿ ಉಪನ್ಯಾಸಕರಾದ ಸಹನ, ಸ್ಮಿತಾ ಉಪಸ್ಥಿತರಿದ್ದರು.

ಕಲ್ಯಾಣವೃಷ್ಟಿಸ್ತವ ಸ್ತೋತ್ರ ಪಾರಾಯಣ ಮಹಾಭಿಯಾನ

ಬನ್ನೂರು, ಏ.28– ಪಟ್ಟಣದ ಶ್ರೀಕೋದಂಡರಾಮ ದೇವಾಲಯದಲ್ಲಿ ಕಲ್ಯಾಣವೃಷ್ಟಿಸ್ತವ ಸ್ತೋತ್ರ ಪಾರಾಯಣ ಮಹಾಭಿಯಾನ ಅಂಗವಾಗಿ ಭಾನುವಾರ ಯಡತೊರೆ ಮಠದ ಶ್ರೀಬ್ರಹ್ಮಾನಂದ ಭಾರತೀಶ್ರೀಗಳು ಸರ್ವರಿಗೂ ಅನುಗ್ರಹ ವಚನ ನೀಡಿದರು.


ಬ್ರಹ್ಮಾನಂದ ಭಾರತಿ ಶ್ರೀಗಳು ಅನುಗ್ರಹ ವಚನ ನೀಡಿದರು.

ಈ ವೇಳೆ ಮಾತನಾಡಿದ ಶ್ರೀಗಳು, ಕಲ್ಯಾಣವೃಷ್ಟಿಸ್ತವ, ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರ, ಲಕ್ಷ್ಮೀನರಸಿಂಹ ಕರಾವಲಂಬ ಸ್ತೋತ್ರದ ವಿಶೇಷ ಫಲದ ಬಗ್ಗೆ ತಿಳಿಸಿ ಎಲ್ಲರೂ ಕಲಿಯುವಂತೆ ತಿಳಿಸಿದರು. ಅಲ್ಲದೇ ಸ್ತೋತ್ರ ಕಲಿತವರು ಈ ಅಭಿಯಾನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇತರರ ಸ್ತೋತ್ರ ಕಲಿಕೆಗೆ ಸಹಕಾರ ನೀಡುವಂತೆ ತಿಳಿಸಿದರು.

ವಿದುಶೇಖರ ಭಾರತೀ ಸ್ವಾಮೀಜಿ ಅವರ ಸಂಕಲ್ಪದಂತೆ 2024ರ ಮಹಾಶಿವರಾತ್ರಿಯಂದು ಅಭಿಯಾನ ಆರಂಭವಾಗಿದ್ದು, ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಆಸ್ತಿಕರು ತಮ್ಮನ್ನು ಈ ಅಭಿಯಾನದಲ್ಲಿ ತೊಡಗಿಸಿಕೊಂಡಿದ್ದಾರೆ. ಇದೀಗ ಮೈಸೂರು ಮತ್ತು ತಾಲೂಕಿನಾದ್ಯಂತ ಮಹಾಭಿಯಾನ ನಡೆಯುತ್ತಿದ್ದು, ಈ ಸ್ತೋತ್ರ ಪ್ರತಿಯೊಬ್ಬರಿಗೂ ತಲುಪಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಎಲ್ಲರೂ ಪಾರಾಯಣ ಮಾಡಿ, ಸ್ತೋತ್ರ ಸಮರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಆದಿಶಂಕರಾಚಾರ್ಯರ ಮತ್ತು ಉಭಯ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾಗುವಂತೆ ತಿಳಿಸಿದರು. ಈ ವೇಳೆ ಪ್ರಮುಖ ಅರ್ಚಕರಾದ ಕೃಷ್ಣಸ್ವಾಮಿ, ಶ್ರೀನಿವಾಸ, ಜಗದೀಶ್, ವೆಂಕಟೇಶ್ ಪ್ರಸಾದ್, ಉದಯ್, ಜಯರಾಮ ಭಟ್, ಎಂ.ಪ್ರಮೋದ್, ವೆಂಕಟೇಶ್ ಸೇರಿದಂತೆ ಹಲವರಿದ್ದರು.

ಮೇ 1, ದೇವಾಲಯ ಲೋಕಾರ್ಪಣೆ

ಹುಣಸೂರು, ಏ.28– ತಾಲೂಕಿನ ಬೋಳನಹಳ್ಳಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀ ಮಾತೆ ಮಾಳಿಗೇಶ್ವರಿ ಸಪ್ತಪದಿ ಮಂದಿರ ಮೇ 1ರಂದು ಲೋಕಾರ್ಪಣೆಗೊಳ್ಳಲಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ವಕೀಲ ಬಿ.ಎಸ್.ಯೋಗಾನಂದ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಾಲಯವನ್ನು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಗಡೆ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀಸೋಮೇಶ್ವರನಾಥ ಸ್ವಾಮೀಜಿ ವಹಿಸಲಿದ್ದು, ಅಧ್ಯಕ್ಷತೆಯನ್ನು ಜಸ್ಟಿಸ್ ಚಂದ್ರಶೇಖರಯ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಸ್ಟಿಸ್ ಶ್ರೀನಿವಾಸೇಗೌಡ, ಸಿ.ಎನ್.ಕಾಮತ್ ಮತ್ತು ಹಿರಿಯ ವಕೀಲ ನಾಗರಾಜ್ ಪಾಲ್ಗೊಳ್ಳಲಿದ್ದಾರೆ ಎಂದರು.

ನಂಜನಗೂಡಲ್ಲಿ ಎಂಎಲ್‌ಎ ಕ್ರಿಕೆಟ್ ಪಂದ್ಯಾವಳಿ

ಚೆಸ್ಕಾಂ ಚಾಂಪಿಯನ್, ಅಂಚೆ ಇಲಾಖೆ ರನ್ನರ್‌ಅಪ್

ನಂಜನಗೂಡು, ಏ.28– ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಎಂಎಲ್‌ಎ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಅಂಚೆ ಮತ್ತು ತಂತಿ ಇಲಾಖೆ ತಂಡವನ್ನು 26 ರನ್‌ಗಳಿಂದ ಮಣಿಸಿದ ಚೆಸ್ಕಾಂ ತಂಡ ಆಕರ್ಷಕ ಟ್ರೋಫಿಯೊಂದಿಗೆ 50 ಸಾವಿರ ನಗದು ಬಹುಮಾನದೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು. ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟ ಅಂಚೆ ಮತ್ತು ತಂತಿ ಇಲಾಖೆ ತಂಡ ಟ್ರೋಫಿಯೊಂದಿಗೆ 25 ಸಾವಿರ ನಗದು ಬಹುಮಾನ ಪಡೆಯಿತು.


ಎಂಎಲ್‌ಎ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ಚೆಸ್ಕಾಂ ತಂಡಕ್ಕೆ ಬಹುಮಾನ ವಿತರಿಸಲಾಯಿತು.

ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಮಾಜಿ ಶಾಸಕ ಕೇಶವಮೂರ್ತಿ ಮಾತನಾಡಿ, ಶಾಸಕ ದರ್ಶನ್ ಅವರ ಹುಟ್ಟುಹಬ್ಬದ ಪ್ರಯುಕ್ತ ಸದಾ ಸಾರ್ವಜನಿಕ ಸೇವೆಯಲ್ಲಿ ಒತ್ತಡದ ಕೆಲಸದಲ್ಲಿ ನಿರತರಾಗುವ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಪೊಲೀಸ್, ಅಂಚೆ, ಚೆಸ್ಕಾಂ, ಕಂದಾಯ, ಸರ್ವೆ ಹಾಗೂ ನೀರಾವರಿ ಇಲಾಖೆಗಳ ಸಿಬ್ಬಂದಿ 2 ದಿನಗಳ ಕಾಲ ನಡೆದ ಪಂದ್ಯಾವಳಿಯಲ್ಲಿ ಪಾಲ್ಗೊಂಡು ಪ್ರೇಕ್ಷಕರನ್ನು ರಂಜಿಸಿದ್ದೀರಿ. ಮುಖ್ಯವಾಗಿ ನ್ಯಾಯಾಂಗ ಇಲಾಖೆ ನ್ಯಾಯಾಧೀಶರು ಕ್ರೀಡಾಂಗಣದಲ್ಲಿ ಆಟವಾಡುವ ಮೂಲಕ ಜನಸಾಮಾನ್ಯರೊಂದಿಗೆ ಬೆರೆತಿದ್ದಾರೆ. ಅಲ್ಲದೇ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್ ಪಂದ್ಯಾವಳಿಯಲ್ಲಿ ನಾಯಕನಾಗಿ ತಮ್ಮ ತಂಡವನ್ನು ಮುನ್ನಡೆಸಿದ್ದು ಜನರ ಮೆಚ್ಚುಗೆಗೆ ಪಾತ್ರವಾಯಿತು. ನಂಜನಗೂಡು ಕ್ರೀಡಾಪಟುಗಳಿಗೆ ಹೆಸರುವಾಸಿಯಾಗಿದೆ. ಫುಟ್ಬಾಲ್, ಕ್ರಿಕೆಟ್, ಖೋಖೋ, ಕುಸ್ತಿ ಸೇರಿದಂತೆ ಹಲವು ಕ್ರೀಡೆಗಳಲ್ಲಿ ನಮ್ಮೂರಿನ ಕ್ರೀಡಾಪಟುಗಳು ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಅಂತಹ ಕ್ರೀಡಾ ವೈಭವ ಮರುಕಳಿಸಬೇಕು. ಸೋಲು–ಗೆಲುವುಗಳನ್ನು ಸಮನಾಗಿ ಸ್ವೀಕರಿಸಿ ಕ್ರೀಡಾಭಿಮಾನ ಮರೆದ ಕ್ರೀಡಾಪಟುಗಳು ಹಾಗೂ ಆಟವನ್ನು ವೀಕ್ಷಿಸಿ ಕ್ರೀಡಾಪಟುಗಳನ್ನು ಬೆಂಬಲಿಸಿದ ನಗರದ ಜನತೆಗೆ ಧನ್ಯವಾದಗಳನ್ನು ತಿಳಿಸಿದರು.

ಅಂಚೆ ಇಲಾಖೆ ವ್ಯವಸ್ಥಾಪಕ ಮಂಜುನಾಥ್ ನಾಯಕ ಮಾತನಾಡಿ, ವಿವಿಧ ಇಲಾಖೆಗಳ ಸಿಬ್ಬಂದಿಗಾಗಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದ ಶಾಸಕರ ಕ್ರೀಡಾ ಪ್ರೇಮ ಮೆಚ್ಚಬೇಕು. ಒತ್ತಡದ ಕೆಲಸದ ನಡುವೆ ವಿವಿಧ ಇಲಾಖೆಯವರು ಉತ್ತಮ ಆಟ ಪ್ರದರ್ಶಿಸಿದ್ದಾರೆ. ಪಂದ್ಯಾವಳಿಯಿಂದ ಉತ್ತಮ ಕ್ರೀಡಾಪಟುಗಳು ಬೆಳಕಿಗೆ ಬರುವಂತಾಯಿತು ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಆಯೋಜಕ ಎಂ.ಡಿ. ಬಾಲರಾಜು, ಮುಖಂಡರಾದ ಎನ್.ಎಂ. ಮಂಜುನಾಥ್, ನಾಗರಾಜಯ್ಯ, ಹುಂಡಿ ನಾಗರಾಜು, ರಂಗಸ್ವಾಮಿ, ಎನ್.ಎಸ್. ಮಾದಪ್ಪ, ಮನೋಜ್, ವೀರಭದ್ರ, ಮಹೇಂದ್ರ, ಉಮೇಶ್, ರಾಹುಲ್, ಚಿರು ಉಪಸ್ಥಿತರಿದ್ದರು.

ಮೂಲಭೂತ ಹಕ್ಕು ನೀಡಿದ ಅಂಬೇಡ್ಕರ್‌ರನ್ನು ಸ್ಮರಿಸಿ

ಭೀಮ ಸಂಭ್ರಮದಲ್ಲಿ ಜಿಪಂ ಮಾಜಿ ಸದಸ್ಯ ಕೆ.ಮಹದೇವ

ತಿ.ನರಸೀಪುರ, ಏ.28– ವೈಚಾರಿಕತೆ ಮತ್ತು ವೈಜ್ಞಾನಿಕತೆ ಮೈಗೂಡಿಸಿಕೊಳ್ಳಲು ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಸಂವಿಧಾನದ ಮೂಲಕ ಸಮಾನತೆಯ ಮೂಲಭೂತ ಹಕ್ಕುಗಳನ್ನು ಕಲ್ಪಿಸಿಕೊಟ್ಟ ಅಂಬೇಡ್ಕರ್ ಅವರನ್ನು ನಿತ್ಯ ಸ್ಮರಿಸಬೇಕು ಎಂದು ಜಿಪಂ ಮಾಜಿ ಸದಸ್ಯ ಕೆ.ಮಹದೇವ ತಿಳಿಸಿದರು.


ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಉದ್ಘಾಟಿಸಿದರು.

ತಾಲೂಕಿನ ಬಿಲಿಗೆರೆಹುಂಡಿ ಗ್ರಾಮದಲ್ಲಿ ಜೈ ಭೀಮ್ ಯುವಕರ ಸಂಘದಿಂದ ಹಮ್ಮಿಕೊಳ್ಳಲಾಗಿದ್ದ ಭೀಮ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲವೂ ದುಬಾರಿ ಆಗುತ್ತಿರುವ ಪ್ರಸ್ತುತ ದಿನಗಳಲ್ಲಿ ಹಬ್ಬದ ಸಂಭ್ರಮಕ್ಕೆ, ಅನಗತ್ಯ ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಜೀವನ ಮಟ್ಟ ಸುಧಾರಿಸಲು ಆರ್ಥಿಕ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಕಠಿಣ ಪರಿಶ್ರಮದ ಮೂಲಕ ಅಗಾಧವಾದ ಜ್ಞಾನಗಳಿಸಿದ ಅಂಬೇಡ್ಕರ್ ಅವರನ್ನು ಜಗತ್ತಿನಾದ್ಯಂತ ಗೌರವಿಸಲಾಗುತ್ತಿದೆ. ಜೀವನದ ಸಾಧನೆಗೆ ಅಂಬೇಡ್ಕರ್ ಅವರೇ ಪ್ರೇರಣೆಯಾಗಬೇಕು. ಸಾಮಾಜಿಕ ಅಸಮಾನತೆ ನಿವಾರಿಸಿ, ಸಮಾನತೆಯ ಸಮಾಜ ನಿರ್ಮಾಣ ಮಾಡಿ ಪ್ರಬುದ್ಧ ಭಾರತ ಕಟ್ಟಬೇಕೆಂದು ಸಂವಿಧಾನದಲ್ಲಿ ಎಲ್ಲಾ ವರ್ಗದ ಜನರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಎವಿಎಸ್‌ಎಸ್ ನಿರ್ದೇಶಕ ಸಂಪತ್‌ಕುಮಾರ್ ಮಾತನಾಡಿ, ಮೌಢ್ಯತೆ ಬದಿಗಿಟ್ಟು ವೈಚಾರಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರಲ್ಲದೆ ಅಂಬೇಡ್ಕರ್ ವಿಚಾರಗಳನ್ನು ತಿಳಿಸಿಕೊಟ್ಟರು. ಆರಂಭದಲ್ಲಿ ಸಂವಿಧಾನ ಪೀಠಿಕೆ ಪ್ರಮಾಣ ವಚನ ಸ್ವೀಕರಿಸಲಾಯಿತು. ಭೀಮ ಸಂಭ್ರಮ ಹಿನ್ನೆಲೆಯಲ್ಲಿ ಅಲಂಕರಿಸಿದ ತೆರೆದ ವಾಹನದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ಸಹಪಂಕ್ತಿ ಭೋಜನ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಯಶಸ್ವಿಗೆ ಬಸವ ಯುವಕರ ಸಂಘ ಸೇರಿದಂತೆ ಕನಕ ಯುವಕರ ಸಂಘ ಹಾಗೂ ವಾಲ್ಮೀಕಿ ಯುವಕರ ಸಂಘದ ಸಹಕಾರ ಪಡೆಯಲಾಗಿತ್ತು.

ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಎಂ.ರೇವಣ್ಣ, ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ತುಂಬಲ ರಾಮಣ್ಣ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ, ಉಪಾಧ್ಯಕ್ಷ ಎಂ.ವೆಂಕಟೇಶ್, ಯಜಮಾನ್ ಶ್ರೀನಿವಾಸ್, ಡೇರಿ ಅಧ್ಯಕ್ಷ ಮಹದೇವಸ್ವಾಮಿ, ನಾಡಗೌಡ ಬಸವರಾಜಪ್ಪ, ಗ್ರಾಪಂ ಮಾಜಿ ಅಧ್ಯಕ್ಷೆ ಚಂದ್ರಮ್ಮ ಏಳುಮಲೆ ಮಂಜು, ಸದಸ್ಯ ಚಾರಿ ಮಹೇಶ್, ಪಾಪನಾಯಕ, ಅಂಗಡಿ ರಘು, ಯಜಮಾನರಾದ ಬಸವರಾಜ ನಾಯಕ, ಗಿರಿಸ್ವಾಮಿ, ಜೈ ಭೀಮ್ ಯುವಕರ ಸಂಘದ ಅಧ್ಯಕ್ಷ ಸಿದ್ದರಾಜು, ಉಪಾಧ್ಯಕ್ಷ ಬಿ.ಎಂ.ಶಿವಕುಮಾರ, ಗೌರವಾಧ್ಯಕ್ಷ ಬಿಳಿಗಿರಿ, ಪದಾಧಿ ಕಾರಿಗಳಾದ ಗೋಪಾಲ, ಮಹೇಶ, ಮೋಹನ, ಪ್ರವೀಣ್, ಮನೋಜ್, ಗೋಪಾಲ್, ಮನು, ಸಂಜು, ಮಲ್ಲೇಶ, ರಮೇಶ್, ಕುಮಾರ್, ಕೆಂಚ, ಪ್ರೇಮ್, ದಾಸ್, ಪುಟ್ಟು, ಗಂಗಾಧರ, ಗೌತಮ್, ಲತೇಶ್, ಸಿದ್ದಯ್ಯ, ಶರತ್ ಸೇರಿದಂತೆ ಮಹಿಳಾ ಸಂಘದ ಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಇದ್ದರು.

ಅಕ್ರಮ ಮದ್ಯ ಮಾರಾಟ ತಡೆಯಲು ಕ್ರಮ ಕೈಗೊಳ್ಳಿ

ಅಂತರಸಂತೆ ಪೊಲೀಸರಿಗೆ ಸಿ.ಎನ್.ರಮೇಶ್ ಸೂಚನೆ

ಹೆಚ್.ಡಿ.ಕೋಟೆ, ಏ.28– ಮುಗ್ಧ ಆದಿವಾಸಿ ಜನರ ಬಲಿ ಪಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ತಡೆಯಲು ಕಠಿಣ ಕ್ರಮ ಕೈಗೊಳ್ಳುವಂತೆ ಅಂತರ ಸಂತೆ ಪೊಲೀಸ್ ಅಧಿಕಾರಿಗಳಿಗೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪೊಲೀಸ್ ಉಪ ಅಧೀಕ್ಷಕ ಸಿ.ಎನ್.ರಮೇಶ್ ಸೂಚಿಸಿದರು.


ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪೊಲೀಸ್ ಉಪ ಅಧೀಕ್ಷಕ ಸಿ.ಎನ್.ರಮೇಶ್ ಹಾಡಿ ನಿವಾಸಿಗಳ ಸಮಸ್ಯೆ ಆಲಿಸಿದರು.

ತಾಲೂಕಿನ ಸೀಗೂರು ಹಾಡಿಗಳಿಗೆ ಭೇಟಿ ನೀಡಿ ಪೊಲೀಸ್ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿ ಮಾತನಾಡಿದ ಅವರು, ಹಾಡಿಯ 110 ಕುಟುಂಬದಲ್ಲಿ ಬಹುತೇಕ ಎಲ್ಲರೂ ವಲಸೆ ಕೂಲಿ ಕೆಲಸಕ್ಕೆ ತೆರಳಿದ್ದಾರೆ. ಹತ್ತಾರು ಮಂದಿ ಅಕ್ರಮ ಮದ್ಯ ಸೇವಿಸಿ ಜೀವ ಕಳೆದುಕೊಂಡಿದ್ದಾರೆ. ಗ್ರಾಮದಲ್ಲಿ ಕೇವಲ ಏಳೆಂಟು ವಯೋವೃದ್ಧರು ಮಾತ್ರ ವಾಸಿಸುತ್ತಿದ್ದಾರೆ ಎಂದರು.

ಇದೇ ವೇಳೆ ತಾಲೂಕಿನ ಬಳ್ಳೆಹಾಡಿ, ಗೋಳೂರು ಹಾಡಿ, ಹುಣಸೇಕುಪ್ಪೆಹಾಡಿ, ಪೆಂಜಹಳ್ಳಿ ಸೇರಿದಂತೆ ಇತರ ಹಾಡಿಗಳಿಗೆ ಭೇಟಿ ನೀಡಿ ಸ್ಥಳೀಯರಿಂದ ಸಮಸ್ಯೆಗಳನ್ನು ಆಲಿಸಿ ಅವುಗಳ ನಿವಾರಣೆಗೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಪೊಲೀಸ್ ಇಲಾಖೆ ಸಿಬ್ಬಂದಿಗಳಾದ ನಾಗೇಂದ್ರ, ಸುಮತಿ, ಶಿವಕುಮಾರ್, ಹಾಡಿ ಮುಖಂಡರಾದ ಭೈರಾ, ಭಾಸ್ಕರ್, ಹೊಸಪ್ಪ ಕೆಂಚಮ್ಮ, ಮಂಜುಳಾ, ಗೌರಿ, ನೀಲಮ್ಮ, ಲೋಕೇಶ, ರವಿ, ಕೆಂಪ, ಲಕ್ಷ್ಮಣ, ನಾಗರಾಜು, ಕೃಷ್ಣಪ್ಪ, ಚಂದ್ರ, ಮಹೇಂದ್ರ ಇನ್ನಿತರರಿದ್ದರು.

ದತ್ತಿನಿಧಿ ಪ್ರಶಸ್ತಿಗೆ ಆಯ್ಕೆ



ಬೆಟ್ಟದಪುರ, ಏ.28– ಪಿರಿಯಾಪಟ್ಟಣ ತಾಲೂಕಿನ ಚಪ್ಪರದಹಳ್ಳಿ ಗ್ರಾಮದ ಪತ್ರಕರ್ತ ಸಿ.ಜಿ.ಪುನೀತ್ ಅವರು ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದಿಂದ ಕೊಡಮಾಡುವ ದತ್ತಿನಿಧಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಕರ್ನಾಟಕ ಮಾತ್ರವಲ್ಲದೇ ಕೇರಳ ಜನಮನ್ನಣೆಗೆ ಪಾತ್ರವಾಗಿದೆ. ಪ್ರತಿವರ್ಷ ರಾಜ್ಯದ ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ದತ್ತಿನಿಧಿ ಪ್ರಶಸ್ತಿ ನೀಡುತ್ತಾ ಬಂದಿದ್ದು, ಪ್ರಸ್ತುತ ಹಿರಿಯ ಆರ್ಥಿಕ ತಜ್ಞ ಸುಧೀರ್ ಕುಮಾರ್ ಶೆಟ್ಟಿ ಇವರು ನೀಡುವ ದತ್ತಿನಿಧಿ ಪ್ರಶಸ್ತಿಗೆ ಸಿ.ಜಿ.ಪುನೀತ್ ಆಯ್ಕೆಯಾಗಿದ್ದಾರೆ. ಮೇ 3ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ರವಿ ನಾಯ್ಕಪು ತಿಳಿಸಿದ್ದಾರೆ.

ಮೇ 11ಕ್ಕೆ ಸಹಕಾರ ಸಂಘದ ಚುನಾವಣೆ

ಹುಣಸೂರು, ಏ.28– ಪಟ್ಟಣದ ಮಹಾಬೋಧಿ ಡಾ.ಬಿ.ಆರ್.ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ ಮೇ 11ರಂದು ನಡೆಯಲಿದೆ.

ಸಂಘದ ಕಚೇರಿಯಲ್ಲಿ ಮೇ 3 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಸದರಿ ಚುನಾವಣೆ ಪ್ರಕ್ರಿಯೆ ಸಂಬಂಧ ಈಗಾಗಲೇ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಚುನಾವಣಾ ವೇಳಾಪಟ್ಟಿ ರವಾನಿಸಲಾಗಿದೆ. ಒಂದು ವೇಳೆ ಚುನಾವಣಾ ವೇಳಾಪಟ್ಟಿ ನಿಗದಿತ ಅವಧಿಯೊಳಗೆ ಸದಸ್ಯರಿಗೆ ತಲುಪದಿದ್ದಲ್ಲಿ ಇದನ್ನೇ ಚುನಾವಣಾ ವೇಳಾಪಟ್ಟಿ ಎಂದು ಪರಿಗಣಿಸಿ ಚುನಾವಣೆಯಲ್ಲಿ ಭಾಗವಹಿಸುವಂತೆ ಕೋರಿದೆ. ಹೆಚ್ಚಿನ ಮಾಹಿತಿಗೆ ಸಂಘದ ಸಿಇಓ ಶಶಿಕಲಾ ಅಥವಾ ರಿಟರ್ನಿಂಗ್ ಆಫೀಸರ್ ರಾಜಣ್ಣ ಅವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಹೋರಾಟಗಳಿಂದ ಜನತೆ ಹಕ್ಕು ಪಡೆಯಲು ಸಾಧ್ಯವಾಯಿತು

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ

ಸರಗೂರು, ಏ.28– ಹೋರಾಟಗಳಿಂದಾಗಿ ದೇಶದ ಜನತೆ ಹಕ್ಕು ಪಡೆಯಲು ಸಾಧ್ಯವಾಯಿತು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ತಿಳಿಸಿದರು.


ಜನಜಾಗೃತಿ ಸಮಾವೇಶವನ್ನು ಗಣ್ಯರು ಉದ್ಘಾಟಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸೋಮವಾರ ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆದ ಸ್ವಾತಂತ್ರ್ಯ ನಂತರ ಭಾರತದ 77 ನಡೆಯಲ್ಲಿ ಸಂಕಿರಣಗೊಂಡ ಸಂವಿಧಾನ ಆಶಯಗಳು ಕುರಿತ ಜನಜಾಗೃತಿ ಸಮಾವೇಶದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ರಾಷ್ಟ್ರದಲ್ಲಿ ಜಾರಿಯಲ್ಲಿರುವ ಆಡಳಿತ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ ಮತ್ತು ಎಲ್ಲಾ ಕಾನೂನುಗಳ ಮೂಲ ಸ್ತೋತ್ರ ನಮ್ಮ ಸಂವಿಧಾನ ಎಂದರು.

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದ ಜನತೆ ಸಮಾನತೆಯ ಹಕ್ಕುಗಳಿಂದ, ಸ್ವಾತಂತ್ರ್ಯದ ಹಕ್ಕುಗಳಿಂದ ವಂಚಿತರಾಗಿದ್ದರು. ಆದರೆ ಸ್ವಾತಂತ್ರ್ಯ ಹೋರಾಟ, ಸಾಮಾಜಿಕ, ಸಿವಿಲ್ ಹಕ್ಕುಗಳಿಗಾಗಿ ನಡೆದ ಹೋರಾಟಗಳಿಂದಾಗಿ ಜನತೆ ಹಕ್ಕುಗಳನ್ನು ಪಡೆಯಲು ಸಾಧ್ಯವಾಯಿತು. ಈ ಹೋರಾಟಗಳೇ ಮುಂದೆ ಸಂವಿಧಾನ ಸಭೆಯ ರಚನೆಗೂ ಕಾರಣವಾಯಿತು ಎಂದರು.

ಮುಖ್ಯ ಭಾಷಣಕಾರ, ಬಾರ್‌ಕೋಲ್ ಪತ್ರಿಕೆ ಸಂಪಾದಕ ರಂಗಸ್ವಾಮಿ ಮಾತನಾಡಿ, ಡಾ. ಅಂಬೇಡ್ಕರ್ ಅವರು ಸಂವಿಧಾನ ನಿರೂಪಣಾ ಸಮಿತಿ ಅಧ್ಯಕ್ಷರಾಗಿದ್ದರು. ಸಂವಿಧಾನ ಸಭೆ 2 ವರ್ಷ, 11 ತಿಂಗಳು, 18 ದಿನಗಳು ನಡೆಯಿತು. ಈ ಅವಧಿಯಲ್ಲಿ 166 ದಿನಗಳ ಕಾಲ ಸಭೆ ಸೇರಿತ್ತು. ಅಲ್ಲಿನ ಚರ್ಚೆಗಳಲ್ಲಿ ಪತ್ರಕರ್ತರಿಗೆ ಹಾಗೂ ಜನತೆಗೆ ಮುಕ್ತ ಪ್ರವೇಶಾವಕಾಶವಿತ್ತು ಎಂದರು.

ಸಂವಿಧಾನ ಸಭೆ ಸಂವಿಧಾನ ರಚನೆ ಪೂರ್ಣಗೊಳಿಸಿ 1949ರ ನವೆಂಬರ್‌ನಲ್ಲಿ ರಾಷ್ಟ್ರಕ್ಕೆ ಸಮರ್ಪಿಸಿಕೊಂಡಿತು. 1950ರ ಜ.26 ರಂದು ಭಾರತದ ಸಂವಿಧಾನ ಜಾರಿಗೆ ಬಂತು. ಸಂವಿಧಾನ ಜನತೆಯ ಹಕ್ಕುಗಳ ಮೂಲವಾಯಿತು. ವಿಶ್ವದಲ್ಲೇ ಅತ್ಯಧಿಕ ಹಕ್ಕುಗಳನ್ನು ಆಧರಿಸಿ ರಚನೆಯಾದ ದೀರ್ಘವಾದ ಲಿಖಿತ ಸಂವಿಧಾನ ಎಂಬ ಗರಿಮೆಗೆ ಪಾತ್ರವಾಗಿದೆ ನಮ್ಮ ಸಂವಿಧಾನ ಎಂದರು.

ಜನಜಾಗೃತಿ ಸಮಾವೇಶದಲ್ಲಿ ದಸಂಸ ಜಿಲ್ಲಾ ಸಂಚಾಲಕ ಅಲಗೂಡು ಶಿವಕುಮಾರ್, ದಸಂಸ ಜಿಲ್ಲಾ ಸಮಿತಿ ಸಂಚಾಲಕ ಶುಂಭುಲಿಂಗಸ್ವಾಮಿ, ನಿಂಗರಾಜು, ಶಿವಬುದ್ಧಿ, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಯಜಮಾನರಾದ ರಂಗಯ್ಯ, ಭೋಗಯ್ಯ, ಅಂಬೇಡ್ಕರ್ ಭವನ ಟ್ರಸ್ಟ್ ಅಧ್ಯಕ್ಷ ಸಣ್ಣ ಸ್ವಾಮಿ, ಸರಗೂರು ತಾಲೂಕು ಸಮಿತಿ ಸಂಚಾಲಕ ಶಿವಶಂಕರ್, ಕಾಳಸ್ವಾಮಿ, ಶಿವಚನ್ನ, ಕಾಳಸ್ವಾಮಿ, ರಾಮಲಿಂಗಪ್ಪ, ಕಲ್ಲೇಶ್, ಪುಟ್ಟರಾಜು, ಶಾಂತ ರಾಜು, ಪುಟ್ಟಯ್ಯ, ಪ್ರಕಾಶ್, ಮುತ್ತು, ಸರಗೂರು ಪದಾಧಿಕಾರಿಗಳಾದ ಕಾಂತಯ್ಯ, ರಂಗಸ್ವಾಮಿ, ಹುಚ್ಚಯ್ಯ, ರಂಗಯ್ಯ, ಕಂದಲಿಕೆ ಪದಾಧಿಕಾರಿಗಳಾದ ನಾಗಣ್ಣ, ಲೋಕೇಶ್, ನಾಗರಾಜು, ಕಾಳಸ್ವಾಮಿ, ದೇವಣ್ಣ ಲೋಕೇಶ್, ಹೆಚ್.ಡಿ.ಕೋಟೆ ಪದಾಧಿಕಾರಿಗಳು ಮಹೇಶ್, ರಾಜಶೇಖರ್, ಕೃಷ್ಣ, ಮಹೇಶ್, ಗೋಪಾಲ್, ರಾಮಯ್ಯ ಜಯಣ್ಣ, ಮುಖಂಡರಾದ ಬೋಗಯ್ಯ ಇನ್ನಿತರರಿದ್ದರು.

ಉಚಿತ ಕಂಪ್ಯೂಟರ್ ತರಬೇತಿ

ತಿ.ನರಸೀಪುರ, ಏ.28– ಪಟ್ಟಣದ ತಾಲೂಕು ಕಚೇರಿ ರಸ್ತೆಯಲ್ಲಿರುವ ಕಿಯೋನಿಕ್ಸ್ ಯುವ. ಕಾಂ ಕಂಪ್ಯೂಟರ್ ತರಬೇತಿ ಕೇಂದ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಡಿ ಪ.ಪಂಗಡ(ಎಸ್ಟಿ)ದ 18 ರಿಂದ 40 ವರ್ಷದೊಳಗಿನ ಅಭ್ಯರ್ಥಿಗಳಿಗೆ ಉಚಿತ ಕಂಪ್ಯೂಟರ್ ತರಬೇತಿ ನೀಡಲಾಗುತ್ತಿದೆ.

ಡೊಮೆಸ್ಟಿಕ್ ಡಾಟಾ ಎಂಟ್ರಿ, ಟ್ಯಾಲಿ, ವೆಬ್ ಡೆವಲಪರ್, ಮಲ್ಟಿ ಮೀಡಿಯಾ ಮತ್ತು ಕಮ್ಯುನಿಕೇಶನ್ ಇಂಗ್ಲಿಷ್ ಕೋರ್ಸ್ ತರಬೇತಿ ನೀಡಲಾಗುತ್ತಿದೆ. ಆಸಕ್ತರು ಅರ್ಜಿ ಸಲ್ಲಿಸಲು ಮೇ 5 ಕೊನೆ ದಿನ. ತರಬೇತಿಯು ಸಂಪೂರ್ಣ ಉಚಿತವಾಗಿದ್ದು, ಆಸಕ್ತ ಅಭ್ಯರ್ಥಿಗಳು ಭಾವಚಿತ್ರದೊಂದಿಗೆ ಆಧಾರ್ ಕಾರ್ಡ್ ಜೆರಾಕ್ಸ್, ಎಸ್‌ಎಸ್‌ಎಲ್‌ಸಿ/ಪಿಯುಸಿ ಅಂಕಪಟ್ಟಿ ಹಾಗೂ ಜಾತಿ ಪ್ರಮಾಣ ಪತ್ರದೊಂದಿಗೆ ತರಬೇತಿಗೆ ಹಾಜರಾಗುವುದು. ಹೆಚ್ಚಿನ ಮಾಹಿತಿಗೆ ಮೊ: 9686407359, 9880272950 ಸಂಪರ್ಕಿಸಬಹುದು. ಅಥವಾ ತಾಲೂಕು ಕಚೇರಿ ರಸ್ತೆ ಎದುರು ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಚೇರಿ ಮೇಲಿರುವ ಕಿಯೋನಿಕ್ಸ್ ಯುವ. ಕಾಂ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಸಿದ್ದಲಿಂಗಪ್ಪ ನಿಧನ

ನಂಜನಗೂಡು, ಏ.28– ತಾಲೂಕಿನ ಕಾಂಗ್ರೆಸ್ ಹಿರಿಯ ಮುಖಂಡ, ಆಶ್ರಯ ಸಮಿತಿ ಮಾಜಿ ಅಧ್ಯಕ್ಷ ದೇಬೂರು ಸಿದ್ದಲಿಂಗಪ್ಪ (74) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ದೇಬೂರು ಗ್ರಾಮದಲ್ಲಿ ನಡೆಯಿತು.



ಶಾಸಕ ದರ್ಶನ್, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕೇಶವಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಎಸ್.ಮಹದೇವಯ್ಯ, ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕೆಂಪಣ್ಣ ಮೃತರ ಅಂತಿಮ ದರ್ಶನ ಪಡೆದರು.



ಜೈಪುರದಲ್ಲಿ ಸೂರ್ಯವಂಶಿ ಶತಕದ 'ವೈಭವ'

ರಾಜಸ್ಥಾನ್‌ಗೆ ಗುಜರಾತ್ ವಿರುದ್ಧ ಭರ್ಜರಿ ಜಯ



ಜೈಪುರ, ಏ.28– ವೈಭವ್ ಸೂರ್ಯವಂಶಿ ಅವರ ವಿಶ್ವ ದಾಖಲೆಯ ಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಗುಜರಾತ್ ಟೈಟಾನ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಚೊಚ್ಚಲ ಐಪಿಎಲ್ ಆಡುತ್ತಿರುವ ಕೇವಲ 14 ವರ್ಷದ ವೈಭವ್ ಸೂರ್ಯವಂಶಿ 17 ಎಸೆತದಲ್ಲಿ 50, 35 ಎಸೆತದಲ್ಲಿ 100 ಒಟ್ಟಾರೆ 38 ಎಸೆತಗಳಲ್ಲಿ 11 ಸಿಕ್ಸರ್, 7 ಬೌಂಡರಿ ಒಳಗೊಂಡ 101 ರನ್ ಗಳಿಸುವ ಮೂಲಕ ಐಪಿಎಲ್ ಇತಿಹಾಸದಲ್ಲೇ 2ನೇ ಅತ್ಯಂತ ವೇಗದ ಶತಕ ಸಿಡಿಸಿ ವಿಶ್ವದಾಖಲೆ ನಿರ್ಮಿಸಿದ್ದಾರೆ. ಅಲ್ಲದೇ ಶತಕ ಸಿಡಿಸಿದ ಅತೀ ಕಿರಿಯ ಆಟಗಾರ ಎಂಬ ದಾಖಲೆಯೂ ವೈಭವ್ ಹೆಸರಿಗೆ ಸೇರ್ಪಡೆಗೊಂಡಿದೆ. ಇಂದಿಗೂ 30 ಎಸೆತಗಳಲ್ಲಿ ಶತಕ ಸಿಡಿಸಿದ ಕ್ರಿಸ್ ಗೇಲ್ ಮೊದಲ ಸ್ಥಾನದಲ್ಲಿದ್ದಾರೆ.

ಜೈಪುರದ ಸವಾಯಿ ಮಾನ್ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 210 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ ರಾಯಲ್ಸ್ 15.5 ಓವರ್‌ಗಳಲ್ಲಿ 2ವಿಕೆಟ್ ನಷ್ಟಕ್ಕೆ 212 ರನ್ ಗಳಿಸುವ ಮೂಲಕ ಇನ್ನೂ 25 ಎಸೆತಗಳು ಬಾಕಿ ಇರುವಾಗಲೇ ಜಯಭೇರಿ ಬಾರಿಸಿತು.

ರಾಜಸ್ಥಾನ ಪರ ಆರಂಭಿಕರಾಗಿ ಕಣಕ್ಕಿಳಿದ ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ 11.5 ಓವರ್‌ಗಳಲ್ಲಿ ಮೊದಲ ವಿಕೆಟ್‌ಗೆ 166 ರನ್‌ಗಳ ಅದ್ಭುತ ಜೊತೆಯಾಟವಾಡಿದರು. ಪಂದ್ಯದಲ್ಲಿ ಮೊಹಮ್ಮದ್ ಸಿರಾಜ್, ರಶೀದ್ ಖಾನ್, ಇಶಾಂತ್ ಶರ್ಮಾರಂತಹ ಘಟಾನುಘಟಿ ಬೌಲರ್‌ಗಳ ಬೌಲಿಂಗ್ ದಾಳಿಯನ್ನು ಧೂಳೀಪಟ ಮಾಡಿದ ವೈಭವ್ ಬೌಂಡರಿ, ಸಿಕ್ಸರ್‌ಗಳ ಮೂಲಕ ಮೈದಾನದ ಮೂಲೆ ಮೂಲೆಗೂ ಚೆಂಡನ ದರ್ಶನ ಮಾಡಿಸಿದರು. ಅಂತಿಮವಾಗಿ 101 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಮತ್ತೊಂದೆಡೆ ಅಬ್ಬರಿಸಿದ ಜೈಸ್ವಾಲ್ 40 ಎಸೆತಗಳಲ್ಲಿ 9 ಬೌಂಡರಿ, 2ಸಿಕ್ಸರ್ ಒಳಗೊಂಡ 70 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಿತೀಶ್ ರಾಣಾ 4ರನ್ ಗಳಿಸಿ ಔಟಾದರೇ, ರಿಯಾನ್ ಪರಾಗ್ 15 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಒಳಗೊಂಡ 32 ರನ್ ಗಳಿಸಿ ಅಜೇಯರಾಗಿ ಉಳಿದರು. ಗುಜರಾತ್ ಪರ ಪ್ರಸಿದ್ಧ ಕೃಷ್ಣ, ರಶೀದ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್‌ಗೆ ನಾಯಕ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ್ 91 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 39 ರನ್ ಗಳಿಸಿದ್ದ ಸುದರ್ಶನ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ಗಿಲ್ 50 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಒಳಗೊಂಡ 84 ರನ್ ಗಳಿಸಿ ಔಟಾದರು. ನಂತರ ಬಂದ ಜೋಸ್ ಬಟ್ಲರ್ 26 ಎಸೆತಯಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಒಳಗೊಂಡ ಅರ್ಧಶತಕ ಸಿಡಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಗುಜರಾತ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 209ರನ್‌ಗಳ ಬೃಹತ್ ಮೊತ್ತದಾಖಲಿಸಿತು. ರಾಜಸ್ಥಾನ್ ಪರ ಮಹೀಶ್ ಪತಿರಣ 2, ಜೋಫ್ರಾ ಆರ್ಚರ್ ಮತ್ತು ಸಂದೀಪ್ ಶರ್ಮಾ ತಲಾ 1 ವಿಕೆಟ್ ಪಡೆದರು. ವೈಭವ್ ಸೂರ್ಯವಂಶಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	10	7	3	0	14
ಮುಂಬೈ	10	6	4	0	12
ಗುಜರಾತ್	9	6	3	0	12
ಡೆಲ್ಲಿ	9	6	3	0	12
ಪಂಜಾಬ್	9	5	3	0	11
ಲಕ್ನೋ	10	5	5	0	10
ಕೋಲ್ಕತ್ತಾ	9	3	5	0	7
ರಾಜಸ್ಥಾನ್	10	3	7	0	6
ಹೈದರಾಬಾದ್	9	3	6	0	6
ಚೆನ್ನೈ	9	2	7	0	4

ಇಂದಿನ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್
V/S
ಕೊಲ್ಕತ್ತಾ ನೈಟ್ ರೈಡರ್ಸ್

ಸಮಯ: ಸಂಜೆ 7.30

ಸ್ಥಳ : ಅರುಣ್ ಜೆಟ್ಲಿ ಕ್ರೀಡಾಂಗಣ, ದೆಹಲಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದ ಗುಡಿ (ಕ)+ ಒಡೆಲಾ–2 (ತೆ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದಾಸರಹಳ್ಳಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗ್ಯಾಂಗರ್ಸ್ (ತ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ದಾಸರಹಳ್ಳಿ (ಕ) + ರಿಕ್ಷಾ ಚಾಲಕ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
- ಸ್ಕ್ರೀನ್ 2 ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
- ಸ್ಕ್ರೀನ್ 3 ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ ಜಾಟ್ (ಹಿಂ): ಸಂ.4.10ಕ್ಕೆ.
- ಸ್ಕ್ರೀನ್ 4 ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
- ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
- ಸ್ಕ್ರೀನ್ 2 ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 3 ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 4 ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ ಇಂದು ಚಾಲನೆ ನೀಡಿದರು.

ಮೈಸೂರು, ಏ. 28(ಆರ್‌ಕೆ)– ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಕೃಷ್ಣಮೂರ್ತಿಪುರಂನ ಶ್ರೀ ರಾಮ ಮಂದಿರದಲ್ಲಿ ಆಯೋಜಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ ಇಂದು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬ್ರಾಹ್ಮಣರು ಸಂಘಟಿತರಾಗಿ ಒಗ್ಗೂಡಲು ಪ್ರತಿಯೊಬ್ಬ ವಿಪ್ರರೂ ಕಡ್ಡಾಯವಾಗಿ ಮಾತೃ ಸಂಸ್ಥೆಯಾದ ಮಹಾಸಭಾ ಸದಸ್ಯರಾಗಬೇಕು. ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ ಶಿಕ್ಷಣ, ಉದ್ಯೋಗ, ಧಾರ್ಮಿಕವಾಗಿ ಪ್ರೋತ್ಸಾಹ ನೀಡಲು ಮಹಾಸಭಾ ರಾಜ್ಯಾಧ್ಯಕ್ಷ ರಘುನಾಥ್ ನೇತೃತ್ವದಲ್ಲಿ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿ ಡಾ. ಲಕ್ಷ್ಮೀದೇವಿ, ಹಿರಿಯ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ವಿಪ್ರ ಮುಖಂಡ ಶ್ರೀಕಂಠಕುಮಾರ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಎಚ್.ಎನ್. ಶ್ರೀಧರಮೂರ್ತಿ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಪಹಲ್ಗಾಮ್‌ನಲ್ಲಿ ಉಗ್ರರ ಅಟ್ಟಹಾಸ

ಬ್ಯೂಟಿಷಿಯನ್ ವೆಲ್ಫೇರ್ ಅಸೋಸಿಯೇಷನ್ ಖಂಡನೆ

ಮೈಸೂರಿನಲ್ಲಿ ಕಪ್ಪುವಸ್ತ್ರ ಧರಿಸಿ ಪ್ರತಿಭಟನೆ

ಮೈಸೂರು,ಏ.28(ಎಂಟಿವೈ)– ಜಮ್ಮು ಕಾಶ್ಮೀರದ ಪಹಲ್ಗಾವ್‌ನಲ್ಲಿ ಉಗ್ರರು ನಡೆಸಿದ ನರಮೇಧ ಖಂಡಿಸಿ, ಮೈಸೂರು ಬ್ಯೂಟಿಷಿಯನ್ ವೆಲ್ಫೇರ್ ಅಸೋಸಿಯೇಷನ್ ಸದಸ್ಯರು ಕಪ್ಪು ವಸ್ತ್ರ ಧರಿಸಿ ಪ್ರತಿಭಟನೆ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಮೈಸೂರು ಬ್ಯೂಟಿಷಿಯನ್ ವೆಲ್ಫೇರ್ ಅಸೋಸಿಯೇಷನ್ ಸದಸ್ಯರು ಭಾರತಾಂಬೆಗೆ ಜಯಕಾರ ಹಾಕಿ, ಭಯೋತ್ಪಾದಕರು ನಡೆಸಿದ ಘೋರ ಕೃತ್ಯವನ್ನು ಖಂಡಿಸಿದರು. ಜಮ್ಮು–ಕಾಶ್ಮೀರಕ್ಕೆ ಪ್ರವಾಸಕ್ಕೆಂದು ಹೋಗಿದ್ದ ಅಮಾಯಕರ ಮೇಲೆ ಉಗ್ರರು ಅಟ್ಟಹಾಸ ಮೆರೆದು, 26 ಮಂದಿಯನ್ನು ಹತ್ಯೆ ಮಾಡಿದ್ದಾರೆ. ಇದು ನಾಗರಿಕ ಸಮಾಜ ತಲೆ ತಗ್ಗಿಸುವ ಕೃತ್ಯವಾಗಿದೆ. ಈ ಘಟನೆಯನ್ನು ದೇಶವೇ ಖಂಡಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರ ಮೇಲೆ ಗುಂಡಿನ ದಾಳಿ ಮಾಡಿದ ಉಗ್ರರು ಹಾಗೂ ಉಗ್ರರಿಗೆ ಸಹಕರಿಸಿದವರನ್ನು ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಮೈಸೂರು ಬ್ಯೂಟಿಷಿಯನ್ ವೆಲ್ಫೇರ್ ಅಸೋಸಿಯೇಷನ್ ಸದಸ್ಯರು ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ನರಮೇಧ ಖಂಡಿಸಿ, ಕಪ್ಪು ವಸ್ತ್ರ ಧರಿಸಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ನಿವೃತ್ತ ಯೋಧರಾದ ಶ್ರೀನಿವಾಸ್, ನಂಜುಂಡಸ್ವಾಮಿ, ಪೊನ್ನಪ್ಪ ಮತ್ತು ಬಿಡ್ಡಪ್ಪ ಪಾಲ್ಗೊಂಡು ಸೇನೆಯಲ್ಲಿದ್ದಾಗ ದೇಶದ ಗಡಿಭಾಗದಲ್ಲಿ ಭಾರತೀಯ ಸೈನಿಕರು ಹೇಗೆ ಕರ್ತವ್ಯ ನಿರ್ವಹಿಸುತ್ತಾರೆ. ಎದುರಾಗುವ ಸವಾಲು ಸೇರಿದಂತೆ ಇನ್ನಿತರ ಅನುಭವವನ್ನು ಹಂಚಿಕೊಂಡರು.

ಮೈಸೂರು ಬ್ಯೂಟಿಷಿಯನ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷೆ ವೇದ ರೈ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪದಾಧಿಕಾರಿಗಳಾದ ಪ್ರತಿಭಾ ಶೆಟ್ಟಿ, ಸಪ್ನ ಹಿರಸ್ಕರ್, ಮಾಲಿನಿ ಪಾಲಾಕ್ಷ ಮಂಜುಳಾ, ನಸ್ರೀನ್, ರಾಜೇಶ್ವರಿ, ಪದ್ಮಿನಿ, ವೀಣಾ, ಜ್ಯೋತಿ ಶೆಟ್ಟಿ, ಶಾರದಾ, ರಿತಿ, ಲಕ್ಷ್ಮೀ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಬ್ಯೂಟಿಷಿಯನ್‌ಗಳು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಅಂಬೇಡ್ಕರ್ ಜಯಂತಿ ಆಚರಣೆಯೊಂದಿಗೆ ಅವರು ಬೋಧಿಸಿದ ಮಾರ್ಗದಲ್ಲಿ ಸಾಗಬೇಕು

ಮೈಸೂರು, ಏ.28(ಬಿಎಲ್‌ಯು)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಣೆ ಮಾಡುವುದರ ಜೊತೆಗೆ ಅವರು ತೋರಿದ ಮಾರ್ಗದಲ್ಲಿ ಮುನ್ನಡೆಯಬೇಕು. ಈ ಮೂಲಕ ಅವರಂತೆ ಜ್ಞಾನ ಸಂಪಾದನೆ ಮಾಡುವ ಸಂಕಲ್ಪ ಮಾಡಬೇಕು ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸಲಹೆ ನೀಡಿದರು.

ಮೈಸೂರಿನ ಸರಸ್ವತಿಪುರಂನ ಸರ್ಕಾರಿ ಮುದ್ರಣಾಲಯದಲ್ಲಿ ಇಂದು ಆಯೋಜಿಸಿದ್ದ ಅಂಬೇಡ್ಕರ್ ಅವರ 134 ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮ ಸಮಾಜ ನಿರ್ಮಾಣಕ್ಕೆ ಹೋರಾಟ ಮಾಡಿದ ಅಂಬೇಡ್ಕರ್ ಅವರ ತತ್ವ ಸಿದ್ಧಾಂತವನ್ನು ಪ್ರತಿಯೊಬ್ಬರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಹಿಂದೂ ಜಾತಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದ್ದ ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದ್ದರು. ಇದರಿಂದ ಅಂಬೇಡ್ಕರ್ ತೋರಿದ ಧಮ್ಮ ಮಾರ್ಗದಲ್ಲಿ ಸಮಸ್ತ ದಲಿತರು ಸಾಗಬೇಕು ಎಂದು ಭಾಸ್ಕರ್ ಹೇಳಿದರು.

ಸರ್ಕಾರಿ ವಿಭಾಗೀಯ ಮುದ್ರಣಾಲಯದ ಉಪ ನಿರ್ದೇಶಕಿ ಹೆಚ್.ಜ್ಯೋತಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್ ಮಾತನಾಡಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ತಿಮ್ಮಯ್ಯ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಪಿ.ರಾಘವೇಂದ್ರ, ವಕೀಲರ ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.



ಮೈಸೂರಿನ ಸರಸ್ವತಿಪುರಂನ ಸರ್ಕಾರಿ ಮುದ್ರಣಾಲಯದಲ್ಲಿ ಸೋಮವಾರ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ 134 ನೇ ಜಯಂತಿ ಕಾರ್ಯಕ್ರಮವನ್ನು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಉದ್ಘಾಟಿಸಿದರು.

ರೈಲ್ವೆ ಪರೀಕ್ಷೆಯಲ್ಲೂ ಜನಿವಾರ, ಮಂಗಳಸೂತ್ರ ತೆಗೆಸಬಾರದು

ಸಚಿವ ಸೋಮಣ್ಣ ಸಲಹೆ



ಬೆಂಗಳೂರು: ರೈಲ್ವೆ ನೇಮಕಾತಿ ಮಂಡಳಿಯ ನರ್ಸಿಂಗ್ ಸೂಪರಿಂಟೆಂಡೆಂಟ್ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಜನಿವಾರ ಮತ್ತು ಮಂಗಳ ಸೂತ್ರ ತೆಗೆಸಬಾರದು ಎಂದು ಅಧಿಕಾರಿಗಳಿಗೆ ರೈಲ್ವೆ ಇಲಾಖೆಯ ರಾಜ್ಯ ಖಾತೆ ಸಚಿವ ವಿ ಸೋಮಣ್ಣ ಸೂಚನೆ ನೀಡಿದ್ದಾರೆ.

ಪರೀಕ್ಷೆಗೆ ಹಾಜರಾಗುವವರು ಧಾರ್ಮಿಕ ಸಂಕೇತಗಳು ಮತ್ತು ಮಂಗಳ ಸೂತ್ರವನ್ನು ತೆಗೆದುಬರಬೇಕು ಎಂದು ಪ್ರವೇಶ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು ಇದಕ್ಕೆ ಹಿಂದೂ ಪರ ಸಂಘಟನೆಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು ವಿವಾದ ಭುಗಿಲೇಳುತ್ತಿದ್ದಂತೆಯೇ ದಕ್ಷಿಣ ಕನ್ನಡ ಬಿಜೆಪಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು, ಸಚಿವ ಸೋಮಣ್ಣ ಅವರ ಗಮನಕ್ಕೆ ತಂದಿದ್ದರು. ಇದರ ಬೆನ್ನಲ್ಲೇ ಸೋಮಣ್ಣ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ವಿವಾದಕ್ಕೆ ಅಂತ್ಯ ಹಾಡಿದ್ದಾರೆ.

ಸೋಮಣ್ಣ ಅವರ ಸೂಚನೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಬ್ರಿಜೇಶ್ ಚೌಟ ಅವರು, 'ಭಾರತೀಯ ರೈಲ್ವೆಯ ನರ್ಸಿಂಗ್ ಸೂಪರಿಂಟೆಂಡೆಂಟ್ ಹುದ್ದೆಗೆ ಪರೀಕ್ಷೆ ಬರೆಯುವವರು ಮಂಗಳಸೂತ್ರ ಜನಿವಾರದಂತಹ ಧಾರ್ಮಿಕ ಸಂಕೇತಗಳು ಮತ್ತು ಆಭರಣಗಳನ್ನು ತೆಗೆಯುವಂತೆ ಮಾಡಬಾರದು. ಜನಿವಾರ, ಮಂಗಳ ಸೂತ್ರ ತೆಗೆಸದಂತೆ ಅಧಿಕಾರಿಗಳಿಗೆ ರೈಲ್ವೆ ಇಲಾಖೆ ರಾಜ್ಯ ಖಾತೆ ಸಚಿವ ವಿ ಸೋಮಣ್ಣ ಸೂಚನೆ ನೀಡಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತಿದೆ. ಎಂದು ಹೇಳಿದ್ದಾರೆ. ರೈಲ್ವೆ ನೇಮಕಾತಿ ಮಂಡಳಿಯ ನರ್ಸಿಂಗ್ ಸೂಪರಿಂಟೆಂಡೆಂಟ್ ಪರೀಕ್ಷೆಏಪ್ರಿಲ್ 28, 29 ಹಾಗೂ 30 ರಂದು ನಡೆಯಲಿದೆ.

ಸಾಂಪ್ರದಾಯಿಕ ಪದವಿಗಳೂ ಈಗ ಬೇಡಿಕೆ ಕಳೆದುಕೊಳ್ಳುತ್ತಿವೆ

ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ ಬೇಸರ



ಮೈಸೂರು, ಏ. 28(ಆರ್‌ಕೆ)– ಸಾಂಪ್ರದಾಯಿಕ ಪದವಿಗಳೂ ಈಗ ಬೇಡಿಕೆ ಕಳೆದುಕೊಳ್ಳುತ್ತಿವೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ ಇಂದಿಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಸೈನ್ಸ್ ಆಫ್ ಸ್ಕೂಲಿಂಗ್ ಫೌಂಡೇಷನ್ ಹಾಗೂ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ 'ಸೈನ್ಸ್ ಆಫ್ ಸ್ಕೂಲಿಂಗ್ ಕಾಂಕ್ಲೇವ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಸಾಂಪ್ರದಾಯಿಕ ಡಿಗ್ರಿಗಳೂ ಬೇಡಿಕೆ ಕಳೆದುಕೊಳ್ಳುತ್ತಿದ್ದು, ಕಂಪನಿಗಳಿಗೆ ವಿದ್ಯಾವಂತರು, ಪ್ರತಿಭಾವಂತರು, ಪ್ರಾಮಾಣಿಕರು ಬೇಕಿಲ್ಲ. ಅವರಿಗೆ ತಮ್ಮ ಉದ್ಯಮ ಬೆಳೆಸುವ ಕುಶಲಿಗಳಷ್ಟೇ ಇದ್ದರೆ ಸಾಕು ಎಂದರು.

ಶಿಕ್ಷಣ ಕೇವಲ ಉದ್ಯೋಗ ಒದಗಿಸುವ ವ್ಯವಸ್ಥೆಯಾಗಿ ಬದಲಾಗಿರುವುದು ಬೇಸರದ ಸಂಗತಿ. ಜಾಗತಿಕ ಮಟ್ಟದಲ್ಲಿ ಪಠ್ಯಕ್ರಮ ಬದಲಾಗಬೇಕಿದೆ. ಆಧ್ಯಾತ್ಮವನ್ನು ಶಿಕ್ಷಣ ದಲ್ಲಿ ಅಳವಡಿಸಿಕೊಂಡರೆ ಮಾತ್ರ ವಿದ್ಯಾರ್ಥಿಗಳನ್ನು ಜಾಗೃತ ಪ್ರಜೆಯನ್ನಾಗಿ ಪರಿವರ್ತಿಸಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಪಿ. ನಾಗಭೂಷಣ್ ಮಾತನಾಡಿ, ನೆನಪಿನ ಶಕ್ತಿ ಆಧರಿಸಿ ಪರೀಕ್ಷೆ ನಡೆಸುವುದು ಇಂದಿನ ಶಿಕ್ಷಣ ವ್ಯವಸ್ಥೆಯಾಗಿದೆ. ಅದು ಬದಲಾಗಿ ಯೋಚಿಸುವ, ಪ್ರಶ್ನಿಸುವ, ಅನ್ವೇಷಣೆ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಪಠ್ಯಕ್ರಮ ರೂಪಿಸುವ ಅಗತ್ಯವಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಂಯು, ಗೌರವ ಕಾರ್ಯದರ್ಶಿ ಆರ್. ನರಸಿಂಹ, ಆಡಳಿತ ಮಂಡಳಿ ಸದಸ್ಯ ಡಾ. ಟಿ.ಕೆ. ಉಮೇಶ್, ಎಸ್.ಎಲ್. ರಾಮಚಂದ್ರ, ಅನುರಾಧ ನಂದಕುಮಾರ್, ಆಂಪಿ ವೆಂಚರ್ ಸಿಇಓ ಪ್ರದೀಪ್‌ಕುಮಾರ್, ಪ್ರೊ. ಬಿ.ಜಿ. ಸಂಗಮೇಶ್ವರ, ಗ್ಲೋಬಲ್ ಟ್ರಾನ್ಸ್‌ಫರ್ಮೇಷನ್ ಲೀಡರ್ ಡಾ. ಎಸ್.ಜೆ. ನಾಗಣ್ಣಗೌಡ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ: ಸರ್ಕಾರದ ಜೊತೆ ಚರ್ಚೆ

ಶಾಸಕ ಜಿ.ಟಿ.ದೇವೇಗೌಡ ಭರವಸೆ

ಮೈಸೂರು, ಏ.28(ಬಿಎಲ್‌ಯು)– ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ ಆರಂಭಿಸುವ ಸಂಬಂಧ ಸರ್ಕಾರದ ಜೊತೆ ಮಾತನಾಡುತ್ತೇನೆ ಎಂದು ಚಾಮುಂಡೇಶ್ವರಿ ಕ್ಷೇತದ ಶಾಸಕ ಜಿ.ಟಿ.ದೇವೇಗೌಡರು ಭರವಸೆ ನೀಡಿದ್ದಾರೆ.

ನಗರದ ಹೂಟಗಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಪರಿಸರ ಬೆಸುಗೆ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಮತ್ತು ಕಲಿಕಾ ಪ್ರದರ್ಶನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲರಿಗೂ ತಮ್ಮ ಮಕ್ಕಳನ್ನು ಹಣ ಕೊಟ್ಟು ಖಾಸಗಿಯಾಗಿ ನಡೆಯುವ ಬೇಸಿಗೆ ಶಿಬಿರಕ್ಕೆ ಸೇರಿಸಲು ಸಾಧ್ಯವಾಗುವುದಿಲ್ಲ. ಆದ ಕಾರಣ ಬಡವರು ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಬೇಸಿಗೆ ಶಿಬಿರ ಆರಂಭ ಮಾಡುವ ಸಂಬಂಧ ಶಿಕ್ಷಣ ಸಚಿವರ ಜೊತೆ ಮಾತನಾಡುತ್ತೇನೆ ಎಂದು ಆಶ್ವಾಸನೆ ನೀಡಿದರು.

ಪೋಷಕರು ತಮ್ಮ ಮಕ್ಕಳ ಮದುವೆಗೆ ದುಂದು ವೆಚ್ಚ ಮಾಡಿ ಸಾಲಗಾರರಾಗಬಾರದು. ಕುವೆಂಪು ಅವರ ಮಂತ್ರ ಮಾಂಗಲ್ಯ ಅನುಸರಿಸಬೇಕು. ಈ ಮೂಲಕ ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ ಸಾಲದಿಂದ ಮುಕ್ತಿ ಪಡೆಯಬೇಕು ಎಂದು ಜಿ.ಟಿ.ದೇವೇಗೌಡರು ಹೇಳಿದರು.



ಮೈಸೂರಿನ ಹೂಟಗಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಪರಿಸರ ಬೆಸುಗೆ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಮತ್ತು ಕಲಿಕಾ ಪ್ರದರ್ಶನದ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಹಿರಿಯ ರಂಗಭೂಮಿ ಕಲಾವಿದೆ ಡಾ.ರಾಮೇಶ್ವರಿ ವರ್ಮಾ ಅವರು, ಪರಿಸರ ಬೆಸುಗೆ ಬೇಸಿಗೆ ಶಿಬಿರ ಮಕ್ಕಳಿಗೆ ಅವಶ್ಯವಾಗಿರುವ ಸಂದೇಶ ನೀಡುತ್ತದೆ. ಇದರಿಂದ ಬೇಸಿಗೆ ರಜೆ ಸಮಯದಲ್ಲಿ ಮಕ್ಕಳಿಗಾಗಿ ಆಯೋಜಿಸುವ ಇಂತಹ ಶಿಬಿರ ಅತ್ಯವಶ್ಯಕ ಎಂದು ಹೇಳಿದರು.

ತರುವಾಯ ಮಾತನಾಡಿದ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌದರಿ ಅವರು, ಮಕ್ಕಳನ್ನು ಸಾಮಾಜಿಕ ಜಾಲತಾಣದಿಂದ ದೂರ ಇಡಬೇಕು. ಅಪರಿಚಿತರ ಸ್ನೇಹ ಮಾಡುವ ಸಂದರ್ಭದಲ್ಲಿ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಆದಿವಾಸಿ ಹೆಣ್ಣು ಮಕ್ಕಳನ್ನು ಗೌರವಿಸಲಾಯಿತು. ವಿ ಕೇರ್ ಸಂಸ್ಥೆಯ ಸಂಸ್ಥಾಪಕಿ ಡಾ.ಕುಮುದಿನಿ ಅಚ್ಚಿ, ಮೈಸೂರು ಗ್ರಾಮಾಂತರ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್, ಜೆಎಸ್‌ಎಸ್ ಆಸ್ಪತ್ರೆ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಎಂ.ಕಿಶೋರ್ ಕೂಡ ಮಾತನಾಡಿ ಬೇಸಿಗೆ ಶಿಬಿರದ ಮಹತ್ವ ತಿಳಿಸಿದರು.

ಶಾಲಾ ಮುಖ್ಯೋಪಧ್ಯಾಯ ಸತೀಶ್, ಸಂಸ್ಥೆ ಸ್ವಯಂ ಸೇವಕರಾದ ಪ್ರಸನ್ನ, ಕಾರ್ಯಕರ್ತೆ ಸಿಂಚನ, ಬರಹಗಾರ ಸತೀಶ್ ಜವರೇಗೌಡ, ಡಾ.ರತಿರಾವ್, ಪ್ರೊ.ಲತಾ ಬಿದ್ದಪ್ಪ, ಪ್ರೊ.ಶ್ರೀದೇವಿ, ರೂಪ ರಾವ್, ಡೀಡ್ ಸಂಸ್ಥೆಯ ನಿರ್ದೇಶಕ ಡಾ.ಶ್ರೀಕಾಂತ್, ಸಂಸ್ಥೆಯ ಸದಸ್ಯರಾದ ಪೃಥ್ವಿ, ಡಾ.ಸಾರಿಕಾ ಪ್ರಸಾದ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಮಹಿಳೆಯರ ಸಮಾನತೆ ಸಾರಿದ ಧೀಮಂತ ಮಹಿಳೆ ಅಕ್ಕ ಮಹಾದೇವಿ

ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಮತ

ಮೈಸೂರು, ಏ.28(ಬಿಎಲ್‌ಯು)– ಅಕ್ಕ ಮಹಾದೇವಿ ಅವರು ಜಾಗತಿಕವಾಗಿ ಮಹಿಳೆಯರಿಗೆ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಿ ಸಮಾನತೆ ಸಾರಿದ ಧೀಮಂತ ಮಹಾ ಶಿವಶರಣೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಹೊಸಮಠದಲ್ಲಿ ಇಂದು ಲಿಂಗಾಯತ ಹೆಣ್ಣು ಮಕ್ಕಳಿಗೆ ಲಿಂಗ ದೀಕ್ಷಾ ಸಂಸ್ಕಾರ ಮಾಡಿದ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, 12 ನೇ ಶತಮಾನದಲ್ಲೆ ಇಂತಹ ಕ್ರಾಂತಿ ಮಾಡಿದ ಅಕ್ಕಮಹಾದೇವಿ ಅವರ ಸ್ಮರಣೆ ಎಂದೆಂದಿಗೂ ಪ್ರಸ್ತುತ ಎಂದು ಹೇಳಿದರು.

ಪುರುಷ ಪ್ರಾಧಾನ್ಯತೆ ಧಿಕ್ಕರಿಸಿ ನಿಂತ ಅಕ್ಕ ಮಹಾದೇವಿ ಅವರು ಸ್ತ್ರೀವಾದದ ನಾಯಕಿಯಾಗಿ, ಬಡವರ, ನೊಂದವರ ಅಕ್ಕರೆಯ ಅಕ್ಕನಾಗಿ ಕನ್ನಡ ಸಾಹಿತ್ಯ ಲೋಕದ ಮೊದಲ ಬಂಡಾಯ ಕವಿಯತ್ರಿಯಾಗಿದ್ದಾರೆ. ವಚನಕಾರ್ತಿಯಾದ ಅಕ್ಕಮಹಾದೇವಿ ಅವರು ವಚನ ಸಾಹಿತ್ಯ ಲೋಕದಲ್ಲಿ ತಮ್ಮದೆ ಆದ ಛಾಪು ಮೂಡಿಸಿದ್ದಾರೆ ಎಂದು ಡಾ.ಸಿ.ಪಿ.ಕೃಷ್ಣಕುಮಾರ್ ತಿಳಿಸಿದರು.



ಮೈಸೂರಿನ ಹೊಸಮಠದಲ್ಲಿ ಸೋಮವಾರ ಲಿಂಗಾಯತ ಹೆಣ್ಣು ಮಕ್ಕಳಿಗೆ ಲಿಂಗ ದೀಕ್ಷಾ ಸಂಸ್ಕಾರ ಕಾರ್ಯಕ್ರಮ ನಡೆಯಿತು.

ಅಕ್ಕನ ಜಾಗತಿಕ ಚಿಂತನೆ ಕುರಿತು ಮಾತನಾಡಿದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ ಅವರು, ಅಕ್ಕಮಹಾದೇವಿ ಅವರ ಜೀವನದಲ್ಲಿ ರಾಜತ್ವ ಮತ್ತು ಪ್ರಭುತ್ವಗಳ ಸಂಘರ್ಷ ನಡೆಯುತ್ತದೆ. ಆ ವೇಳೆ ಹೆಣ್ಣಿನ ಪ್ರತಿ ಸಾಧನೆಯ ಕಠಿಣ ಹೆಜ್ಜೆಗಳು ತಿಳಿಯುತ್ತದೆ ಎಂದರು.

ಹೆಣ್ತನ ಎಂಬುದು ಕೇವಲ ದೇಹಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಮನಸಿಗೂ ಕೂಡ ಸಂಬಂಧಿಸಿದೆ. ಆಕೆಯ ವ್ಯಕ್ತಿತ್ವ ಆಕೆಯ ತಲೆ ಕೂದಲಷ್ಟೆ ಬೃಹತ್ತಾದದ್ದು. ಕೇವಲ ದೇಹಕ್ಕೆ ಮಾತ್ರ ಆದ್ಯತೆ ನೀಡುವ ಪುರುಷ ವರ್ಗವನ್ನು ನಾನು ಧಿಕ್ಕರಿಸುತ್ತೇನೆ. ದೇಹದಾಚೆಗೂ ಹೆಣ್ಣಿನಲ್ಲಿ ಮಿಗಿಲಾದ ವ್ಯಕ್ತಿತ್ವವಿದೆ ಎಂದು 12 ನೇ ಶತಮಾನದಲ್ಲೆ ಅಕ್ಕ ಮಹಾದೇವಿ ಅವರು ಪ್ರತಿಪಾದಿಸಿದರು ಎಂದು ಪ್ರೊ.ವಿನೋದಮ್ಮ ಹೇಳಿದರು.

ಹೊಸಮಠದ 19ನೇ ಪೀಠಾಧ್ಯಕ್ಷರಾದ ಲಿಂಗೈಕ್ಯ ವಿದ್ವಾನ್ ಶ್ರೀ ಗುರುಶಾಂತ ಸ್ವಾಮೀಜಿ ಅವರ 30ನೇ ಪುಣ್ಯಾರಾಧನೆ ಅಂಗವಾಗಿ ಕರ್ತೃ ಗುದ್ದುಗೆಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಹಲವು ಮಠಾಧೀಶರು ಭಾಗವಹಿಸಿದ್ದರು.

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಶ್ರೀ ಬೆಟ್ಟದ ಮಠದ ಮದ್ಗಾರಲಿಂಗಯ್ಯ ಹುಂಡಿಯ ಶ್ರೀ ಗೌರಿಶಂಕರಸ್ವಾಮೀಜಿ ಈ ವೇಳೆ ಆಶೀರ್ವಚನ ನೀಡಿದರು. ಹೊಸಮಠದ ಶ್ರೀ ಚಿದಾನಂದಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಹೆಚ್ಚುವರಿ ವಿದ್ಯುತ್ ಲೈನ್‌ಗಳಿಗಾಗಿ ಮರಗಳ ಹನನ ಮಾಡದಂತೆ ಎಂಜೆಪಿ ಮನವಿ



ನೂರಾರು ಮರಗಳ ಹನನ ಮಾಡದಂತೆ ಕೆಪಿಟಿಸಿಎಲ್ ಅಧಿಕಾರಿಗಳಿಗೆ, ಎಂಜೆಪಿ ಕಾರ್ಯಕರ್ತರು ಮನವಿ ಮಾಡಿದ್ದಾರೆ

ಮೈಸೂರು, ಏ.28(ಎಸ್‌ಪಿಎನ್)– ಮೈಸೂರು ದಟ್ಟಗಳ್ಳಿಯಲ್ಲಿ ಹೆಚ್ಚುವರಿ ವಿದ್ಯುತ್ ಪೂರೈಕೆಗಾಗಿ ಕಂಬಗಳನ್ನು ನೆಡಲು ಕೆಪಿಟಿಸಿಎಲ್ ಮುಂದಾಗಿದೆ. ಇದಕ್ಕಾಗಿ ನೂರಾರು ಮರಗಳ ಹನನ ಮಾಡದಂತೆ ಕೆಪಿಟಿಸಿಎಲ್ ಅಧಿಕಾರಿಗಳಿಗೆ, ಎಂಜೆಪಿ ಕಾರ್ಯಕರ್ತರು ಸೋಮವಾರ ಮನವಿ ಮಾಡಿದ್ದಾರೆ.

ದಟ್ಟಗಳ್ಳಿ ಮಾರ್ಗದ ಮಾಂಗಲ್ಯ ಸಂಗಮ ಕಲ್ಯಾಣ ಮಂಟಪ ಮುಂಭಾಗದ ರಸ್ತೆಯಲ್ಲಿ 195 ಮರಗಳನ್ನು ಕಡಿಯಲು ಕೆಪಿಟಿಸಿಎಲ್, ಮಾರ್ಕ್ ಮಾಡಿದೆ. ಹಾಗಾಗಿ ಈ ಮರಗಳನ್ನು ಹಾಗೆಯೇ ಉಳಿಸಿಕೊಂಡು ಹೆಚ್ಚುವರಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮೈಸೂರು ಗ್ರಾಹಕ ಪರಿಷತ್ ಸಂಚಾಲಕ ದಯಾನಂದ ಸಾಗರ್, ಸದಸ್ಯರಾದ ಶೋಭಾ ಸಾಂಬಶಿವನ್, ಪರಿಸರವಾದಿ ಭಾನುಮೋಹನ್ ನೇತೃತ್ವದ ತಂಡ, ಕೆಪಿಟಿಸಿಎಲ್ ಅಧೀಕ್ಷಕ ಅಭಿಯಂತರ ರಮೇಶ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಈ ಮರಗಳ ಹನನ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಪರ್ಯಾಯಕ್ಕಾಗಿ ಪತ್ರ ಬರೆಯಲಾಗಿದೆ. ಈ ಸಂಬಂಧ ಇವೆರಡು ಇಲಾಖಾ ಅಧಿಕಾರಿಗಳು ಮುಂದಿನ ದಿನಾಂಕದಲ್ಲಿ ಸಾರ್ವಜನಿಕರ ಸಭೆ ಕರೆದು ಚರ್ಚಿಸಲಾಗುವುದು ಎಂದು ಮೌಖಿಕವಾಗಿ ತಿಳಿಸಿದ್ದು, ಅಲ್ಲಿಯವರೆಗೆ ಮರಗಳನ್ನು ಹನನ ಮಾಡುವುದಿಲ್ಲ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಸಂಚಾಲಕ ಡಿ.ವಿ.ದಯಾನಂದ ಸಾಗರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಹೆಚ್ಚುವರಿ ವಿದ್ಯುತ್ ಪೂರೈಕೆಗಾಗಿ ಬೃಹತ್ ಮರಗಳನ್ನು ಉಳಿಸಿಕೊಳ್ಳಲು ಆಧುನಿಕ ತಂತ್ರಜ್ಞಾನ ಉಪಯೋಗಿಸಿ, ಕೆಪಿಟಿಸಿಎಲ್ ಕಂಬಗಳನ್ನು ನೆಟ್ಟರೆ ನಮ್ಮ ಅಭ್ಯಂತರ ವಿಲ್ಲ ಎಂದು ಪರಿಸರವಾದಿ ಭಾನುಮೋಹನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೇನೆಗೆ ದೇಣಿಗೆ ಕುರಿತಾದ ದಾರಿ ತಪ್ಪಿಸುವ ವಾಟ್ಸಾಪ್ ಸಂದೇಶ

ಕೇಂದ್ರ ಎಚ್ಚರಿಕೆ

ನವದೆಹಲಿ: ಭಾರತೀಯ ಸೇನೆಯ ಆಧುನೀಕರಣಕ್ಕಾಗಿ ಸರ್ಕಾರವು ದೇಣಿಗೆ ಕೋರಿ ಬ್ಯಾಂಕ್ ಖಾತೆಯನ್ನು ತೆರೆದಿದೆ ಎಂದು ಹೇಳುವ 'ದಾರಿ ತಪ್ಪಿಸುವ' ಸಂದೇಶವು ವಾಟ್ಸಾಪ್‌ನಲ್ಲಿ ಹರಿದಾಡುತ್ತಿದೆ ಎಂದು ರಕ್ಷಣಾ ಸಚಿವಾಲಯ ಎಚ್ಚರಿಸಿದೆ.

ಇದು ನಕಲಿ ಸಂದೇಶವಾಗಿದ್ದು, ಜಾಗರೂಕರಾಗಿರಿ, ಅಂತಹ ಮೋಸದ ಸಂದೇಶಗಳಿಗೆ ಬಲಿಯಾಗಬೇಡಿ ಎಂದು ಜನರನ್ನು ಸಚಿವಾಲಯ ಎಚ್ಚರಿಸಿದೆ.

ಭಾರತೀಯ ಸೇನೆಯ ಆಧುನೀಕರಣಕ್ಕಾಗಿ ಮತ್ತು ಕಾರ್ಯಾಚರಣೆಯಲ್ಲಿ ಗಾಯಗೊಂಡ ಅಥವಾ ಹುತಾತ್ಮರಾದ ಸೈನಿಕರ ಕುಟುಂಬಗಳ ಕಲ್ಯಾಣಕ್ಕಾಗಿ ನಿರ್ದಿಷ್ಟ ಬ್ಯಾಂಕ್ ಖಾತೆಗೆ ದೇಣಿಗೆ ನೀಡುವ ಬಗ್ಗೆ ವಾಟ್ಸಾಪ್‌ನಲ್ಲಿ ದಾರಿ ತಪ್ಪಿಸುವ ಸಂದೇಶವು ಹರಿದಾಡುತ್ತಿದೆ ಎಂದು ಹೇಳಿಕೆ ತಿಳಿಸಿದೆ.

ಸಚಿವ ಸಂಪುಟ ನಿರ್ಧಾರ ಕೈಗೊಂಡಿದೆ ಎಂದು ಸುಳ್ಳು ವಿವರ ನೀಡಲಾಗಿದೆ. ನಟ ಅಕ್ಷಯ್ ಕುಮಾರ್ ಅವರ ಹೆಸರನ್ನು ಈ ಪ್ರಸ್ತಾವನೆಯ ಪ್ರಮುಖ ಪ್ರೇರಕ ಎಂದು ಉಲ್ಲೇಖಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಸಂದೇಶದಲ್ಲಿ ನೀಡಲಾದ ಬ್ಯಾಂಕ್ ಖಾತೆಯ ವಿವರಗಳು ಸುಳ್ಳು ಎಂದು ಅದು ಹೇಳಿದೆ. ಸರ್ಕಾರವು ಸಕ್ರಿಯ ಯುದ್ಧ ಕಾರ್ಯಾಚರಣೆಗಳಲ್ಲಿ ಹುತಾತ್ಮರಾದ ಅಥವಾ ಅಂಗವಿಕಲರಾದ ಸೈನಿಕರಿಗಾಗಿ ಹಲವು ಕಲ್ಯಾಣ ಯೋಜನೆಗಳನ್ನು ಪ್ರಾರಂಭಿಸಿದೆ ಎಂದು ಸಚಿವಾಲಯ ಹೇಳಿದೆ.

2020ರಲ್ಲಿ ಕೇಂದ್ರ ಸರ್ಕಾರವು 'ಸಶಸ್ತ್ರ ಪಡೆಗಳ ಯುದ್ಧ ಅಪಘಾತ ಕಲ್ಯಾಣ ನಿಧಿಯನ್ನು ಸ್ಥಾಪಿಸಿತ್ತು. ಇದನ್ನು ಸಕ್ರಿಯ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಹುತಾತ್ಮರಾದ ಅಥವಾ ತೀವ್ರವಾಗಿ ಗಾಯಗೊಂಡ ಭೂಸೇನೆ, ವಾಯುಸೇನೆ ಮತ್ತು ನೌಕಾಪಡೆಯ ಸಿಬ್ಬಂದಿ ಕುಟುಂಬಗಳಿಗೆ ತಕ್ಷಣದ ಆರ್ಥಿಕ ನೆರವು ನೀಡಲು ಬಳಸಲಾಗುತ್ತದೆ ಎಂದು ಅದು ಹೇಳಿದೆ.

PIB ಸಹ ಫ್ಯಾಕ್ಟ್ ಚೆಕ್ ಅನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಈ ದಾರಿ ತಪ್ಪಿಸುವ ಸಂದೇಶದ ಬಗ್ಗೆ ಜನರನ್ನು ಎಚ್ಚರಿಸಿದೆ.

ಎಲ್ಲ ಕಾಲಕ್ಕೂ ಸಲ್ಲುವವರು ಆದಿ ಶಂಕರಾಚಾರ್ಯರು

ಖ್ಯಾತ ವಾಗ್ಮಿ ರಮ್ಯಾ ಅಭಿಮತ

ಮೈಸೂರು, ಏ.28(ಎಸ್‌ಪಿಎನ್)– ಆದಿಶಂಕರಾಚಾರ್ಯರು ಎಲ್ಲ ಕಾಲಕ್ಕೂ ಸಲ್ಲುವ ಉತ್ತಮ ದಾರ್ಶನಿಕ, ಕವಿ ಹೃದಯದವರು ಎಂದು ಬೆಂಗಳೂರಿನ ಖ್ಯಾತ ವಾಗ್ಮಿ ರಮ್ಯಾ ಅಭಿಪ್ರಾಯಪಟ್ಟರು.

ಮೈಸೂರು ಫೋರ್ಟ್ ಮೊಹಲ್ಲಾದ ಶೃಂಗೇರಿ ಶ್ರೀ ಶಂಕರ ಮಠದ ಶ್ರೀ ಸಚ್ಚಿದಾನಂದ ವಿಲಾಸದಲ್ಲಿ ಅಭಿನವ ಶಂಕರಾಲಯದ ವತಿಯಿಂದ ಆಯೋಜಿಸಿರುವ ನಾಲ್ಕು ದಿನಗಳ ಶ್ರೀ ಶಂಕರ ಜಯಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸದಲ್ಲಿ 'ಅದ್ವೈತ ಮತ್ತು ಶಂಕರ ವೇದಾರ್ಥದ ಬೆಳಕಿನಲ್ಲಿ' ವಿಷಯ ಕುರಿತು ಮಾತನಾಡಿದರು.



'ಅದ್ವೈತ ಮತ್ತು ಶಂಕರ ವೇದಾರ್ಥದ ಬೆಳಕಿನಲ್ಲಿ' ವಿಷಯ ಕುರಿತ ಕಾರ್ಯಕ್ರಮವನ್ನು ಖ್ಯಾತ ವಾಗ್ಮಿ ರಮ್ಯಾ ಉದ್ಘಾಟಿಸಿದರು.

ಅದ್ವೈತ ಸಿದ್ಧಾಂತ ಜಗತ್ತಿನ ಪ್ರಾಚೀನ ಸಿದ್ಧಾಂತಗಳಲ್ಲಿ ಪ್ರಮುಖವಾದುದು. ಅದ್ವೈತ ಸಿದ್ಧಾಂತಕ್ಕೆ ಒಂದು ತಾತ್ತ್ವಿಕ ನೆಲಗಟ್ಟು ಒದಗಿಸಿ, ಅದನ್ನು ದರ್ಶನ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಆದಿ ಶಂಕರರ ಪಾತ್ರ ಮಹತ್ವದ್ದು. ಅಲ್ಲದೆ, ಆದಿ ಶಂಕರಾಚಾರ್ಯರು ತಮ್ಮ ಎಂಟನೇ ವಯಸ್ಸಿನಲ್ಲೇ ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ್ದರು. ಹನ್ನೆರಡನೇ ವಯಸ್ಸಿಗೆ ಸಮಗ್ರಶಾಸ್ತ್ರವನ್ನು ಕಲಿತು ಲೋಕ ಸಂಚಾರ ಕೈಗೊಂಡ ಪ್ರಸಂಗವನ್ನು ವಿವರಿಸಿದರು.

'ಅದ್ವೈತ'ವೆಂದರೆ ಎರಡಿಲ್ಲದ್ದು. ಅಂದರೆ 'ಒಂದೇ' ಆಗಿರುವುದು. ಜೀವಿಯಲ್ಲಿರುವ ಆತ್ಮನೂ, ಪರಮ ಸತ್ಯವಾದ ಬ್ರಹ್ಮ ಚೈತನ್ಯವೂ ಒಂದೇ ಆಗಿರುವುದೆಂದು ಅದರ ಸಾರ. ಈ ರೀತಿಯ ಭೇದವನ್ನು ತಿರಸ್ಕರಿಸಿರುವ ಕಾರಣ ಈ ಸಿದ್ಧಾಂತವನ್ನು ಅಭೇದ ಸಿದ್ಧಾಂತವೆಂದೂ ಕರೆಯಲಾಗುತ್ತದೆ ಎಂದರು.

ಆದಿ ಶಂಕರಾಚಾರ್ಯರು ಬರೆದ ಅತ್ಯಂತ ಜನಪ್ರಿಯ ಕೃತಿ 'ಬ್ರಹ್ಮ ಸೂತ್ರ ಭಾಷ್ಯ'. ಈ ಕೃತಿಯಲ್ಲಿ ತಾರ್ಕಿಕ ಸಮಂಜಸತೆ, ಉಜ್ವಲ ದಾರ್ಶನಿಕ ಪ್ರತಿಭೆ, ಮನೋಹರ ಶೈಲಿಗಳ ಸಂಗಮವಿದೆ. ಹಾಗೆಯೇ ಉಪನಿಷತ್ ಮತ್ತು ಭಗವದ್ಗೀತೆಗಳ ಮೇಲಿನ ಅವರ ಭಾಷ್ಯಗಳ ನಿರೂಪಣೆ, ಅಸಾಧಾರಣ ತರ್ಕಕ್ಕೆ ಪ್ರಸಿದ್ಧಿ, ಜನಪ್ರಿಯತೆ ಪಡೆದಿದೆ ಎಂದರು. ವೇದಿಕೆಯಲ್ಲಿ ಬೆಂಗಳೂರಿನ ವಿದ್ವಾನ್ ಜೆ.ಬಿ.ಹರೀಶ್, ಅಭಿನವ ಶಂಕರಾಲಯದ ನಿರ್ವಾಹಕ ಎಸ್.ಎನ್. ಶೇಷಾದ್ರಭಟ್ ಸೇರಿದಂತೆ ಇತರರಿದ್ದರು.

ಕಂಟೇನರ್‌ಗೆ ಕಾರು ಡಿಕ್ಕಿ: ತಿರುಪತಿಯಿಂದ ಬೆಂಗಳೂರಿಗೆ ಬರುತ್ತಿದ್ದ ಐವರು ಸಾವು

ತಿರುಪತಿ: ಆಂಧ್ರಪ್ರದೇಶದ ತಿರುಪತಿ ಜಿಲ್ಲೆಯಲ್ಲಿ ಸೋಮವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೆಂಗಳೂರಿನ ಐವರು ಸಾವನ್ನಪ್ಪಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ.

ಕಾಣಿಪಾಕಂ ಸಮೀಪದ ತೋತಾಪಲ್ಲಿ ಬಳಿ ವೇಗವಾಗಿ ಚಲಿಸುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಹಿಂಬದಿಯಿಂದ ಕಂಟೇನರ್ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಭೀಕರ ಅಪಘಾತದಲ್ಲಿ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಮೃತಪಟ್ಟವರೆಲ್ಲ ಬೆಂಗಳೂರು ಮೂಲದವರು ಎಂದು ತಿಳಿದುಬಂದಿದೆ. ಇಬ್ಬರು ಪುರುಷರು, ಇಬ್ಬರು ಮಹಿಳೆಯರು, ಓರ್ವ ಮಗು ಮೃತಪಟ್ಟಿದೆ. ಇಬ್ಬರಿಗೆ ಗಂಭೀರ ಗಾಯವಾಗಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ತಿರುಪತಿಯಿಂದ ಬೆಂಗಳೂರಿಗೆ ವಾಪಸಾಗುತ್ತಿದ್ದ ಎರಿಟಿಗಾ ಕಾರು, ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಲಾರಿ ಡಿಕ್ಕಿಯಾದ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

ಗಣತಿದಾರ ಶಿಕ್ಷಕರಿಗೆ ಗಳಿಕೆ ರಜೆ, ಹೆಚ್ಚು ಗೌರವ ಧನ ನೀಡಿ

ಎಂಎಲ್‌ಸಿ ವಿವೇಕಾನಂದ ಆಗ್ರಹ




ಮೈಸೂರು, ಏ.28(ಬಿಎಲ್‌ಯು)– ನ್ಯಾಯಮೂರ್ತಿ ಡಾ.ಹೆಚ್.ಎನ್.ನಾಗಮೋಹನ್ ದಾಸ್ ಆಯೋಗ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಸಮೀಕ್ಷೆಗೆ 60 ಸಾವಿರ ಶಿಕ್ಷಕರನ್ನು ಗಣತಿದಾರರನ್ನಾಗಿ ನಿಯೋಜಿಸಿದೆ. ಈ ಹಿನ್ನೆಲೆ ಶಿಕ್ಷಕರಿಗೆ ಗಳಿಕೆ ರಜೆ ಹಾಗೂ ಹೆಚ್ಚು ಗೌರವಧನ ನೀಡಬೇಕೆಂದು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ವಿವೇಕಾನಂದ ಅವರು, ಸಮೀಕ್ಷೆ ಮಾಡುವ ಮುನ್ನ ಸರ್ಕಾರ ಈ ಆದೇಶ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಅವಶ್ಯಕತೆ ಇದ್ದರೆ ಮಾತ್ರ ಶಿಕ್ಷಕರನ್ನು ಗಣತಿದಾರರನ್ನಾಗಿ ನಿಯೋಜನೆ ಮಾಡಬೇಕೆಂದು ಮನವಿ ಮಾಡಿದ್ದಾರೆ.

ಮೇ 2 ರಂದು ಶ್ರೀ ಶಂಕರಾಚಾರ್ಯ ಜಯಂತಿ

ಮೈಸೂರು,ಏ.28– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಮೇ 2 ರಂದು ಬೆಳಗ್ಗೆ 11.30 ಗಂಟೆಗೆ ಕರ್ನಾಟಕ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.



ಶ್ರೀ ರಾಮಕೃಷ್ಣ ಆಶ್ರಮದ ವಿವೇಕಪ್ರಭ ಮಾಸ ಪತ್ರಿಕೆಯ ಸಂಪಾದಕ ಶ್ರೀ ಸ್ವಾಮಿ ಜ್ಞಾನಯೋಗಾನಂದ ಮಹಾರಾಜ್ ಅವರ ದಿವ್ಯ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆವೆಂಕಟೇಶ್, ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್ ಅವರು ಆಗಮಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತೀಂದ್ರ ಎಸ್. ಮತ್ತು ವಿವೇಕಾನಂದ ಎಸ್. ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಪ್ರೌಢಶಾಲಾ ಸಂಸ್ಕೃತ (ನಿವೃತ್ತ) ಶಿಕ್ಷಕಿ, ಪಾರಂಗತ ಉಪನ್ಯಾಸಕಿ, ವಿದುಷಿ ಎಂ.ಸಿ ನಾಗಲಕ್ಷ್ಮಿ ಉಪನ್ಯಾಸ ಮಾಡಲಿದ್ದಾರೆ.

ಪರಿಶಿಷ್ಟ ಜಾತಿಯ ಪ್ರತಿ ಮನೆಯಲ್ಲಿ ಜಾತಿ ಗಣತಿ ಸಮೀಕ್ಷೆ ಮಾಡಿ

ತರಬೇತಿಯಲ್ಲಿ ಪ್ರಾಧ್ಯಾಪಕ ಪಿ.ಎಲ್.ಶಿವಕುಮಾರ್ ಸಲಹೆ

ಮೈಸೂರು,ಏ.28– ಪರಿಶಿಷ್ಟ ಜಾತಿಯ ಪ್ರತಿ ಮನೆಗಳಲ್ಲಿಯೂ ಜಾತಿ ಗಣತಿ ಸಮೀಕ್ಷೆಯನ್ನು ಮಾಡಬೇಕು. ಪ್ರತಿಯೊಬ್ಬರನ್ನು ಒಳಗೊಂಡಂತೆ ಸಮೀಕ್ಷೆ ಇರಬೇಕು ಎಂದು ಮೈಸೂರಿನ ಮಹಿಳಾ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಧ್ಯಾಪಕ ಪಿ.ಎಲ್.ಶಿವಕುಮಾರ್ ಹೇಳಿದರು.

ಇಂದು ಜಿಲ್ಲಾ ಪಂಚಾಯತ್ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಸಮಿತಿ ತರಬೇತಿಯಲ್ಲಿ ಜಾತಿ ಗಣತಿ ಸಮೀಕ್ಷೆ ಕುರಿತು ಅವರು ಮಾತನಾಡಿದರು.

ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂಬ ಮೂರು ಜಾತಿಗಳು ಇದ್ದು ಅದರಲ್ಲಿ 101 ಉಪ ಜಾತಿಗಳು ಬರುತ್ತವೆ. ಅದರಲ್ಲಿ ಆದಿ ಕರ್ನಾಟಕ ಅಂತ ಬಂದಾಗ ಅವರಲ್ಲಿ 98 ಉಪ ಜಾತಿ ಇರುವುದರಿಂದ 98 ಉಪ ಜಾತಿಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿರುತ್ತಾರೆ. ಅದನ್ನು ತಿಳಿದುಕೊಂಡು ಜಾತಿಗಣತಿ ಮಾಡಬೇಕು. 98 ಉಪ ಜಾತಿಯಲ್ಲಿ ಯಾವುದು ಎಂದು ಗೊತ್ತಿಲ್ಲದಾಗ ತಿಳಿದಿಲ್ಲ ಎಂದು ನೋಂದಣಿ ಮಾಡಬೇಕು ಎಂದು ಹೇಳಿದರು.

ಗಣತಿದಾರರು ನಿಖರವಾಗಿ ಮನೆ ಮನೆಗೆ ಹೋಗಿ ಸೌಹಾರ್ದಯುತವಾಗಿ, ನಗುಮುಖದಿಂದ ನಡೆದುಕೊಳ್ಳಬೇಕು. ಸಮೀಕ್ಷೆ ಮಾಡುವಾಗ ಕುಟುಂಬದಲ್ಲಿ ಇರುವಂತವರಿಂದಲೇ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಕೆಲವರು ಕುಳಿತಲ್ಲಿಯೇ ಮಾಹಿತಿಯನ್ನು ಸಂಗ್ರಹಿಸುತ್ತಾರೆ ಇದನ್ನ ಮಾಡಬಾರದು. ಆ ಕುಟುಂಬದವರಿಂದಲೇ ಮಾಹಿತಿಯನ್ನು ತೆಗೆದುಕೊಂಡು ಯಾರು ಮಾಹಿತಿ ನೀಡಿರುತ್ತಾರೆ ಅವರ ಭಾವಚಿತ್ರವನ್ನು ತೆಗೆದುಕೊಳ್ಳಬೇಕು. ಇದರಿಂದ ಯಾರು ಮಾಹಿತಿ ಕೊಟ್ಟಿದ್ದಾರೆ ಎಂಬುದು ತಿಳಿಯುತ್ತದೆ ಎಂದು ತಿಳಿಸಿದರು.

ಗಣತಿಗಾಗಿಯೇ ಆ್ಯಪ್ ಅನ್ನು ಕ್ರಿಯೇಟ್ ಮಾಡಲಾಗಿದ್ದು, ಆಂಡ್ರಾಯ್ಡ್ ಫೋನ್ ಮೂಲಕ ಡೌನ್ಲೋಡ್ ಮಾಡಿಕೊಂಡು ಅದರಂತೆ ಗಣತಿ ಮಾಡಬೇಕಾಗುತ್ತದೆ. ಗಣತಿದಾರರಿಗೆ ಮಾತ್ರ ಆ್ಯಪ್ ಅನ್ನು ಕಳಿಸಲಾಗುತ್ತದೆ. ಗಣತಿದಾರರಿಗೆ ಬೆಳಗ್ಗೆ 6.30 ರಿಂದ ಸಂಜೆ 6.30ರ ವರೆಗೆ ಸಮಯ ನಿಗದಿಪಡಿಸಲಾಗಿರುತ್ತದೆ. ಲಾಗಿನ್ ಆಗಿದ ನಂತರ ಸಮಯ ಮುಗಿದ ಮೇಲೆ ಅದೇ ಲಾಗ್‌ಔಟ್ ಆಗುತ್ತದೆ. ಅಲ್ಲಿಯವರೆಗೆ ಸಮೀಕ್ಷೆ ಮಾಡಬೇಕು ಎಂದು ತಿಳಿಸಿದರು.

ಜಾತಿ ಗಣತಿಯು ರೇಷನ್ ಕಾರ್ಡ್ ನಂಬರ್ ಮೂಲಕ ಮಾಡಲಾಗುತ್ತದೆ. ರೇಷನ್ ಕಾರ್ಡ್ ಹೊಂದಿಲ್ಲದೆ ಇರುವವರಿಗೆ ಆಧಾರ್ ಕಾರ್ಡ್ ಮೂಲಕ ಅವರ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಬೇರೆ ಅವರು ಪರಿಶಿಷ್ಟ ಜಾತಿ ಎಂದು ಸುಳ್ಳು ಹೇಳಿ ಮಾಹಿತಿಯನ್ನು ನೀಡುವುದರಿಂದ ಸಮೀಕ್ಷೆಯಲ್ಲಿ ಅವರು ಎಸ್.ಸಿ ಎಂದು ತಿಳಿದು ಬಂದರೆ ಮಾತ್ರ ಸಮೀಕ್ಷೆ ಮುಂದುವರಿಸಬೇಕು ಎಂದರು.

ತರಬೇತಿ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಮಹಾನಗರ ಪಾಲಿಕೆಯ ಆಯುಕ್ತ ಸೋಮಶೇಖರ್, ಉಪ ಆಯುಕ್ತ ದಾಸೇಗೌಡ, ಡಿಡಿಪಿಐನ ಜವರೇಗೌಡ, ಎಲ್ಲಾ ಬಿ. ಇ. ಓ.ಗಳು, ಸೇವಾ ಸಿಂಧು ಪೋರ್ಟಲ್‌ನ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕ ಎಂ.ಚೇತನ್, ಸಾಲಿಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಧ್ಯಾಪಕ ಮುರುಳಿ, ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಕಾಲೇಜಿನ ಶಿಕ್ಷಕರು ಉಪಸ್ಥಿತರಿದ್ದರು.

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ವರದಿ ಜಾರಿಗೆ ಆಗ್ರಹಕ್ಕೆ ಇಂದು ಅಂಚೆ ಕಾರ್ಡ್ ಅಭಿಯಾನ

ಮೈಸೂರು, ಏ.28(ಎಸ್‌ಪಿಎನ್)– ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ, ಜಾರಿಮಾಡಲು ಉದ್ದೇಶಿಸಿದೆ. ಆದರೆ, ಈ ವರದಿಯನ್ನು ಆಡಳಿತ ಪಕ್ಷದ ಕೆಲವು ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರು ಹಾಗೂ ಮುಖಂಡರು ವಿರೋಧಿಸುತ್ತಿದ್ದಾರೆ.

ಹಾಗಾಗಿ ಈ ವರದಿಯನ್ನು ವಿರೋಧಿಸುವ ಕಾಂಗ್ರೆಸ್ ಶಾಸಕರಿಗೆ ನಿರ್ದೇಶನ ನೀಡುವಂತೆ ಒತ್ತಾಯಿಸಿ ಎಐಸಿಸಿಯ ಹಿರಿಯ ಮುಖಂಡ ರಾಹುಲ್ ಗಾಂಧಿ ಅವರಿಗೆ ಪತ್ರದ ಮೂಲಕ ಮೈಸೂರು ರಾಮಸ್ವಾಮಿ ವೃತ್ತದಲ್ಲಿನ ಅಂಚೆಪೆಟ್ಟಿಗೆ ಬಳಿ ಅಂಚೆಕಾರ್ಡ್ ಅಭಿಯಾನವನ್ನು ಮಂಗಳವಾರ ಬೆಳಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದ್ಮ ಪ್ರಶಸ್ತಿ ಸ್ವೀಕರಿಸಿದ ನಟ ಅಜಿತ್ ಕುಮಾರ್, ಬಾಲಯ್ಯ

ನವದೆಹಲಿ: ಸೋಮವಾರ ಏಪ್ರಿಲ್ 28ರಂದು 2025ರ ಪದ್ಮ ಪ್ರಶಸ್ತಿಗಳನ್ನು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನೀಡಲಾಯಿತು. ನಂದಮೂರಿ ಬಾಲಕೃಷ್ಣ, ಅಜಿತ್ ಕುಮಾರ್, ಶೇಖರ್ ಕಪೂರ್, ಅರಿಜಿತ್ ಸಿಂಗ್ ಮತ್ತು ರಿಕಿ ಕೇಜ್ ಅವರಂತಹ ಗಣ್ಯರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿಗಳನ್ನು ಪಡೆದರು. ಪಂಕಜ್ ಉದಾಸ್ ಅವರನ್ನು ಮರಣೋತ್ತರವಾಗಿ ಗೌರವಿಸಲಾಯಿತು.

ದೇಶದಾದ್ಯಂತದ ಭಾರತೀಯ ಗಣ್ಯರು ತಮ್ಮ ಪದ್ಮ ಪ್ರಶಸ್ತಿಗಳನ್ನು ಸ್ವೀಕರಿಸಲು ಸಮಾರಂಭದಲ್ಲಿ ಭಾಗವಹಿಸಿದ್ದರು. ನಂದಮೂರಿ ಬಾಲಕೃಷ್ಣ ಅವರು ತಮ್ಮ ಪದ್ಮಭೂಷಣವನ್ನು ಸ್ವೀಕರಿಸಲು ಆಂಧ್ರಪ್ರದೇಶದ ಸಾಂಪ್ರದಾಯಿಕ ಉಡುಪನ್ನು ಧರಿಸಿದ್ದರೆ, ಅಜಿತ್ ಕುಮಾರ್ ಅವರು ಸೂಟ್ ಧರಿಸಿ ಬಂದರು.

ಶೇಖರ್ ಕಪೂರ್ ಮತ್ತು ಶೋಭನಾ ಕೂಡ ಪದ್ಮಭೂಷಣವನ್ನು ಪಡೆದರು. ಆದರೆ ಪಂಕಜ್ ಉದಾಸ್ ಅವರ ಪತ್ನಿ ಅವರ ಗೌರವಾರ್ಥವಾಗಿ ಪ್ರಶಸ್ತಿಯನ್ನು ಸ್ವೀಕರಿಸಿದರು.



ರಾಷ್ಟ್ರಪತಿಗಳಿಂದ ಪದ್ಮ ಪ್ರಶಸ್ತಿ ಸ್ವೀಕರಿಸುತ್ತಿರುವ ನಟ ಅಜಿತ್ ಕುಮಾರ್, ಬಾಲಕೃಷ್ಣ.

ಪದ್ಮಶ್ರೀ ಪ್ರಶಸ್ತಿಯನ್ನು ಅರಿಜಿತ್ ಸಿಂಗ್ ಮತ್ತು ರಿಕಿ ಕೇಜ್ ಅವರಿಗೆ ನೀಡಲಾಯಿತು. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಯೂಟ್ಯೂಬ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು. ಕ್ರೀಡೆ, ವೈದ್ಯಕೀಯ, ವ್ಯವಹಾರ ಮತ್ತು ಇತರ ಕ್ಷೇತ್ರಗಳ ಹಲವಾರು ಇತರರಿಗೆ ಸೋಮವಾರ ಪ್ರಶಸ್ತಿಗಳು ದೊರೆತವು.

ಜನವರಿಯಲ್ಲಿ ಪ್ರಶಸ್ತಿಗಳನ್ನು ಘೋಷಿಸಿದಾಗ, ಅಜಿತ್ ಒಂದು ಹೇಳಿಕೆಯನ್ನು ಬಿಡುಗಡೆ ಮಾಡಿದರು. "ಭಾರತದ ರಾಷ್ಟ್ರಪತಿಗಳಿಂದ ಗೌರವಾನ್ವಿತ ಪದ್ಮ ಪ್ರಶಸ್ತಿಯನ್ನು ಸ್ವೀಕರಿಸಲು ನನಗೆ ತುಂಬಾ ಸಂತೋಷ ಮತ್ತು ಗೌರವವಿದೆ. ಈ ಪ್ರತಿಷ್ಠಿತ ಗೌರವಕ್ಕಾಗಿ ಭಾರತದ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಮತ್ತು ಗೌರವಾನ್ವಿತ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರಿಗೆ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅಂತಹ ಮಟ್ಟದಲ್ಲಿ ಗುರುತಿಸಲ್ಪಟ್ಟಿರುವುದು ಒಂದು ಸೌಭಾಗ್ಯ ಮತ್ತು ನಮ್ಮ ರಾಷ್ಟ್ರಕ್ಕೆ ನನ್ನ ಕೊಡುಗೆಗಳನ್ನು ಉದಾರವಾಗಿ ಗುರುತಿಸಿದ್ದಕ್ಕಾಗಿ ನಾನು ನಿಜವಾಗಿಯೂ ಕೃತಜ್ಞನಾಗಿದ್ದೇನೆ ಎಂದು ಧನ್ಯವಾದ ಹೇಳಿದ್ದರು.

ಶೇಖರ್ X ನಲ್ಲಿ ಪೋಸ್ಟ್ ಮಾಡಿದ್ದರು. ಎಂತಹ ಗೌರವ! ಭಾರತ ಸರ್ಕಾರವು ನನ್ನನ್ನು ಪದ್ಮಭೂಷಣಕ್ಕೆ ಅರ್ಹನೆಂದು ಪರಿಗಣಿಸಿದೆ ಎಂದು ನನಗೆ ಸಂತೋಷವಿದೆ. ಈ ಪ್ರಶಸ್ತಿಯು ನಾನು ಭಾಗವಾಗಿರುವ ಉದ್ಯಮಕ್ಕೆ ಮತ್ತು ನನ್ನ ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಹೆಚ್ಚು ಶ್ರಮಿಸುವಂತೆ ಮಾಡುತ್ತದೆ ಎಂದು ಆಶಿಸುತ್ತೇನೆ. ಭಾರತದ ನಮ್ಮ ಚಲನಚಿತ್ರ ಪ್ರೇಕ್ಷಕರಿಗೂ ಧನ್ಯವಾದಗಳು, ಏಕೆಂದರೆ ನಾನಿಲ್ಲಿರುವುದಕ್ಕೆ ನೀವು ಕಾರಣ ಎಂದು ಬರೆದಿದ್ದರು.